ಐಕ್ಯರಂಗ

ಮೇ ವಿಶೇಷಾಂಕ—2
1987

• ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ; ಸಂಚಿಕೆ 21-23 ಜೂನ್ 7, 1987 ಬೆಲೆ ರೂ. 1-00

"ಕೇರಳ ಉಪಚುನಾವಣೆಗಳು"

ಕೇರಳದ ಮತದಾರರು ಕಾಂಗ್ರೆಸ್ (ಐ) ನೇತೃತ್ವದ ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ, ನಾಯರ್, ಇಳವಾ ಕೋಮು ಶಕ್ತಿಗಳ ಅಪವಿತ್ರ ಕೂಟವನ್ನು ನಿರ್ದಾಯಕವಾಗಿ ತಿರಸ್ಕರಿಸಿ ಬಿಟ್ಟಿದ್ದಾರೆ. ಜೂನ್ 2 ರಂದು ಕೊಟ್ಟಾಯಂ ಹಾಗೂ ವಾಮನಪುರಂ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಮಹತ್ವಪೂರ್ಣ ಉಪಚುನಾವಣೆಗಳ ಫಲಿತಾಂಶ ಇದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

ಅವರನ್ನು 10,116 ಮತಗಳಿಂದ ಪರಾಭವಗೊಳಿಸಿದ್ದಾರೆ. ಕಾ॥ ನಾಯರ್ ಸತತವಾಗಿ ಮೂರನೇ ಬಾರಿ ಈ ಕ್ಷೇತ್ರದಿಂದ ಆರಿಸಿ ಬಂದಿದ್ದಾರೆ.

ಕೇರಳದ 140 ಸದಸ್ಯರುಳ್ಳ ಈಗ ವಿಧಾನ ಸಭೆಯಲ್ಲಿ ಎಲ್. ಡಿ. ಎಫ್. ಬಲ 79 ಕ್ಕೇರಿದೆ : ಸಿ. ಪಿ. ಐ(ಎಂ)ನ ಬಲ 38ಕ್ಕೇರಿದೆ.

ಸಶಸ್ತ್ರ ಪಡೆ(ಪಿ.ಎ.ಸಿ.)ಗಳು ನಗ್ನ "ಹಿಂದೂ ಕೋಮುವಾದ" ಪ್ರದರ್ಶಿಸುತ್ತಿದ್ದಾಗ ಇತ್ತ ಕೇರಳದಲ್ಲಿ ಕಾಂಗ್ರೆಸ್(ಐ) ಬಹುಸಂಖ್ಯಾತ ಕೋಮುವಾದಿಗಳ ಬೆಂಬಲ ಪಡೆದು ಚುನಾವಣೆ ಗೆಲ್ಲಲು ಪ್ರಯತ್ನಿಸಿತು. ಕೇರಳದ ಜನತೆ ಅವರ ಈ ಸಂಕುಚಿತ ದೃಷ್ಟಿಗೆ, ಸಮಯಸಾಧಕ ನೀತಿಗೆ ತಕ್ಕ ಉತ್ತರ ನೀಡಿದ್ದಾರೆ. ★

ಮತ್ತೆ ಸಿ. ಪಿ. ಐ. (ಎಂ)ಗೆ ಅಪೂರ್ವ ವಿಜಯ

ಕೊಟ್ಟಾಯಂನಲ್ಲಿ ಸಿ. ಪಿ ಐ (ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಎಲ್.ಡಿ. ಎಫ್. ಮಂತ್ರಿಮಂಡಲದಲ್ಲಿನ ಮೀನುಗಾರಿಕೆ ಮಂತ್ರಿ ಕಾ॥ ಟಿ. ಕೆ. ರಾಮಕೃಷ್ಣನ್ 1,01,318 ಮತಗಳಲ್ಲಿ 55,422 ಮತಗಳನ್ನು ಪಡೆದು ಕಾಂಗ್ರೆಸ್(ಐ)ನ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣನ್‌ರನ್ನು 9526 ಮತಗಳಿಂದ ಸೋಲಿಸಿದ್ದಾರೆ.

ವಾಮನಪುರಂನಲ್ಲಿ ಸಿ. ಪಿ ಐ.(ಎಂ) ಅಭ್ಯರ್ಥಿ ಕಾ॥ ಕೆ. ಕೃಷ್ಣನ್‌ನಾಯರ್ 52,410 ಮತಗಳನ್ನು ಪಡೆದು ಕಾಂಗ್ರೆಸ್(ಐ)ನ ಪೀತಾಂಬರ ಕುರುಪ್

ಮಾರ್ಚ್ 23 ರ ಚುನಾವಣೆಗಳ ಫಲಿತಾಂಶ ರಾಷ್ಟ್ರದ ರಾಜಕೀಯವನ್ನೂ ಶುದ್ಧಗೊಳಿಸಲು ಕೋಮುವಾದ-ವಿರೋಧಿ ರಂಗ ಅನಿವಾರ್ಯ ಎಂದು ತೋರಿಸಿಕೊಟ್ಟಿತು. ಆದರೆ ಕಾಂಗ್ರೆಸ್(ಐ) ಅದರಿಂದಲೂ ಪಾಠ ಕಲಿಯಲಿಲ್ಲ. ಎಂಟು ಲಕ್ಷ ಮತಗಳನ್ನು ಪಡೆದು ಹಿಂದೂ ಮತ-ಬ್ಯಾಂಕ ಬಿ.ಜೆ ಪಿ.-ಮುನ್ನಾಣಿ ಕೂಟ ಸೃಷ್ಟಿಸಿತು ಎಂಬುದನ್ನೂ ಲೆಕ್ಕಿಸದೆ ಕಾಂಗ್ರೆಸ್(ಐ) ಈ ಎರಡು ಉಪಚುನಾವಣೆಗಳಲ್ಲಿ ಈ ಕೋಮುವಾದೀ ಕೂಟದ ಬೆಂಬಲ ಕೂಡ ಪಡೆದಿತ್ತು. ಅತ್ತ ಮೀರತ್‌ನ ಮಲಿಯಾನಾದಲ್ಲಿ ಪ್ರಾದೇಶಿಕ

ಒಳಪುಟಗಳಲ್ಲಿ....

ಏರಿದ ವಿದ್ಯುತ್ ಹಾಗೂ ಇತರದರಗಳ ವಿರುದ್ಧ

ಸಿ. ಪಿ. ಐ. [ಎಂ]-ಸಿ. ಪಿ. ಐ. ಜಂಟಿ ಸಮಾವೇಶ

ಇತ್ತೀಚೆಗೆ ವಿದ್ಯುತ್, ಹಾಲು ಮತ್ತು ಹೋಟೆಲ್ ದರಗಳನ್ನು ವಿಪರೀತವಾಗಿ ಏರಿಸುವುದನ್ನು ಈಗಾಗಲೇ ನಾವು ತಿಳಿದಿದ್ದೇವೆ.

ಕರ್ನಾಟಕ ವಿದ್ಯುಚ್ಛಕ್ತಿಮಂಡಲಿಯು ಗೃಹ ಬಳಕೆ, ವಾಣಿಜ್ಯ ಬಳಕೆ ಮತ್ತು ನೀರಾವರಿ ಪಂಪ್‌ಸೆಟ್ ವಿದ್ಯುತ್ ದರಗಳನ್ನು ದಿಢೀರನೆ ಹೆಚ್ಚಿಸುವ ಮೂಲಕ ರಾಜ್ಯದ ಜನತೆಗೆ ಮತ್ತೊಮ್ಮೆ ಷಾಕ್ ನೀಡಿದೆ. ಇದರಿಂದಾಗಿ ಮನೆ ಬೆಳಕು ದುಬಾರಿಯಾಗಿದ್ದು ವಿದ್ಯುತ್ ಇಂಧನ ಮೂಲವನ್ನೇ ಅವಲಂಬಿಸಿರುವ ಕೆಳಮತ್ತು ಮಧ್ಯಮ ವರ್ಗದ ಜನತೆಗೆ ಎ.ಇ.ಹೆಚ್. ದರಗಳ ವಿಪರೀತ ಏರಿಕೆ ಹೊರಲಾರದ ಹೊರೆಯಾಗಿದೆ. ರೈತರು ಸಣ್ಣ ಪುಟ್ಟ ವಾಣಿಜ್ಯೋದ್ಯಮಿಗಳು ಸಹ ತೊಂದರೆಗೀಡಾಗಿದ್ದಾರೆ. ವಾಣಿಜ್ಯ ಬಳಕೆಯ ವಿದ್ಯುತ್ ದರ ಏರಿಕೆಯಿಂದ ಸರಕು ಮತ್ತು ಸೇವೆಗಳ ಬೆಲೆಗಳೂ ಮತ್ತಷ್ಟು ಹೆಚ್ಚಿ ಅಂತಿಮವಾಗಿ ಗ್ರಾಹಕರ ಮೇಲೆಯೇ ಬೀಳುತ್ತದೆ. ಕೆ. ಇ. ಬಿ. ಪದೇ ಪದೇ ನಷ್ಟದ ನೆಪವೊಡ್ಡಿ ದರಗಳನ್ನು ಏರಿಸುತ್ತಿರುವುದು ಖಂಡನಾರ್ಹವಾಗಿದೆ. ಮಂಡಲಿಯಲ್ಲಿನ ಭ್ರಷ್ಟಾಚಾರ ಅಧಕ್ಷತೆ ಮತ್ತು ವಿದ್ಯುತ್ ಸರಬರಾಜಿನಲ್ಲಿ ಪೋಲಾಗುತ್ತಿರುವುದನ್ನು ತಡೆಗಟ್ಟುವ ಬದಲು ಬಳಕೆದಾರರ ಮೇಲೆ ಇದರ ಭಾರವನ್ನು ಹೊರಿಸಲಾಗಿದೆ.

ಇದೇ ಸಂದರ್ಭದಲ್ಲಿ ಡೈರಿ ಆಡಳಿತ ವರ್ಗವು ಲೀಟರ್ ಒಂದಕ್ಕೆ 50 ಪೈಸೆ ದರ ಏರಿಸಿದೆ. ಹೋಟೆಲ್ ಮಾಲೀಕರು ಸಹ ತಿಂಡಿ ತಿನಸು ಮತ್ತು ವಸತಿ ಗೃಹಗಳ ದರಗಳನ್ನು ಹೆಚ್ಚಿಸಿದ್ದಾರೆ. ಜೊತೆಗೆ ಪಡಿತರ ಅಕ್ಕಿ ಮತ್ತು ಖಾದ್ಯ ತೈಲದ ಪ್ರಮಾಣವನ್ನು ಖಡಿತಗೊಳಿಸಲಾಗಿದೆ. ಈ ಎಲ್ಲ ಹೆಚ್ಚಳದಿಂದಾಗಿ ಈಗಾಗಲೇ ಹೆಚ್ಚಿರುವ ಬೆಲೆಗಳು ಇನ್ನಷ್ಟು ಹೆಚ್ಚಿ ಜನಸಾಮಾನ್ಯರ ಜೀವನ ಅತ್ಯಂತ ದುರ್ಭರವಾಗಿದೆ.

ಸಿ ಐ ಟಿ.ಯು. ರಾಜ್ಯ ಸಮಿತಿ ಖಂಡನೆ

ತಾ॥ 4-6-87ರಂದು ಬೆಂಗಳೂರಿನಲ್ಲಿ ಸೇರಿದ್ದ ಕರ್ನಾಟಕ ಸಿ. ಐ. ಟಿ. ಯು. ವಿನ ರಾಜ್ಯಮಂಡಳಿ ಸಭೆ ಜನತಾ ಸರ್ಕಾರ ವಿದ್ಯುತ್ ಮತ್ತು ಹಾಲಿನ ದರ ಹೆಚ್ಚಿಸಿರುವುದನ್ನು ಹೋಟೆಲುಗಳಲ್ಲಿ ತಿಂಡಿ ಕಾಫಿ ಬೆಲೆ ಹೆಚ್ಚಿಸಿದರೂ ಅದರ ಕುರಿತು ಕ್ರಮ ತೆಗೆದು ಕೊಳ್ಳದಿರುವುದನ್ನು ಖಂಡಿಸಿದೆ.

ಓದುಗರಲ್ಲಿ ವಿನಂತಿ

ಮುದ್ರಣಾಲಯದ ತೊಂದರೆಯಿಂದ ಇದ್ದಕ್ಕಿದ್ದಂತೆ ಮಾಯವಾಗುವ ವಿದ್ಯುತ್ತಿನಿಂದಾಗಿ "ಐಕ್ಯರಂಗ" ಪ್ರಕಟಣೆ ಅಸ್ತವ್ಯಸ್ತವಾಗಿದೆ. ಓದುಗರು ದಯವಿಟ್ಟು ಮನ್ನಿಸಬೇಕು. ಈ ಸಂಚಿಕೆಯನ್ನು ವಿಶೇಷ ಸಂಚಿಕೆಯಾಗಿ ತಂದು ಕೇವಲ ಒಂದು ರೂ. ಬೆಲೆ ಇಡಲಾಗಿದೆ.

ಜೂನ್ 9ರಂದು ಬೆಂಗಳೂರು ನಗರದ ಪುರಭವನದಲ್ಲಿ ಸಂಜೆ 5 ಗಂಟೆಗೆ ಎಲ್ಲರೂ ಭಾಗ ವಹಿಸಿ ಸಮಾವೇಶ ಯಶಸ್ವಿಗೊಳಿಸಿ

ಬೆಂಗಳೂರು ವೈದ್ಯಕೀಯ ವಿದ್ಯಾರ್ಥಿಗಳ ಮುಷ್ಕರ

ಸರ್ಕಾರಿ ಆಸ್ಪತ್ರೆಗಳಲ್ಲಿ ಅಪಾರ ಕ್ಯಾಪಿಟೇಷನ್ ಹಣ ವಸೂಲಿ ಮಾಡಿದ ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಚಿಕಿತ್ಸೆಯ ಕಲಿಕೆಗೆ ಅನುಕೂಲ ಕಲ್ಪಿಸಿ ಸರ್ಕಾರಿ ಕಾಲೇಜುಗಳಿಗೆ ಈ ಸೌಲಭ್ಯವನ್ನು ವಂಚಿಸುತ್ತಿರುವುದನ್ನು ವಿರೋಧಿಸಿ ಜೂನ್ 3 ರಿಂದ ಅನಿರ್ದಿಷ್ಟ ಮುಷ್ಕರದಲ್ಲಿ ಹಾಗೂ ಬೌರಿಂಗ್ ಆಸ್ಪತ್ರೆಯ ಪಿಕೆಟಿಂಗ್‌ನಲ್ಲಿ ತೊಡಗಿದ ಬೆಂಗಳೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ನಡೆಸುತ್ತಿರುವ ಈ ಮುಷ್ಕರಕ್ಕೆ ಎಸ್. ಎಫ್. ಐ. ರಾಜ್ಯ ಸಮಿತಿ ಬೆಂಬಲಿಸಿದೆ. ಸ್ವಂತ ಆಸ್ಪತ್ರೆ ಹೊಂದದಿರುವ ಖಾಸಗಿ ಮೆಡಿಕಲ್ ಕಾಲೇಜುಗಳ ಮಾನ್ಯತೆಯನ್ನು ರದ್ದುಪಡಿಸಬೇಕೆಂದು ಹಾಗೂ ಈಗ ಈ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವವರಿಗೆ ಒಂದು ವರ್ಷದೊಳಗಾಗಿ ಆಸ್ಪತ್ರೆ ಸೌಲಭ್ಯ ನಿರ್ಮಿಸಬೇಕೆಂದು ಎಸ್. ಎಫ್. ಐ. ಒತ್ತಾಯಿಸಿದೆ.

ಮೀರತ್ ಗಲಭೆ—ಪಾಲಿಟ್‌ಬ್ಯೂರೊ ಹೇಳಿಕೆ

ಉತ್ತರಪ್ರದೇಶದ ಮೀರತ್‌ಅನ್ನು ನಡುಗಿಸಿ, ರಾಜಧಾನಿ ದೆಹಲಿಯನ್ನೂ ತಟ್ಟಿದ ದಂಗೆಗಳ ಬಗ್ಗೆ ಸಿ.ಪಿ.ಐ(ಎಂ)ನ ಪಾಲಿಟ್ ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಮೇ 23 ರಂದು ಈ ಬಗ್ಗೆ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಸತತವಾಗಿ ನಡೆದ ದಂಗೆಗಳು, ಹಿಂಸಾಚಾರದ ತೀವ್ರತೆ ಮತ್ತು ಆಡಳಿತದಲ್ಲಿ ಕಂಡು ಬಂದ ಕುಸಿತ ಬಹಳ ಕಳವಳಕಾರಿ ಎಂದು ಅದು ಹೇಳಿದೆ.

ಈ ದಂಗೆಗಳು ದೇಶದಲ್ಲಿ ಒಟ್ಟಾರೆಯಾಗಿ ಕೋಮು ಸಂಬಂಧಗಳು ಗಂಭೀರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ನಡೆದಿವೆ. ಗುಜರಾತ್‌ನಲ್ಲಿ ಕೋಮು ಹಿಂಸೆಯ ಹಿಡಿತ ಇನ್ನೂ ಸಡಿಲವಾಗಿಲ್ಲ. ಇತ್ತೀಚೆಗೆ ಬ್ರೋಚ್‌ನಲ್ಲಿ ಹಿಂಸಾಚಾರ ನಡೆಯಿತು. ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದ ಹಲವು ಸ್ಥಳಗಳಲ್ಲೂ ಕೋಮು ಘರ್ಷಣೆಗಳು ನಡೆದಿದೆ. ಇಂತಹ ಹಿಂಸಾಚಾರ ನಡೆದಾಗಲೆಲ್ಲಾ ಆಳುವ ಪಕ್ಷದ ಮತ್ತು ಕೆಲವು ವಿರೋಧ ಪಕ್ಷಗಳ ಮುಖಂಡರು ಹೀಗಾಗಬಾರದೆಂದು ಘೋಷಣೆ ಹೊರಡಿಸುತ್ತಾರೆ, ಆಡಳಿತಗಾರರು ಕೂಡಾ ಕೋಮುಗಳನ್ನು ದಮನಿಸುವ ಪ್ರತಿಜ್ಞೆಗೈಯ್ಯುತ್ತಾರೆ. ಆದರೆ ಇವು ಯಾವುವೂ ಕಾರ್ಯರೂಪಕ್ಕಿಳಿಯುವುದೇ ಇಲ್ಲ. ಆದರಿಂದಾಗಿ ಮತ್ತೆ ಮತ್ತೆ ಘರ್ಷಣೆಗಳು ನಡೆಯುತ್ತವೆ ಎಂದು ಪಾಲಿಟ್ ಬ್ಯೂರೋ ಹೇಳಿಕೆ ವಿಶ್ಲೇಷಿಸಿದೆ.

ಮುಂದುವರಿದು "ಗಂಭೀರ ಪರಿಸ್ಥಿತಿ ಉಂಟುಮಾಡಿ, ದಂಗೆ ಸಂಘಟಿಸುವ ಕೋಮುಶಕ್ತಿಗಳ ವಿರುದ್ಧ ದೃಢಕ್ರಮ ಕೈಗೊಳ್ಳಲಾಗುವುದೆಂದು ಪ್ರಧಾನ ಮಂತ್ರಿಗಳು ಮತ್ತೊಮ್ಮೆ ಘೋಷಿಸಿದ್ದಾರೆ. ಆದರೆ ಪ್ರಶ್ನೆ ಕೇವಲ ಆಡಳಿತಾತ್ಮಕ ಕ್ರಮಗಳದ್ದಲ್ಲ, ಜತೆಗೆ ರಾಜಕೀಯ ಕ್ರಮಗಳೂ ಅಗತ್ಯ. ನಿಜವಾಗಿ ಹಿಂಸಾಚಾರ ಆರಂಭವಾಗುವ ಎಷ್ಟೋ ಮೊದಲೇ ಅದಕ್ಕೆ ಕೋಮುಶಕ್ತಿಗಳು ಸಿದ್ಧತೆ ನಡೆಸುತ್ತವೆ ಈ ಶಕ್ತಿಗಳ ವಿರುದ್ಧ ಆಳುವ ಪಕ್ಷ ಯಾವ ರಾಜಿಯನ್ನೂ ಮಾಡಿಕೊಳ್ಳದೆ ಹೋರಾಡುವುದು, ಸ್ಫೋಟಕ ಪ್ರಶ್ನೆಗಳಲ್ಲಿ ಈ ಶಕ್ತಿಗಳನ್ನು ಸುಪ್ರೀತಗೊಳಿಸಲು ಪ್ರಯತ್ನಿಸುತ್ತಿರುವ ಧೋರಣೆಗಳನ್ನು ತ್ಯಜಿಸುವುದು ಅಗತ್ಯ. ಕೇವಲ ಆಗಮಾತ್ರವೇ ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತ ಈ ಎರಡೂ ಕೋಮುವಾದಿಗಳ ವಿರುದ್ಧ ಐಕ್ಯ ಪ್ರಚಾರ ಸಾಧ್ಯ" ಎಂದು ಪಾಲಿಟ್ ಬ್ಯೂರೋ ಹೇಳಿದೆ.

ಏಳು ಸದಸ್ಯರುಳ್ಳ ಎಂ. ಪಿ. ಗಳ ತಂಡವೊಂದನ್ನು ಮೀರತ್‌ನ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ಕೊಡದಂತೆ ಉತ್ತರ ಪ್ರದೇಶ ಸರ್ಕಾರದ ಹಾಗೂ ಜಿಲ್ಲಾ ಆಡಳಿತ ತಡೆದಿರುವುದನ್ನು ಪಿ. ಬಿ. ಖಂಡಿಸಿದೆ. ವಾಸ್ತವ ಸಂಗತಿಗಳನ್ನು ತಿಳಿದು ಪರಿಸ್ಥಿತಿಯನ್ನು ತಿಳಿಗೊಳಿಸುವಲ್ಲಿ ನೆರವಾಗುವುದು ಈ ಭೇಟಿಯ ಉದ್ದೇಶವಾಗಿತ್ತು. ಪ್ರಾದೇಶಿಕ ಸಶಸ್ತ್ರ ಪಡೆ (ಪಿ. ಎ. ಸಿ.)ಗಳ ಭಯಾನಕ ಅತ್ಯಾಚಾರ ಕಂಡ ಮಲಿಯಾನಾದಂತಹ ಸ್ಥಳಗಳನ್ನು ನೋಡದಂತೆ ತಡೆದಿರುವುದು ಸರ್ಕಾರಕ್ಕೆ ಕೋಮು ರಕ್ಕಸನ ವಿರುದ್ಧ ಜಾತ್ಯತೀತ ಶಕ್ತಿಗಳ ನೆರವು ಪಡೆಯುವುದಕ್ಕಿಂತ ತನ್ನ ವಿಫಲತೆಗಳನ್ನು ಮುಚ್ಚಿಕೊಳ್ಳುವುದೇ ಮುಖ್ಯವೆನಿಸಿದೆ ಎಂಬುದನ್ನು ಸೂಚಿಸುತ್ತದೆ ಎಂದು ಪಿ. ಬಿ. ಮೇ 26ರ ಹೇಳಿಕೆಯಲ್ಲಿ ವಿಷಾದ ವ್ಯಕ್ತಪಡಿಸಿದೆ.

ಸಮಗ್ರತಾ ಮಂಡಳಿ

ಮೇ 27ರಂದು ನೀಡಿದ ಇನ್ನೊಂದು ಹೇಳಿಕೆಯಲ್ಲಿ ತಕ್ಷಣ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕರೆಯಬೇಕೆಂದು ಪಾಲಿಟ್ ಬ್ಯೂರೋ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಪರಿಸ್ಥಿತಿ ಅಷ್ಟೊಂದು ಗಂಭೀರಗೊಳ್ಳುತ್ತಿದ್ದರೂ ಪ್ರಧಾನ ಮಂತ್ರಿಗಳಿಗೆ ಸಭೆಯ ಅಗತ್ಯ ಕಂಡು ಬರದಿರುವುದು ಆಶ್ಚರ್ಯವೆಂದು ಹೇಳಿ ಈ ನಿಲುವನ್ನು ತ್ಯಜಿಸಬೇಕೆಂದು ಅದು ಒತ್ತಾಯಿಸಿದೆ.

ಸಿ.ಐ.ಟಿ.ಯು ಪದಾಧಿಕಾರಿಗಳು

ಪುಟ 7ರಲ್ಲಿ ನೀಡಿರುವ ಪದಾಧಿಕಾರಿಗಳ ಪಟ್ಟಿಯಲ್ಲಿ ಈ ಕೆಳಗಿನ ಹೆಸರಗಳು ಬಿಟ್ಟಿದೆ. ದಯವಿಟ್ಟು ಸೇರಿಸಿಕೊಂಡು ಓದಿಕೊಳ್ಳಬೇಕು.

ಉಪಾಧ್ಯಕ್ಷರುಗಳು :

ಅಹಲ್ಯಾರಂಗನೇಕರ್
ಆರ್. ಉಮಾನಾಥ್

ಕಾರ್ಯದರ್ಶಿಗಳು :

ಕಮಲ್ ಸರ್ಕಾರ್
ಮಹಮ್ಮದ್ ಅಮೀನ್
ಕೆ. ಎನ್. ರವೀಂದ್ರನಾಥ್
ರಣಜಿತ್ ಬಸು

ಕೈ

ನಾನು ಹೇಳುವ ಕೈ
ದುಡಿವ ಜನರೆಲುಬುಗಳ ಹಂದರದ ಮೇಲ್ ಕುಳಿತು
ಶೋಷಣೆಯ ಸೂತ್ರದಲಿ ಬಡ ಜನರ ಬಂಧಿಸುತ
ಓಟು ಗಿಟ್ಟಿಸಿ ಗದ್ದುಗೆಯನೇರಿ ಮೆರೆವ ಕೈಯಲ್ಲ
ನಾನು ಹೇಳುವ ಕೈ
ಪ್ರಕೃತಿಯೊಡನಾಡಿ ಪ್ರಕೃತಿ ಸತ್ವವ ಹೀರಿ
ಸತತ ಪರಿಶ್ರಮದಿಂದ ಬೆಳೆದ ಕೈ
ಇತಿಹಾಸ ಚಕ್ರದಲಿ ನಿಂತಲ್ಲಿ ನಿಲ್ಲದೆಯೆ
ತಾನು ಬೆಳೆಯುತ ಜಗವ ಬೆಳೆಸಿದಾ ಕೈ
ಹಸಿವ ನೀಗಿಸಲಿಕ್ಕೆ ಪ್ರಾಣಿಗಳ ಕೊಲ್ಲಲು
ಮೊದ ಮೊದಲು ಕಲ್ಲೆತ್ತಿ ಎಸೆದ ಕೈ
ನಂತರದ ದಿನಗಳಲಿ ಮೆದುಳು ಕೆಲಸವ ಮಾಡೆ
ಕಲ್ಲಿಂದ ಆಯುಧವ ಸೃಷ್ಟಿಸಿದ ಕೈ
ಗಡ್ಡೆ ಗೆಣಸುಗಳನು ಅಗೆದಗೆದು ತೆಗೆಯಲು
ಮಿಕ್ಕ ಆಹಾರಗಳ ಮೊಗೆ ಮೊಗೆದು ಬಗೆಯಲು
ವಿಧ ವಿಧದ ಸಲಕರಣೆ ಸೃಷ್ಟಿಸಿದ ಕೈ
ಬೇಟೆ ಇತಿಹಾಸವನು ಬೆದಕಿದಾ ಕೈ
ಕೊಂದ ತಾಯಿಯ ಹಿಂದೆ ಬಂದದರ ಮರಿಗಳನು
ಕೊಲ್ಲದೆಯೆ ಕರೆದೊಯ್ದು ಪಾಲಿಸಿದ ಕೈ
ಪಸು ಸಂಗೋಪನೆಯ ಹೊಸ ಹಂತವನೆ ಹಿಡಿದು
ಇತಿಹಾಸಕೆ ಚಲನೆ ಕೊಟ್ಟ ಕೈ
ಗಡ್ಡೆ ಗೆಣಸುಗಳೆಲ್ಲ ಮತ್ತೆ ಮಾಂಸಗಳೆಲ್ಲ
ಹಸಿವ ನೀಗಿಸದಾಗೆ- ಭೂಮಿಯೆದೆಯನು ಸೀಳಿ
ಉತ್ತಿದಾ ಕೈ, ಬೀಜ ಬಿತ್ತಿದಾ ಕೈ
ನೇಗಿಲನು ನಿರ್ಮಿಸಿ ನೆಗೆತ ಸೃಷ್ಟಿಸಿದ ಕೈ
ನರನ ನಾನಾ ವಿಧದ ಕನಸು ಕಲ್ಪನೆಗಳಿಗೆ
ಕಾಲ ಕಾಲಕೆ ತಕ್ಕ ರೂಪ ನೀಡಿದ ಕೈ
ದುಡಿ ದುಡಿದು ದುಡಿ ದುಡಿದು ಬೆಳೆ ಬೆಳೆದು
ವರ್ಗ ಇತಿಹಾಸವನು ರಚಿಸಿದಾ ಕೈ
ಪ್ರಕೃತಿಯಾಳುವ ಶಕ್ತಿ ಹೆಚ್ಚುತ್ತ ಹೆಚ್ಚುತ ಹೋಗೆ
ಹೊಸ ತಂತ್ರ ಹೊಸ ಯಂತ್ರ ಸೃಷ್ಟಿಸಿದ ಕೈ
ಯಂತ್ರದಲಿ ಯಂತ್ರವೋ ಎಂಬಂತೆ ದುಡಿ ದುಡಿದು
ಪರರಿಗೇ ಶ್ರಮಶಕ್ತಿ ಹಂಚಿದಾ ಕೈ
ದುಡಿವವನ ದುಡಿಮೆಯನು ತಿಂದುಂಡು ಬೆಳೆದಂತ
ಬಂಡವಾಳದ ಜಗವ ಬೆಳೆಸಿದಾ ಕೈ
ಬರು ಬರುತ ಬರು ಬರುತ ವರ್ಗ ಸ್ಪಷ್ಟತೆಯಾಗೆ
ವರ್ಗ ಹೋರಾಟಕೇ ಬಲಕೊಟ್ಟ ಕೈ
ಬಂಡವಾಳದ ಜಗದ ಭಂಡ ಇತಿಹಾಸದಾ
ಬರಡು ತನವನು ಬೇಗ ಬಯಲಿಗೆಳೆದಾ ಕೈ
ದುಡಿವ ಜನತೆಗೆ ದಾರಿ ತೋರಿಸುತ ತಾ ಬಂದು
ಬಂಡವಾಳದ ಬುಡವನಲುಗಿಸಿದ ಕೈ
ಬದಲಾವಣೆಯ ದಿಟ್ಟ ಹೋರಾಟ ಸಮಯದಲಿ
ಕ್ರಾಂತಿ ಬಾವುಟ ಬೀಸಿ ಮೆರೆವ ಕೈ
ಸರ್ವ ಸಮತೆಯ ಜಗವ ಸರ್ವ ಜನರಿಗೆ ತಂದು
ವಿಶ್ವ ಶಾಂತಿಗೆ ನಾಂದಿ ಹಾಡುವಾ ಕೈ

—ಹೆಚ್. ಶೇಷಗಿರಿರಾವ್

ದೂರದರ್ಶನ—ಆಕಾಶವಾಣಿ ವಿರುದ್ಧ ಪ್ರತಿಭಟನೆ

ಕಾಂಗ್ರೆಸ್ ಕೇಂದ್ರ ಸರ್ಕಾರ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದರ ವಿರುದ್ಧ, ಜನತೆಯ ಧ್ವನಿಯನ್ನು, ಸಂಸ್ಕೃತಿಯನ್ನು ಪ್ರತಿಬಿಂಬಿಸದೆ ಭಾರತದಲ್ಲಿ ಜನರಿಂದ ಆಯ್ಕೆಯಾಗಿರುವ ವಿರೋಧಿ ರಾಜಕೀಯ ಪಕ್ಷಗಳ ಅಭಿಪ್ರಾಯಗಳನ್ನು ಅದುಮಿ ಅವುಗಳ ವಿರುದ್ಧ, ಅವುಗಳ ನೇತೃತ್ವದ ಸರ್ಕಾರಗಳ ವಿರುದ್ಧ ಅಪಪ್ರಚಾರ ನಡೆಸುವ ಪಕ್ಷಪಾತದ ವಿರುದ್ಧ ರಾಷ್ಟ್ರಾದ್ಯಂತ ಪ್ರತಿಭಟಿಸಲು ಡಿ.ವೈ.ಎಫ್.ಐ. ಹಾಗೂ ಎಸ್.ಎಫ್.ಐ. ಸಂಘಟನೆಗಳು ಜಂಟೀ ಕಾರ್ಯಕ್ರಮ ರೂಪಿಸಿವೆ.

ಜೂನ್ 15ರಂದು ಆಕಾಶವಾಣಿ ಹಾಗೂ ದೂರದರ್ಶನ ಕೇಂದ್ರಗಳ ಎದುರು ನಡೆಯುವ ಪ್ರತಿಭಟನೆಯಲ್ಲಿ ಭಾಗವಹಿಸಬೇಕೆಂದು ಈ ಸಂಘಟನೆಗಳ ರಾಜ್ಯ ಘಟಕಗಳು ಕರೆ ನೀಡಿವೆ.

ಕಾಂ|| ಶಿವರಾಂ ವಿವಾಹ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ರಾಜ್ಯ ಕಾರ್ಯದರ್ಶಿ ಕಾಂ|| ಶಿವರಾಂ ಹಾಗೂ ವಿಜಯಲಕ್ಷ್ಮಿಯವರ ವಿವಾಹ ಮೇ 31ರಂದು ರಾಯಚೂರಿನಲ್ಲಿ ನಡೆದು ಅದರ ಅಂಗವಾಗಿ ಬೆಂಗಳೂರಿನಲ್ಲಿ ಡಿ. ವೈ. ಎಫ್. ಐ. ಜಿಲ್ಲಾ ಸಮಿತಿ ಜೂನ್ 7ರಂದು ಸಂತೋಷಕೂಟ ಏರ್ಪಡಿಸಿದೆ.

ವಿರೋಧ ಪಕ್ಷಗಳ ದೆಹಲಿ ಸಮ್ಮೇಳನ

—ಇ.ಎಂ ಎಸ್:

ಜಾತ್ಯಾತೀತ ಕಾಂಗ್ರೆ ವಿರೋಧಿ ಪಕ್ಷಗಳ ನಡುವೆ ಹಿಂದೆ ಮೂಡಿದ್ದ ಐಕ್ಯತೆಯು ಎಳೆ ಮತ್ತೆ ಮುಂದುವರಿಯುವಂತೆ, ಇತ್ತೀಚೆಗೆ ದೇಹಲಿಯಲ್ಲಿ ಸೇರಿದ್ದ 11 ಪಕ್ಷಗಳ ಸಭೆ ಸೇರಿದೆ ದೇಶದ ರಾಜಕಾರಣಕ್ಕೆ ಅಪೂರ್ವ ತಿರುವು ಕೊಡಬಹುದಾದ ಈ ಸಭೆಯ ವಿವರಗಳನ್ನು ಕಾಂ. ಇ. ಎಂ. ಎಸ್. ರವರಿಂದಲೇ ಕೇಳಿ

ವಿರೋಧ ಪಕ್ಷಗಳ ಒಂದು ಸಮ್ಮೇಳನ ನವದೆಹಲಿಯಲ್ಲಿ ಮೇ 14 ಮತ್ತು 15 ರಂದು ನಡೆಯಿತು. ಸಿ. ಪಿ. ಐ (ಎಂ), ತೆಲುಗು ದೇಶಂ, ಜನತಾ ಪಕ್ಷ, ಲೋಕದಳ (ಬಹುಗುಣ). ಲೋಕದಳ (ಅಜಿತ್), ಕಾಂಗ್ರೆಸ್ (ಎಸ್), ಡಿ.ಎಂ.ಕೆ., ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ., ಶಿರೋಮಣಿ ಅಕಾಲಿದಳ ಮತ್ತು ಪಿ.ಡಬ್ಲ್ಯು.ಪಿ. ಇದರಲ್ಲಿ ಭಾಗವಹಿಸಿದವು. ಸಿ.ಪಿ.ಐ. ಹಾಜರಾಗಲಿಲ್ಲ, ಆಂಧ್ರ ಪ್ರದೇಶದ ಮುಖ್ಯ ಮಂತ್ರಿಯೂ ಆಗಿರುವ ತೆಲುಗು ದೇಶಂನ ಅಧ್ಯಕ್ಷರಿಗೆ 1) ಮುಂಬರುವ ರಾಷ್ಟ್ರಪತಿ ಚುನಾವಣೆಗೆ ವಿರೋಧ ಪಕ್ಷಗಳ ವತಿಯಿಂದ ಅಭ್ಯರ್ಥಿ 2) ವಿದೇಶಿ ವಿನಿಮಯ ಕಾನೂನು ಉಲ್ಲಂಘನೆಗಳ ಮತ್ತು ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕಾಭಿಪ್ರಾಯ ಮೂಡಿಸುವುದು 3) ಸಮಾನ ಅಭಿಪ್ರಾಯದ ಪಕ್ಷಗಳ ಒಕ್ಕೂಟ ರಚನೆಯ ಪ್ರಸ್ತಾಪದ ಚರ್ಚೆ ಮತ್ತು ಇತರ ಯಾವುದೇ ಪರಸ್ಪರ ಅನೇಕ ವಿಷಯಗಳನ್ನು ಚರ್ಚಿಸಲು ಈ ಸಭೆ ಕರೆಯಲು ಕಾಂಗ್ರೆಸ್ಸೇತರ ಮುಖ್ಯ ಮಂತ್ರಿಗಳ ಸಭೆ ಅಧಿಕಾರ ನೀಡಿದ್ದರ ಅನುಸಾರವಾಗಿ ಈ ಸಮ್ಮೇಳನ ನಡೆಯಿತು.

ಮೊದಲ ದಿನ ರಾಷ್ಟ್ರಪತಿ ಚುನಾವಣೆಯ ಅಭ್ಯರ್ಥಿಗೆ ಸಂಬಂಧ ಪಟ್ಟಂತೆ ಕಾಂಗ್ರೆಸ್(ಐ) ಸರ್ವ ಸಮ್ಮತ ಆಯ್ಕೆಯ ಆಡಂಬರದ ಮಾತಾಡುತ್ತಿದ್ದರೂ, ವಾಸ್ತವವಾಗಿ ತನ್ನದೇ ಅಭ್ಯರ್ಥಿಯನ್ನು ಮುಂದೆ ಮಾಡುವಲ್ಲಿಯೇ ಆಸಕ್ತವಾಗಿರುವುದರಿಂದ ಈ ವಿಷಯದಲ್ಲಿ ವಿರೋಧ ಪಕ್ಷಗಳ ಏಕ ರೀತಿಯ ನಿಲುವು ರೂಪಿಸಲು ರಾಮರಾವ್ ಇ.ಎಂ.ಎಸ್. ನಂಬೂದರಿಪಾಡ್ ಮತ್ತು ಚಂದ್ರಶೇಖರ ಅವರುಳ್ಳ ಒಂದು ಸಣ್ಣ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ತಕ್ಷಣ ತನ್ನ ಕೆಲಸ ಆರಂಭಿಸಿದೆ. ಇದಲ್ಲದೆ ಮೇ 14 ರಂದು ಹರ್ಯಾಣದ ಜನತೆ ಹೆಸರು ಕೆಡಿಸಿಕೊಂಡಿರುವ ಕಾಂಗ್ರೆಸ್ (ಐ) ನ್ನು ಸೋಲಿಸುವುದೆಂದು ಆಶಿಸುವ, ಹರ್ಯಾಣಾದಲ್ಲಿ ಸಂಕುಚಿತ ಚುನಾವಣಾ ಲಾಭಕ್ಕಾಗಿ ಪಂಜಾಬ್ ಮತ್ತು ಹರ್ಯಾಣಾದ ಜನತೆಯ ನಡುವೆ ವಿಷ ಬೀಜ ಬಿತ್ತುವ ಪಂಜಾಬಿನ ಮೇಲೆ 356ನೇ ಕಲಮಿನನ್ವಯ ಹೇರಿರುವ ರಾಷ್ಟ್ರಪತಿ ಆಳ್ವಿಕೆಯನ್ನು ಬಲವಾಗಿ ಖಂಡಿಸುವ ಮತ್ತು ತಮಿಳುನಾಡು ಅಸೆಂಬ್ಲಿಯಲ್ಲಿ 10 ಡಿ. ಎಂ. ಕೆ. ಸದಸ್ಯರನ್ನು ಹೊರ ಹಾಕಿದ ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ-ವಿರೋಧಿ ಕ್ರಮವನ್ನು ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಮೇ 15 ರಂದು ಶ್ರೀಲಂಕಾದಲ್ಲಿ ತಮಿಳರ ಜೀವ ಮತ್ತು ಹಕ್ಕುಗಳ ಮೇಲೆ ನಡೆಯುತ್ತಿರುವ ಹಲ್ಲೆಗಳು ಹಾಗೂ ಇತ್ತೀಚೆಗೆ ಬಹಿರಂಗಗೊಂಡ ಸ್ವಿಸ್ ಬ್ಯಾಂಕ್ ಖಾತೆ ಮತ್ತು ರಕ್ಷಣಾ ವ್ಯವಹಾರ ಹಗರಣಗಳ ಮೂಲಕ ಹೊಸ ಆಯಾಮ ಪಡೆದಿರುವ ಭ್ರಷ್ಟಾಚಾರದ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕೇಂದ್ರ ಸರ್ಕಾರ ಪೂರ್ಣ ಮಾಹಿತಿ ನೀಡುವ ಬದಲು ಅದನ್ನು ಮುಚ್ಚಿಹಾಕಲು ದೊಡ್ಡ ಪ್ರಯತ್ನ ನಡೆಸುತ್ತಿದೆ. ಪೂರ್ಣ ಮಾಹಿತಿ ಕೇಳುವ ರಾಷ್ಟ್ರಪತಿಗಳ ಹಕ್ಕನ್ನು ಕೂಡಾ ನಿರಾಕರಿಸಲಾಗುತ್ತಿದೆ. ರಕ್ಷಣಾ ವ್ಯವಹಾರಗಳ ಬಗ್ಗೆ ಸಂಸದೀಯ ತನಿಖೆ ಮತ್ತು ಫೇರ್ ಫಾಕ್ಸ್ ಹಗರಣದ ನ್ಯಾಯಾಂಗ ವಿಚಾರಣೆಯ ವ್ಯಾಪ್ತಿಯನ್ನು ವಿಸ್ತರಿಸಲು ಹಠದಿಂದ ನಿರಾಕರಿಸಿ ಪ್ರಧಾನ ಮಂತ್ರಿಗಳು ಉನ್ನತ ಸ್ಥಾನದಲ್ಲಿರುವ ಜನರೇ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಂಬ ಶಂಕೆಯನ್ನು ಬಲಗೊಳಿಸಿದ್ದಾರೆ. ಆದ್ದರಿಂದ ಕಾಂಗ್ರೆಸ್ಸೇತರ ಪ್ರಜಾಪ್ರಭುತ್ವವಾದೀ ಪಕ್ಷಗಳು ಈ ಬಗ್ಗೆ ಒಂದು ಸಾಮೂಹಿಕ ಪ್ರಚಾರ-ಪ್ರಕ್ಷೋಭೆ ನಡೆಸಬೇಕೆಂದು ಈ ನಿರ್ಣಯ ಕರೆ ನೀಡಿತು. (8ನೇ ಪುಟ ನೋಡಿ)

ಸಿ. ಐ. ಟಿ. ಯು. 6ನೇ ಸಮ್ಮೇಳನದ ಕರೆ

ದೇಶದ ಐಕ್ಯತೆಯನ್ನು ಕಾಪಾಡಲು ಮುನ್ನಡೆಯೋಣ

ವಿಸ್ತೃತ ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳ ವಿಶಾಲ ಒಕ್ಕೂಟವನ್ನು ಕಟ್ಟೋಣ.

40 ವರ್ಷಗಳ ವಿಫಲ ಬಂಡವಾಳಶಾಹಿ-ಭೂಮಾಲೀಕ ಆಡಳಿತೆಗೆ ಬದಲಿ ನೇತೃತ್ವ ರಚಿಸೋಣ !

ಪಿ. ರಾಮಚಂದ್ರರಾವ್

ಎಂಬ ಘೋಷಣೆಗಳೊಂದಿಗೆ ಒಂದು ಲಕ್ಷಕ್ಕೂ ಮೀರಿದ ಸಿ. ಐ. ಟಿ. ಯು. ಬಹಿರಂಗ ಅಧಿವೇಶನವು ಮುಂಬೈಯ ಶಿವಾಜಿ ಪಾರ್ಕ್‌ನಲ್ಲಿ ಕೊನೆಗೊಂಡಿತು.

ಬಹಿರಂಗ ಅಧಿವೇಶನದಲ್ಲಿ ವಿದೇಶಗಳಿಂದ ಬಂದಿದ್ದ ಸಮಾಜವಾದಿ ರಾಷ್ಟ್ರಗಳ ಸೌಹಾರ್ದ ಪ್ರತಿನಿಧಿಗಳು ಎಲ್ಲರೂ ಸಿ. ಐ ಟಿ. ಯು. ಗುರುತಿದ್ದ ಕೆಂಪು ಟೋಪಿ ಧರಿಸಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾಂ॥ ಬಿ. ಟಿ. ಆರ್., ಸಮರ್‌ಮುಖರ್ಜಿ, ಕಾಂ॥ ಇ. ಕೆ. ನಯನಾರ್ ಮತ್ತು ಕಾಂ॥ ಜ್ಯೋತಿಬಸು ಇವರುಗಳು ಸಭೆಯನ್ನುದ್ದೇಶಿಸಿ ಭಾಷಣಗಳನ್ನಿತ್ತರು.

ಉದ್ಘಾಟನೆ : ಸಿ. ಐ. ಟಿ. ಯು. ವಿನ ಅಖಿಲ ಭಾರತ ಆರನೇ ಸಮ್ಮೇಳನವು ಮೇ 18, 1987 ರಂದು ಬೆಳಿಗ್ಗೆ 10 ಗಂಟೆಗೆ ಕಾಂ॥ ಬಿ. ಟಿ. ರಣದಿವೆಯವರು ಧ್ವಜಾರೋಹಣ ಮಾಡುವುದರೊಂದಿಗೆ ಆರಂಭವಾಯಿತು.

ದೇಶದ ಮೂಲೆ ಮೂಲೆಗಳಿಂದ 2500 ದಷ್ಟು ಪ್ರತಿನಿಧಿಗಳು ಬಂದು ರಾಜಾ ಶಿವಾಜಿ ವಿದ್ಯಾಲಯದಲ್ಲಿ ತಂಗಿದ್ದರು. ಮಧ್ಯಾಹ್ನ 1 ಘಂಟೆಗೆ ಸರಿಯಾಗಿ ಸಿ. ಐ. ಟಿ. ಯು. ಅಧಿವೇಶನವು ಕಾಂ॥ ಬಿ. ಟಿ. ಆರ್. ಅಧ್ಯಕ್ಷತೆಯಲ್ಲಿ ರಷ್ಯಾ, ಚೈನಾ, ಜೆಕೋಸ್ಲಾವೇಕಿಯಾ, ಇಟಲಿ, ದಕ್ಷಿಣ ಆಫ್ರಿಕಾ, ಬಲ್ಗೇರಿಯಾ ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳಿಂದ ಬಂದ ಸೌಹಾರ್ದ ವಿದೇಶಿ ಪ್ರತಿನಿಧಿಗಳ ಸಮಕ್ಷಮದಲ್ಲಿ ಉದ್ಘಾಟನೆಗೊಂಡಿತು.

ಸ್ವಾಗತ ಸಮಿತಿ ಅಧ್ಯಕ್ಷ ಕಾಂ॥ ಸಾನ್ ಜ್‌ಗಿರಿಯವರು ಎಲ್ಲರನ್ನೂ ಸ್ವಾಗತಿಸಿದರು.

ಕಾಂ॥ ಸುಂದರಯ್ಯ, ವಿ. ಪಿ. ಚಿಂತನ್ ಇವರಿಗೆ ಶ್ರದ್ಧಾಂಜಲಿ ಅರ್ಪಿಸುವ ಠರಾವುಗಳನ್ನು ಅಧಿವೇಶನವು ಅಂಗೀಕರಿಸಿತು.

ಅಧ್ಯಕ್ಷರು 1 ಗಂಟೆ ಕಾಲ ಸುದೀರ್ಘವಾಗಿ ದೇಶ-ವಿದೇಶಗಳ ಪ್ರಸ್ತುತ ಪರಿಸ್ಥಿತಿಯ ವಿವರಣೆಯನ್ನೊಳಗೊಂಡ ತಮ್ಮ ಲಿಖಿತ ಭಾಷಣವನ್ನು ಓದಿದರು.

"ಮುಂಬೈ ಭಾರತ ದೇಶದಲ್ಲಿ ಅತಿ ಮುಖ್ಯ ಕಾರ್ಮಿಕ ಕೇಂದ್ರ. ಕೆಂಬಾವುಟದ ಟ್ರೇಡ್ ಯೂನಿಯನ್ ಚಳುವಳಿ ಇಲ್ಲಿಂದಲೇ ಆರಂಭವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ನಿರ್ಣಾಯಕ ಸಂದರ್ಭಗಳಲ್ಲಿ ಮುಂಬೈ ಕಾರ್ಮಿಕರು ಸಮರ ದೀರಪಾತ್ರವಹಿಸಿದ್ದರು. ದೇಶದ ಇತರೆಡೆಗಳಲ್ಲಿ ನಾವು ಮುಂಬೈಯ ಧೀರ ಕಾರ್ಮಿಕರ ಹೋರಾಟಗಳಿಂದ ಪಾಠ ಕಲಿತು ಮುಂದುವರಿದೆವು. ಕಾರಣಾಂತರದಿಂದ ಮುಂಬೈಯಲ್ಲಿ ಕಾರ್ಮಿಕ ಸಂಘಟನೆಯಲ್ಲಿ ಹಿನ್ನಡೆವುಂಟಾಯಿತು. ಪುನಃ ಸಿ. ಐ. ಟಿ. ಯು. ಅಡಿಯಲ್ಲಿ ಮುಂಬೈ ಕಾರ್ಮಿಕರು ದೇಶದ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಮುನ್ನಡೆಯಲು ಆರಂಭಿಸಿರುವುದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆ" ಎಂದು ಕಾಂ॥ ಜ್ಯೋತಿಬಸು ನುಡಿದಾಗ ಅಪಾರ ಹರ್ಷೋದ್ಗಾರ ಹೊರಬಿದ್ದಿತು.

ವಿದೇಶಿ ಸೌಹಾರ್ದ ಪ್ರತಿನಿಧಿಗಳು ಅಧಿವೇಶನವನ್ನು ಉದ್ದೇಶಿಸಿ ಅಭಿನಂದಿಸಿದರು.

"ಭಾರತದ ಕಾರ್ಮಿಕ ವರ್ಗದ ಚಳುವಳಿ ಜಾಗತಿಕ ಕಾರ್ಮಿಕ ವರ್ಗದ ಚಳುವಳಿಯ ಒಂದು ಅವಿಭಾಜ್ಯ ಅಂಗವಾಗಿದ್ದು ಅದು ಶಾಂತಿಯನ್ನು ಕಾಪಾಡುವಲ್ಲಿ ಅಣು ಯುದ್ಧವನ್ನು ತಡೆಗಟ್ಟುವುದರಲ್ಲಿ ಪ್ರಮುಖ ಪಾತ್ರ ವಹಿಸಬೇಕು" ಎಂದು ಹಾರೈಸಿದರು.

ಪ್ರಧಾನ ಕಾರ್ಯದರ್ಶಿಯವರ ವರದಿ :

ಕಾ॥ ಸಮರ್ ಮುಖರ್ಜಿಯವರು ಪ್ರಧಾನ ಕಾರ್ಯದರ್ಶಿಯಾಗಿ ಅಧಿವೇಶನದ ಪ್ರಮುಖ ವರದಿಯನ್ನು ಮಂಡಿಸಿದರು.

ಅವರು "ಇದು 1983 ರಿಂದ 1987 ರವರೆಗಿನ ಸಿ. ಐ. ಟಿ. ಯು. ಚಟುವಟಿಕೆಗಳ ವರದಿ ಇದರಲ್ಲಿ ಮುಖ್ಯವಾಗಿ ಶಾಂತಿ ಚಳುವಳಿಯನ್ನು ಕಟ್ಟುವುದರಲ್ಲಿ, ಛಿದ್ರಕಾರಿ ಶಕ್ತಿಗಳನ್ನು ಎದುರಿಸಿ ದೇಶದ ಐಕ್ಯತೆಯನ್ನು ರಕ್ಷಿಸುವುದರಲ್ಲಿ, ರಾಜೀವ್ ಗಾಂಧಿಯವರ ಆರ್ಥಿಕ ನೀತಿಯ ವಿರುದ್ಧ ಹೋರಾಡುವುದರಲ್ಲಿ ಸಿ. ಐ. ಟಿ. ಯು. ಹೇಗೆ ಕೆಲಸ ಮಾಡುತ್ತ ಬಂದಿದೆ ಎಂಬುದರ ವಿವರಗಳಿವೆ. ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳುವಳಿಯಲ್ಲಿ ಸ್ತ್ರೀಯರು ಭುಜಕ್ಕೆ ಭುಜ ಕೊಟ್ಟು ನೇತೃತ್ವ ಪಾತ್ರ ವಹಿಸುವಂತೆ ಮಾಡಲು ಸಿ.ಐ.ಟಿ.ಯು. ಪ್ರತ್ಯೇಕ ಪ್ರಯತ್ನಗಳನ್ನು ಹೇಗೆ ಮಾಡುತ್ತ ಬಂದಿದೆ ಎಂಬ ವಿವರಗಳಿವೆ. ಎನ್. ಸಿ. ಸಿ. ಸಂಘಟನೆಯನ್ನು ಕಟ್ಟಿ ಬೆಳೆಸುವುದರಲ್ಲಿ ಅದರ ಕರೆಗಳಿಗನುಸಾರವಾಗಿ ಪ್ರಕ್ಷೋಭೆ-ಚಳುವಳಿಗಳನ್ನು ಸಂಘಟಿಸುವುದರಲ್ಲಿ ಸಿ. ಐ. ಟಿ. ಯು. ಹೇಗೆ ಶ್ರಮಿಸಿದೆ ಎಂಬ ವಿವರಗಳಿವೆ, ಟ್ರೇಡ್ ಯೂನಿಯನ್ ಐಕ್ಯತೆ ಮತ್ತು ಐಕ್ಯ ಹೋರಾಟ ಈ ತನಕ ಕೇಂದ್ರ ಸರ್ಕಾರದ ನೀತಿಗಳನ್ನು ವಿಶಾಲ ಪ್ರಮಾಣದಲ್ಲಿ ಕಾರ್ಮಿಕ ವರ್ಗ ಹಾಗೂ ದೇಶದ ಜನತೆ ಖಂಡಿಸುವಂತೆ ಮಾತ್ರ ಮಾಡಿದೆ. ಇದು ಸಾಲದು ಈ ಧೋರಣೆಗಳನ್ನು ಸೋಲಿಸಿ ಅದರ ಬದಲು "ಬದಲಿ ಧೋರಣೆಗಳನ್ನು ನಿರೂಪಿಸಬೇಕಾಗಿದೆ. ಈ ಉದ್ದೇಶ ಕೈಗೂಡುವಂತೆ ಮಾಡುವ ಸಲುವಾಗಿ ಇನ್ನಷ್ಟು ವಿಶಾಲವಾದ ಟ್ರೇಡ್ ಯೂನಿಯನ್ ಒಕ್ಕೂಟವನ್ನು ರಚಿಸಲು ನಾವು ಮುಂದಾಗಬೇಕು. ಆ ಬಗ್ಗೆ ನಾನು ಸ್ಪಷ್ಟವಾದ ನಿಲುವು ತಾಳಿ ಅಂತಹ ಒಕ್ಕೂಟವನ್ನು ಕಟ್ಟಿ ಬೆಳೆಸಲು ಮುತುವರ್ಜಿ ವಹಿಸಬೇಕು.

ಸಿ. ಐ. ಟಿ. ಯು. ಉಪಾಧ್ಯಕ್ಷರಾಗಿ ಕಾಂ. ಸೂರ್ಯನಾರಾಯಣರಾವ್

ಸಿ.ಐ.ಟಿ.ಯು ಪದಾಧಿಕಾರಿಗಳಾಗಿ 6ನೇ ಸಮ್ಮೇಳನದಲ್ಲಿ ಚುನಾಯಿತರಾದವರು.

ಅಧ್ಯಕ್ಷರು :	ಕಾಂ. ಬಿ. ಟಿ. ರಣದಿವೆ
ಪ್ರಧಾನ ಕಾರ್ಯದರ್ಶಿ :	ಕಾಂ. ಸಮರ ಮುಖರ್ಜಿ
ಖಜಾಂಚಿ	ಕಾಂ. ಬಾಲಾನಂದನ್
ಉಪಾಧ್ಯಕ್ಷರುಗಳು :	ಕಾಂ. ಜ್ಯೋತಿ ಬಸು
	ಕಾಂ. ಪಿ. ರಾಮಮೂರ್ತಿ
	ಕಾಂ. ಮನೋರಂಜನ್ ರಾಯ್
	ಕಾಂ. ಕಣ್ಣನ್
	ಕಾಂ. ನಂದೂರಿಪ್ರಸಾದರಾವ್
	ಕಾಂ. ಮಹಮ್ಮದ್ ಇಸ್ಮಾಯಿಲ್
	ಕಾಂ. ಕೊಲ್ಹಾಟ್‌ಕರ್
	ಕಾಂ. ಸುಶೀಲಾ ಗೋಪಾಲನ್
	ಕಾಂ. ಸಾನ್ಸ್‌ಗಿರಿ
	ಕಾಂ. ಸೂರ್ಯನಾರಾಯಣ ರಾವ್
	ಕಾಂ. ಚಂಡೀಪ್ರಸಾದ್
ಕಾರ್ಯದರ್ಶಿಗಳು :	ಕಾಂ. ಎಂ. ಕೆ. ಪಂಧೆ
	ಕಾಂ. ನೃಸಿಂಘ ಚಕ್ರವರ್ತಿ
	ಕಾಂ. ನಿರೇನ್ ಘೋಷ್
	ಕಾಂ. ಲಾರೆನ್ಸ್ ಎಂ. ಎಂ.
	ಕಾಂ. ವಿಮಲಾ ರಣದಿವೆ
	ಕಾಂ. ಪಿ. ಕೆ. ಗಂಗೂಲಿ

ವಿಸ್ತೃತ ಚರ್ಚೆ :

ಪ್ರತಿನಿಧಿಗಳು ರಾಜ್ಯ ರಾಜ್ಯದವರು ಪ್ರತ್ಯೇಕ ಪ್ರತ್ಯೇಕ ಸೇರಿ ತಮಗೆ ನಿಗದಿ ಪಡಿಸಿದ ಕಾಲಾವಕಾಶವನ್ನು ಸಂಪೂರ್ಣ ವಾಗಿ ಉಪಯೋಗಿಸಿ, ಪ್ರಧಾನ ಕಾರ್ಯ ದರ್ಶಿಯವರ ವರದಿಯ ಕುರಿತು ತಮ್ಮ ತಮ್ಮ ರಾಜ್ಯಗಳ ಟ್ರೇಡ್ ಯೂನಿಯನ್ ಚಳುವಳಿಯ ಶ್ರೀಮಂತ ಅನುಭವದ ಆಧಾರದಲ್ಲಿ ಚರ್ಚಿಸಿದರು.

ಪಶ್ಚಿಮ ಬಂಗಾಳದ ಸಿ. ಐ. ಟಿ. ಯು. ಸೆಕ್ರೆಟರಿ ಕಾಂ॥ ಮನೋರಂಜನ ರಾಯ್ ಕೇರಳದ ಪ್ರಮುಖ ಟಿ. ಯು. ಮುಂದಾಳು ಪದ್ಮಲೋಚನ, ತಮಿಳು ನಾಡಿನ ವರದರಾಜನ್, ಮಹಾರಾಷ್ಟ್ರದ ಸಾನ್ಸ್‌ಗಿರಿ, ಕರ್ನಾಟಕದ ಸೂರ್ಯನಾರಾ ಯಣರಾವ್ ಮತ್ತಿತರ ಎಲ್ಲ ರಾಜ್ಯಗಳ ಮುಂದಾಳುಗಳು ಚರ್ಚೆಯಲ್ಲಿ ಭಾಗವಹಿಸಿ ದರು. ಪಶ್ಚಿಮ ಬಂಗಾಳದ ಕಾಂ॥ ಮಹ ಮದ್ ಇಕ್ಬಾಲ್ ಇವರು ಮಾತ ನಾಡುತ್ತಾ "ಈ ವರದಿ ಮತ್ತು ಅಧ್ಯಕ್ಷರ ಭಾಷಣ ಸಿ. ಐ. ಟಿ. ಯು. ಗೆ ಒಂದು ಕಣ್ಣೋಟ ಕೊಟ್ಟಿದೆ. ಈ ಹೊಸ ಕಣ್ಣೋ ಟದ ಆಧಾರದಲ್ಲಿ ಮುತುವರ್ಜಿವಹಿಸಿ ದೇಶದ ಮೂಲೆಗಳಲ್ಲಿ ಸಿ. ಐ. ಟಿ. ಯು. ಕಾರ್ಯಕರ್ತರು ಕಾರ್ಯವೆಸಗಿದರೆ ದೇಶದ ಪರಿಸ್ಥಿತಿಯಲ್ಲಿ ಗುಣಾತ್ಮಕ ಬದಲಾವಣೆ ಯನ್ನು ತರುವುದರಲ್ಲಿ ಏನು ಸಂಶಯವಿಲ್ಲ" ಎಂದು ಉದ್ಗರಿಸಿದರು.

ಕಾಂ॥ ಸೂರ್ಯನಾರಾಯಣರಾವ್ ಮಾತ ನಾಡುತ್ತ "ಸಿ. ಐ. ಟಿ. ಯು. ಕಳೆದ 3 ವರ್ಷಗಳಲ್ಲಿ ಕರ್ನಾಟಕದಲ್ಲಿ ಸ್ವತಂತ್ರ ವಾಗಿ ಹಲವಾರು ಚಳುವಳಿಗಳನ್ನು ನಡೆಸುವ ಮೂಲಕ ಪ್ರಮುಖ ಕಾರ್ಮಿಕ ಸಂಘಟನೆಯ ಸ್ಥಾನಕ್ಕೆ ಬೆಳೆದು ಬರು ತ್ತಿದೆ. ಐಕ್ಯ ಕಾರ್ಯಾಚರಣೆ ಮಾಡಲು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದೆ. ಹಲವು ಕೈಗಾರಿಕೆಗಳಲ್ಲಿ ಪ್ರಮುಖ ಸ್ಥಾನ ವನ್ನು ಪಡೆದಿದೆ ರೈತ ಸಂಘಟನೆಯು ರಾಜ್ಯದಲ್ಲಿ ಬೆಳೆಯುವುದಕ್ಕೆ ಹಲವಾರು ರೀತಿಯಲ್ಲಿ ಸಹಾಯ ಮಾಡುತ್ತಿದೆ. ಶಾಂತಿ ಚಳುವಳಿಯನ್ನು ಕಾರ್ಮಿಕರಲ್ಲಿ ಬೆಳೆಸಲು ಶ್ರಮವಹಿಸಿ ದುಡಿಯುತ್ತಿದೆ" ಎಂದು ವಿವರಿಸಿದರು

ಛಿದ್ರಕಾರಿ ಶಕ್ತಿಗಳ ವಿರುದ್ಧ ಪ್ರಾಣ ವನ್ನು ಮುಡಿಪಾಗಿಟ್ಟು ನಾವು ಭಾಷೆ ಮತ್ತು ಮತೀಯ ಅಲ್ಪ ಸಂಖ್ಯಾತರ ಬಗ್ಗೆ ಕೆಲಸ ಮಾಡುತ್ತ ಬಂದುದರ ಫಲವಾಗಿ

ವಿರೋಧ ಪಕ್ಷಗಳ ದೆಹಲಿ ಸಮ್ಮೇಳನ

(5ನೇ ಪುಟದಿಂದ ಮುಂದುವರೆದುದು)

ಆದರೆ ಈ ಸಮ್ಮೇಳನ ಸಮಾನ ಅಭಿ ಪ್ರಾಯದ ರಾಜಕೀಯ ಪಕ್ಷಗಳ ಒಕ್ಕೂಟ ರಚನೆಯ ಮೂಲತಃ ಕರ್ನಾಟಕದ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆ ಯವರ ಪ್ರಸ್ತಾಪವನ್ನು ಒಪ್ಪಿಕೊಳ್ಳಲಿಲ್ಲ. ಸಿ.ಪಿ.ಐ(ಎಂ)ನೇ ! ಮತ್ತು ।। ರಂದು ಸಂಯೋಜಕರಾದ ರಾಮರಾವ್‌ಗೆ ಪತ್ರ ಬರೆದು ಕೆಲವು ಮುಖ್ಯ ನೀತಿಬದ್ಧ ಪ್ರಶ್ನೆ ಗಳ ಮೇಲೆ ವಿರೋಧ ಪಕ್ಷಗಳು ಭಿನ್ನ ಭಿನ್ನ ನಿಲುವು ಹೊಂದಿರುವಾಗ ಒಕ್ಕೂಟದ ಪ್ರಯತ್ನ ಐಕ್ಯತೆಯ ಬದಲು ತದ್ವಿರುದ್ಧ ಪರಿಣಾಮ ಬೀರ ಬಹುದೆಂದು ಅಭಿಪ್ರಾಯ ಪಟ್ಟು, 1983-84 ರಲ್ಲಿ ವಿರೋಧ ಪಕ್ಷ ಗಳ ಅಖಿಲ ಭಾರತ ಸಮ್ಮೇಳನಗಳು ಮುಖ್ಯವಾಗಿ ಅಕ್ಟೋಬರ್ '83 ರಲ್ಲಿ ಶ್ರೀನಗರ ಸಮ್ಮೇಳನ ಮತ್ತು ಜನವರಿ 84'ರ ಕಲ್ಕತ್ತಾ ಸಮ್ಮೇಳನ ಐಕ್ಯತೆಯ ಪ್ರಯತ್ನಗಳತ್ತ ಒಳ್ಳೆಯ ಆರಂಭ ಹಾಕಿ ಕೊಟ್ಟಿದ್ದು ಅದನ್ನು ಮುಂದುವರಿಸಿ ಐಕ್ಯತೆಯಿಂದ ಕೆಲಸ ಮಾಡುವ ಬದಲು ಕೈಗೂಡಲಾರದ ಒಕ್ಕೂಟ ರಚನೆಯ ಬೆನ್ನಟ್ಟಿದರೆ ಈಗಾಗಲೇ ಸಾಧಿಸಿದ ಐಕ್ಯ ತೆಯೂ ಅಸ್ಥಿರಗೊಳ್ಳ ಬಹುದೆಂದು ತಿಳಿಸಿತ್ತು. ಒಂದು ಸಮರ್ಥ ಬದಲಿ ಒದಗಿಸುವ ಪ್ರಶ್ನೆಗೆ ಸಿದ್ಧ ಪರಿಹಾರವೇನಿಲ್ಲ, ಸಾಮೂಹಿಕ ಹೋರಾಟಗಳನ್ನು ತೀವ್ರ ಗೊಳಿಸುವುದರಿಂದ ಮಾತ್ರವೇ ಅದುಸಾಧ್ಯ ಎಂಬ ಏಪ್ರಿಲ್ 9-12 ರ ಪಕ್ಷದ ಕೇಂದ್ರ ಸಮಿತಿಯ ನಿರ್ಣಯ ಸಿ. ಪಿ. ಐ. (ಎಂ) ಪಾಲಿಟ್‌ಬ್ಯೂರೋ ಬರೆದ ಈ ಪತ್ರಗಳಿಗೆ ಮಾರ್ಗದರ್ಶಿಯಾಗಿತ್ತು.

ಸಮ್ಮೇಳನದಲ್ಲಿ ಭಾಗವಹಿಸಿದ ಇತರ ಕೆಲವು ಪಕ್ಷಗಳು ಕೂಡಾ ಒಕ್ಕೂಟದ ಪ್ರಸ್ತಾಪಕ್ಕೆ ಒಪ್ಪದೆ, ಸರ್ವಸಾಮಾನ್ಯ ಪ್ರಶ್ನೆಗಳ ಮೇಲೆ ಜಂಟಿ ಕಾರ್ಯಚರಣೆಗಳು ಅತ್ಯಗತ್ಯವಾದರೂ ಒಂದೇ ಶಿಸ್ತಿಗೊಳ ಪಡುವ ಒಂದೇ ಸಂಘಟನೆಯ ರಚನೆಯ ಪ್ರಯತ್ನ ರಾಜಕೀಯ ಪಕ್ಷಗಳ ಸ್ವತಂತ್ರ ಚಟುವಟಿಕೆಗಳಿಗೆ ವಿರುದ್ಧವಾದುದು ಎಂದು ಅಭಿಪ್ರಾಯ ಪಟ್ಟವು.

ಈ ಒಕ್ಕೂಟ ಎಂದರೇನು ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲದವರೂ ಇದ್ದರು. ಅವರು ತಮ್ಮ-ತಮ್ಮ ಪಕ್ಷದೊಳಗೆ ಹಾಗೂ ಇತರ ಪಕ್ಷಗಳೊಂದಿಗೆ ಈ ಬಗ್ಗೆ ಚರ್ಚೆ ನಡೆಸಲು ಸಮಯಾವಕಾಶ ಬೇಕೆಂದರು.

ಆದ್ದರಿಂದ ಜಂಟೀ ಕಾರ್ಯಚರಣೆ ಗಳನ್ನು ಹೇಗೆ ರೂಪಿಸಬೇಕು ಎಂಬುದನ್ನು ನಿರೂಪಿಸುವ ತಮ್ಮ-ತಮ್ಮ ಟಿಪ್ಪಣಿಗಳನ್ನು ಎಲ್ಲಾ ಪಕ್ಷಗಳು ಆಂತರಿಕವಾಗಿ ಚರ್ಚಿಸಿ ಇತರ ಪಕ್ಷಗಳೊಂದಿಗೆ ಅದನ್ನು ವಿನಿ ಮಯ ಮಾಡಿಕೊಂಡ ನಂತರವೇ ಏನಾ ದರೂ ಉಪಯುಕ್ತ ನಿರ್ಣಯಕ್ಕೆ ಬರಲು ಸಾಧ್ಯ ಎಂದುಒಪ್ಪಿಕೊಳ್ಳಲಾಯಿತು. ○

ಸಿ. ಐ. ಟಿ. ಯು. ಅಸ್ಸಾಂನಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ" ಎಂದು ಅಸ್ಸಾಂನ ಕಾಮ್ರೆಡ್ ಹೇಳಿದರು.

"ಸತತವಾಗಿ ಕೋಮುವಾದಿ ಜಾತಿ ವಾದಿ ಶಕ್ತಿಗಳ ವಿರುದ್ಧ ಹಾಗೂ ಕಾಂಗ್ರೆಸಿನ ಕಾರ್ಮಿಕ ವಿರೋಧಿ ಜನ ವಿರೋಧಿ ನೀತಿಗಳ ವಿರುದ್ಧ ಮತ್ತು ರಾಷ್ಟ್ರೀಯ ಪ್ರಶ್ನೆಗಳ ಕುರಿತು ಪ್ರಕ್ಷೋಭೆ-ಹೋರಾಟ ಮಾಡುತ್ತ ಬಂದುದರಿಂದ ಪ್ರಪ್ರಥಮವಾಗಿ 2 ದಶಕಗಳ ನಂತರ ಕೇರಳದಲ್ಲಿ ಎಡ-ಪ್ರಜಾಪ್ರಭುತ್ವ ಐಕ್ಯರಂಗಕ್ಕೆ ಆಡಳಿತೆಗೆ ಬರಲು ಸಾಧ್ಯವಾಗಿದೆ" ಎಂದು ಕಾಂ॥ ಪದ್ಮಲೋಚನ ಇವರು ಕೇರಳದ ಟಿ.ಯು. ಚಳುವಳಿಯ ಕುರಿತು ಅನುಭವಗಳನ್ನು ಪ್ರತಿನಿಧಿಗಳೊಡನೆ ಹಂಚಿ ಕೊಂಡರು.

"ಎಲ್ಲರಿಗಿಂತಲೂ ಮುಂದಿನ ಸಾಲಿನಲ್ಲಿ ಖಾಲಿ ಸ್ತಾನದ ವಿಛಿದ್ರಕಾರಿ ಶಕ್ತಿಗಳಿಂದ ಪಂಜಾಬನ್ನು ರಕ್ಷಿಸುವ ಕೆಲಸದಲ್ಲಿ ಪ್ರಾಣ ತೆತ್ತ ಸಿ. ಐ. ಟಿ. ಯು. ಕಾರ್ಯಕರ್ತರು ಸಿ. ಐ. ಟಿ. ಯು. ಕಾರ್ಮಿಕರು ದುಡಿಯುತಿದ್ದಾರೆ" ಎಂದು ಪಂಜಾಬ್‌ನ ಸಂಗಾತಿ ನುಡಿದಾಗ ಅದು ಹಿಂದಿನ ದಿನ ಕಾಂ॥ ದೀಪಕ್ ಧಾವನ್ ಇವರು ವೈರಿಗಳ ಕತ್ತಿಗೆ ಬಲಿಯಾದ ಹಿನ್ನೆಲೆಯಲ್ಲಿ ಪ್ರತಿನಿಧಿಗಳೆಲ್ಲರಲ್ಲೂ ರೋಮಾಂಚನವಾಯಿತು.

ದುಡಿಯುವ ಮಹಿಳೆಯ ದಿನ

ಅಧಿವೇಶನದಲ್ಲಿ ಒಂದುದಿನ ಇಡಿಯಾಗಿ ಮೇ 20 1987 ರಂದು ಕಾಂ॥ ವಿಮಲಾ ರಣದಿವೆಯವರು ಪ್ರತಿನಿಧಿಗಳಿಗೆ ಒದಗಿಸಿದ ವಿಮರ್ಶಾ ವರದಿಯ ಮೇಲೆ ವಿವಿಧ ರಾಜ್ಯಗಳ 19 ಮಂದಿ ದುಡಿಯುವ ಮಹಿಳೆಯರು ಎದುರಿಸುವ ಸಮಸ್ಯೆಗಳು, ಅವುಗಳ ಪರಿಹಾರಕ್ಕೆ ನಡೆಯುವ ಹೋರಾಟಗಳು, ಎಲ್ಲರಲ್ಲೂ ಹೆಚ್ಚಾಗಿ ದುಡಿಯುವ ಮಹಿಳೆಯರನ್ನು ಸಿ. ಐ. ಟಿ. ಯು. ಸಂಘಟನೆಗಳಡಿಯಲ್ಲಿ ತರಲು ನಡೆಯುತ್ತಿರುವ ಸತತವಾದ ಕಾರ್ಯ ಮತ್ತು ನೇತೃತ್ವ ವಹಿಸಲು ಎಲ್ಲ ರಾಜ್ಯಗಳಲ್ಲಿ ನಡೆಯುವ ಹೋರಾಟಗಳ ಕುರಿತು ಕಣ್ಣಿಗೆ ಕಟ್ಟುವ ರೀತಿಯಲ್ಲಿ ವಿವರಗಳನ್ನು ತಮ್ಮದೆ ಆದ ಭಾಷೆಯಲ್ಲಿ ವಿವರಿಸಿದರು.

ತ್ರಿಪುರದ ತ್ರಿಪುರಿ ಬುಡಕಟ್ಟಿನ ಮಹಿಳಾ ಸಂಗಾತಿಯ ನಿರರ್ಗಳವಾದ ಭಾಷಣವು ಎಲ್ಲ ಸಂಗಾತಿಗಳನ್ನು ದಂಗುಬಡಿಸಿತು. ತಮಿಳುನಾಡು, ಕೇರಳ, ಬಿಹಾರ್, ಡಿಲ್ಲಿ ಮತ್ತು ಆಂಧ್ರ ಪ್ರದೇಶದ ಮಹಿಳಾ ಪ್ರತಿನಿಧಿಗಳಾಗಿ ಅಸಂಖ್ಯಾತ ಸಂಖ್ಯೆಗಳಲ್ಲಿ* ತಮ್ಮ ತಮ್ಮ ರಾಜ್ಯಗಳಲ್ಲಿ ದುಡಿಯುವ ಮಹಿಳೆಯರು ಸಿ.ಐ.ಟಿ.ಯು., ವಿನಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ಮಾಡಿ, ಅವರ ಜಾಗೃತಿಯನ್ನು ಕ್ರಾಂತಿಕಾರಿ ದಿಕ್ಕಿನಲ್ಲಿ ಬೆಳೆಸಲು ಏನು ಪ್ರಯತ್ನಗಳು ನಡೆಯುತ್ತಿವೆ ಎಂಬುದನ್ನು ವಿವರಿಸಿದರು. ಸ್ತ್ರೀಯರ ಕುರಿತು ಪಾಳೆಯಗಾರಿ ನಡವಳಿಕೆಗಳು ಈಗಲೂ ಬೇರೆಯವರಲ್ಲಿ ಮಾತ್ರವಲ್ಲ ಕಾರ್ಮಿಕರಲ್ಲಿ ಕಾರ್ಮಿಕ ಸಂಘಟನೆಗಳಲ್ಲಿ ಸಿ.ಐ.ಟಿ.ಯು. ಸಂಘಟನೆಗಳಲ್ಲಿ ಈಗಲೂ ಇದೆ" ಎಂಬುದಕ್ಕೆ ಹಲವು ಉದಾಹರಣೆಗಳನ್ನು ಕೊಟ್ಟು "ಅವುಗಳನ್ನು ತೊಡೆದು ಹಾಕಲು ಸಿ.ಐ.ಟಿ ಯು, ನೇತೃತ್ವ ಹಾಕಿದ ದಾರಿಯಲ್ಲಿ ನಾವು ದೃಢವಾಗಿ ಶ್ರಮಿಸುವುದು ಅತ್ಯಂತ ಅವಶ್ಯಕ, ಕ್ರಾಂತಿಕಾರಿ ಚಳವಳಿಯನ್ನು ಬೆಳೆಸುವ ದೃಷ್ಟಿಯಲ್ಲಿ" ಎಂಬುದನ್ನು ಈ ಎಲ್ಲಾ ಭಾಷಣಗಳ ಮೂಲಕ ಸಿ.ಐ.ಟಿ ಯು, ಎಲ್ಲಾ ಪ್ರತಿನಿಧಿಗಳಿಗೆ ಮನದಟ್ಟು ಮಾಡಲಾಯಿತು.

ಕರ್ನಾಟಕದಿಂದ ರಾಷ್ಟ್ರೀಯ ಪರಿಷತ್ತಿನ ಸದಸ್ಯರು

ಕಾರ್ಯಕಾರಿ ಮಂಡಳಿ ಸದಸ್ಯರು :

1. ಕಾ॥ ಸಿ. ನಂಜುಂಡಪ್ಪ
2. ಕಾ॥ ವಿ. ಜೆ. ಕೆ. ನಾಯರ್

ಇತರ ರಾಷ್ಟ್ರೀಯ ಪರಿಷತ್ ಸದಸ್ಯರು:

1. ಮೂಸಬ್ಬ
2. ಬಿ. ಮಾಧವ
3. ಕೆ. ಶಂಕರ
4. ಪದ್ಮಾವತಿ
5. ರಾಜಮ್ಮ
6. ಎಂ. ಬಿ. ಕಟ್ಟಿ
7. ಟಿ. ಎಸ್. ಮಣಿ
8. ಮಹಮ್ಮದ್ ದಸ್ತಗೀರ್

ಠರಾವುಗಳು

ಮಧ್ಯೆ ಮಧ್ಯೆ ಸಮಯಾವಕಾಶವನ್ನು ಉಪಯೋಗಿಸಿ ಹಲವು ಪ್ರಮುಖ ಗೊತ್ತುವಳಿಗಳನ್ನು ಅಧಿವೇಶನವು ಅಂಗೀಕರಿಸಿತು, ಶಾಂತಿಯ ಗೊತ್ತುವಳಿಯಲ್ಲಿ ಈ ಚಳುವಳಿಯು ಹೇಗೆ ನಮ್ಮ ಎಲ್ಲ ದಿನನಿತ್ಯದ ಹೋರಾಟಗಳ ಅವಿಭಾಜ್ಯ ಭಾಗವಾಗಿದೆ ಎಂಬ ವಿವರಗಳನ್ನು ಕೊಡಲಾಯಿತು. "ತಟಸ್ಥ ನೀತಿ" ಕೇವಲ ರಾಜೀವ ಗಾಂಧಿಯ ನೀತಿಯಲ್ಲ ಅದು ಇಡೀ ರಾಷ್ಟ್ರದ ಸಾಮ್ರಾಜ್ಯ ಶಾಹಿಗಳ ವಿರುದ್ಧ ಹೋರಾಟದ ವೇದಿಕೆಯಾಗಿದೆ, ಎಂಬುದನ್ನು ಸೂಚಿಸುವ ಈ ನೀತಿಯನ್ನು ಯಾವುದೇ ಸಂದರ್ಭದಲ್ಲಿ ಆಳುವ ಪಕ್ಷ ಮತ್ತು ಆಳುವ ವರ್ಗಗಳು ಬದಲಾಯಿಸದಂತೆ ನೋಡುವ ಜವಾಬ್ದಾರಿ ಕಾರ್ಮಿಕ ವರ್ಗಕ್ಕಿದೆ. ಎಂಬ ಗೊತ್ತುವಳಿ ಅಂಗೀಕಾರವಾಯಿತು.

ಟ್ರೇಡ್ ಯೂನಿಯನ್ ವಿಶಾಲವಾದ ಐಕ್ಯತೆ ಯಾಕೆ ಇಂದಿನ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ನೀತಿಗಳು ವಿಫಲವಾಗುತ್ತಿರುವ ಸ್ಥಿತಿಗತಿಗಳಲ್ಲಿ, ರಾಜೀವ ಗಾಂಧಿಯ ಸರ್ಕಾರದ ಬುಡವೇ ಅಲುಗಾಡುತ್ತಿರುವ ಸಂದರ್ಭದಲ್ಲಿ ಎದುರಿಸುತ್ತಿರುವ ಘೋರಣೆಗಳನ್ನು ದೇಶದ ಜನತೆಯ ಮುಂದೆ ಇರಿಸುವ ದೃಷ್ಟಿಯಲ್ಲಿ ಅತ್ಯವಶ್ಯಕ ಎಂಬ ವಿವರಗಳುಳ್ಳ ಹಾಗೂ ಅಧಿವೇಶನ ಕರೆ ಕೊಡುವ ಠರಾವನ್ನು ಅಧಿವೇಶನವು ಕರತಾಡನಗಳಿಂದ ಅಂಗೀಕರಿಸಿತು.

ಪ್ರಧಾನ ಕಾರ್ಯದರ್ಶಿಗಳ ವರದಿ ಅಂಗೀಕಾರ

ಸುಮಾರು 45 ನಿಮಿಷಗಳ ಕಾಲ ಕಾ॥ ಸಮರ ಮುಖರ್ಜಿಯವರು ಚರ್ಚೆಗೆ ಉತ್ತರ ವಿತ್ತನಂತರ ಅವರ ವರದಿಯನ್ನು ಅಧಿವೇಶನವು ಆವೇಶಕರ ಕರತಾಡನಗಳಿಂದ ಅಂಗೀಕರಿಸಿತು. ಇದು ಸಿ. ಐ. ಟಿ. ಯು. ನ ಹೊಸ ನೀತಿಗೆ ಸಿಕ್ಕ ಅಂಗೀಕಾರವೆನ್ನಬಹುದು.

ಸಂವಿಧಾನದ ತಿದ್ದುಪಡಿ

ಇನ್ನು ಮುಂದೆ ಸಿ. ಐ. ಟಿ. ಯು. ಸದಸ್ಯರಿಂದ 20 ಪೈಸೆ ಎಫಿಲಿಯೇಷನ್ ಫೀ ಸಂಪೂರ್ಣವಾಗಿ ಕೇಂದ್ರ ಸಿ. ಐ. ಟಿ. ಯು. ವಿಗೆ ಹೋಗಬೇಕೆಂದು ರಾಜ್ಯಗಳಿಂದ ಪ್ರತಿಯೊಬ್ಬ ಸಿ. ಐ. ಟಿ. ಯು. ಸದಸ್ಯನಿಂದ ಎಷ್ಟು ಎಫಿಲಿಯೇಷನ್ ಫೀಸ್ ಎಂದು ಆಯಾಯ ರಾಜ್ಯಗಳು ತೀರ್ಮಾನಿಸಬೇಕೆಂದು ರಾಜ್ಯಗಳಿಗೆ ಕೇಂದ್ರದ ಎಫಿಲಿಯೇಷನ್‌ನಲ್ಲಿ ಪಾಲುಗಳಿಲ್ಲವೆಂದು ಅರ್ಥ ಬರುವ ತಿದ್ದುಪಡಿಗಳನ್ನು ಅಧಿವೇಶನವು ಅಂಗೀಕರಿಸಿತು.

ಕಾ॥ ಜ್ಯೋತಿಬಸು

ಸಿ. ಐ. ಟಿ. ಯು. ಉಪಾಧ್ಯಕ್ಷರು ಪಶ್ಚಿಮ ಬಂಗಾಳದ ಎಡ ಸರ್ಕಾರದ ಮುಖ್ಯ ಮಂತ್ರಿ ಕಾ॥ ಜ್ಯೋತಿಬಸುರವರು ಒಂದು ಗಂಟೆ ಕಾಲ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. "ನಾನು ಈಗಲೂ ಹಲವಾರು ಟಿ. ಯು. ಗಳ ಅಧ್ಯಕ್ಷ ಸಿ. ಐ. ಟಿ. ಯು. ಉಪಾಧ್ಯಕ್ಷನಾಗಿ ಕೆಲಸ ಮಾಡುತ್ತ ಬಂದಿದ್ದೇನೆ. ಈ ಸ್ಥಾನಗಳು ನನಗೆ ಎಡರಂಗ ಸರ್ಕಾರದ ಮುಖ್ಯ ಮಂತ್ರಿಯಾಗಿ ಕೆಲಸ ಮಾಡಲು ಸಹಾಯಕವಾಗಿದೆ" ಎಂದು ವಿವರಿಸಿದರು.

"ರಾಜೀವಗಾಂಧಿಯ ಆರ್ಥಿಕ ನೀತಿ ಹೇಗೆ ನಿರುದ್ಯೋಗದ ಬೆಳವಣಿಗೆಗೆ ಮೂಲವಾಗಿದೆ" ಎಂದು ವಿವರಿಸಿದರು.

ರೈತರ ಚಳುವಳಿಯನ್ನು ಪಶ್ಚಿಮ ಬಂಗಾಳದಲ್ಲಿ ಪ್ರತಿ ಹಳ್ಳಿಯಲ್ಲೂ ಕಟ್ಟಿ ಬೃಹತ್ ರೈತ ಸಂಘಟನೆಯನ್ನು ಕಟ್ಟಲು ಹೇಗೆ ಕಾರ್ಮಿಕ ವರ್ಗ ಪಶ್ಚಿಮ ಬಂಗಾಳದಲ್ಲಿ ದುಡಿದಿದೆ.

ಎಡರಂಗ ಸರ್ಕಾರವು ಸಹಾಯ ಮಾಡಿದೆ ಎಂದು ವಿವರಿಸಿದರು.

"ಇಡೀ ದೇಶದಲ್ಲಿ ಪರ್ಯಾಯ ಕಾರ್ಯಕ್ರಮದ ಕಾರ್ಮಿಕ ವರ್ಗದ ನೇತೃತ್ವ ಆಡಳಿತ ವ್ಯವಸ್ಥೆ ಬರಲು ದುಡಿಯೋಣ" ಎಂದು ಕರೆ ಕೊಟ್ಟರು.

ಕಾ॥ ಬಿ. ಟಿ. ಆರ್. ಇವರ ಅಧ್ಯಕ್ಷ ಭಾಷಣದೊಂದಿಗೆ ಅಧಿವೇಶನವು ಕೊನೆಗೊಂಡಿತು. ಅವರ ಭಾಷಣದ ಒಂದು ಮುಖ್ಯ ಅಂಶ ಹೀಗಿದೆ. "ಕೋಟಿ ಕೋಟಿ ಸಂಖ್ಯೆಯಲ್ಲಿ ಭಾರತದ ಕಾರ್ಮಿಕರು ಜಾಗೃತರಾಗಿ ತಮ್ಮ ಆರ್ಥಿಕ ಶೋಷಣೆಯ ವಿರುದ್ಧ ಮಾತ್ರವಲ್ಲ ದೇಶದಲ್ಲಿ ಬಂಡವಾಳಶಾಹಿ ಭೂ ಮಾಲೀಕ ವರ್ಗಕ್ಕೆ ಪರ್ಯಾಯವಾಗಿ ರಾಜಕೀಯ ಶಕ್ತಿಯಾಗಿ ಬೆಳೆಯುವ ಕರ್ತವ್ಯ ಪೂರೈಸುವ ದಿಕ್ಕಿನಲ್ಲಿ ನಾವು ಶ್ರಮಿಸಬೇಕು. ಹಾಗೆ ಶ್ರಮಿಸುವುದೆಂದರೆ ನಾವು ಸಿ. ಐ. ಟಿ. ಯು. ಸಂಘಟನೆಗಳನ್ನು ಸ್ವತಂತ್ರ

ಕಪ್ಪು ನಾಡಿನ ಕ್ರಾಂತಿ ಗೀತೆ

ಕಗ್ಗತ್ತಲ ಖಂಡದ
ಕಾರ್ಮೋಡಗಳು
ಅಬ್ಬರಿಸಿ
ಗುಡುಗಿದವು
"ಧಿಕ್ಕಾರ, ಧಿಕ್ಕಾರ"
ಬೋಥಾ ಆಳ್ವಿಕೆಗೆ
ಧಿಕ್ಕಾರ,

ಕಾಡು ನೋಡಿನ
ನಾಡಿನ
ಹುಲಿ ಸಿಂಹಗಳು
ರೋಷದಲಿ
ಘರ್ಜಿಸಿದವು
ಕಿಕ್ ಔಟ್ ಪ್ರಿಟೋ"

ಮೊಲಾಯಿಸ್
ಕವಿಯ
ಬಿಸಿ ರಕ್ತದಿಂದ
ರೋಮಾಂಚನಗೊಂಡ
ಕಪ್ಪು ನೆಲ
ಕ್ರೋಧದಲಿ
ಘೋಷಿಸಿತು
"ಕ್ರಾಂತಿ ಎಂದೂ ಚಿರಾಯು"

ದಟ್ಟಡವಿಯ
ಕಾರಿರುಳಲ್ಲಿ
ದುಂಬಿಗಳು ಝೇಂಕರಿಸಿದವು
"ನೆಲ್ಸನ್, ನೀ
ವಿಶ್ವ ಮಾನವ"

ನಾಗೇಶ್,
ವಿರಾಜಪೇಟೆ.

"ಸಮ್ಮೇಳನದ ಪ್ರತಿನಿಧಿಗಳು"

ಪ್ರತಿನಿಧಿಗಳು	2366	ಗಂಡಸರು	2312
ವೀಕ್ಷಕರು	80	ಹೆಂಗಸರು	134
ಒಟ್ಟು	2446		

ಮೇ 18-22 ರವರೆವಿಗೆ ಮುಂಬೈಯಲ್ಲಿ ನಡೆದ ಸಿ.ಟಿ.ಐ.ಯು. 6ನೇ ಸಮ್ಮೇಳನದಲ್ಲಿ ಸುಮಾರು 2446 ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಂಗಾತಿಗಳು ಸಂಘಟನೆಯನ್ನು ಕಟ್ಟಿ ಬೆಳೆಸುವಲ್ಲಿ ಅವರ ತ್ಯಾಗ - ಅನುಭವಗಳ ಕುರಿತು ಮುಂಡಿಸಿದ ವರದಿ ಇಲ್ಲಿದೆ. ಸರಿಸುಮಾರು ಅರ್ಧದಷ್ಟು ಪ್ರತಿನಿಧಿಗಳು ಜೈಲುವಾಸದ ಭೂಗತವಾಸದ ಕಹಿಯನ್ನು ಅನುಭವಿಸಿದವರೇ.

ಜೈಲುವಾಸ	ಅತ್ಯಂತ ಹೆಚ್ಚು	10 ವರ್ಷ	6–10 ವರ್ಷ	5 ವರ್ಷ	1 ವರ್ಷ
ಒಟ್ಟು 1132	14 ವರ್ಷ ಕಾ॥ ಬಿಜಾಯ್‌ವೌತ್	60	54	183	889
ಭೂಗತವಾಸ	ಅತ್ಯಂತ ಹೆಚ್ಚು	10 ವರ್ಷ	6-10 ವರ್ಷ	5 ವರ್ಷ	1 ವರ್ಷ
ಒಟ್ಟು 287	11 ವರ್ಷ ಕಾ॥ ಗುರುಭಕ್ತ ಸಿಂಗ್ (ಬಿಹಾರ)	1	34	180	383

ಕಾರ್ಮಿಕ ಸಂಘಟನೆ ಮಾಡಿದ್ದಕ್ಕಾಗಿ ಕೆಲಸ ಕಳೆದುಕೊಂಡವರು 577.

ಶಿಕ್ಷಣ	ಎರಡು ಡಿಗ್ರಿಗಳ ಉನ್ನತ ಪದವಿ	ಪದವಿ	ಪ್ರೌಢಶಾಲೆ	ಪ್ರಾಥಮಿಕ	ಅನಕ್ಷರಸ್ತರು
	134	428	988	880	31

ಸಚಿವರು	ಎಂ.ಪಿಗಳು	ಶಾಸಕರು	ಮುನ್ಸಿಪಲ್ ಸದಸ್ಯರು	ಪಂಚಾಯಿತ್ತಿ
5	7	44	74	70

ಅತ್ಯಂತ ಹಿರಿಯ ಹಾಗೂ 60 ವರ್ಷಗಳ ಕಾಲ ಕಾರ್ಮಿಕ ಸಂಘಟನೆಗಾಗಿ ದುಡಿದು ಚಾರಿತ್ರಿಕ ಅನುಭವವುಳ್ಳ ಸಂಗಾತಿಗಳು ಕಾ॥ ಬಿ. ಟಿ. ರಣದಿವೆ 83 ವರ್ಷ, ಕಾ॥ ಮಹಮ್ಮದ್ ಇಸ್ಮಾಯಿಲ್, ಕಾ॥ ಜಗತ್‌ರಾವ್ ಧತ್ರ್‌ರವರು ಅತ್ಯಂತ ಹಿರಿಯರು. ಕರ್ನಾಟಕದ 20 ವರ್ಷದ ಕಾ॥ ವೇದವತಿ ಹಾಗೂ ಕಾ॥ ಪುಟ್ಟಲಕ್ಷ್ಮಿ ಅತ್ಯಂತ ಕಿರಿಯರು ಪ್ರತಿನಿಧಿಗಳು.

ವಾಗಿ ವಿಶಾಲ ಪ್ರಮಾಣದಲ್ಲಿ ಬೆಳೆಸುವುದು ಮತ್ತು ಅವುಗಳನ್ನು ಪ್ರಜಾಸತ್ತಾತ್ಮಕವಾಗಿ ನಡೆಸುವುದು. ಪ್ರಜಾಸತ್ತಾತ್ಮಕವಾಗಿ ನಡೆಸುವುದು ಎಂದರೆ ಎಲ್ಲ ಕಾರ್ಮಿಕರು ತಮ್ಮ ಸಂಘಟನೆಗಳಲ್ಲಿ ಧೋರಣೆಗಳನ್ನು ನಿರೂಪಿಸುವುದರಲ್ಲಿ ತಂತ್ರಗಳನ್ನು ಹೋರಾಟದ ಠರಾವುಗಳನ್ನು ನಿರ್ಧರಿಸುವುದರಲ್ಲಿ ಪಾಲ್ಗೊಳ್ಳುವುದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಟ್ರೇಡ್ ಯೂನಿಯನ್‌ಗಳನ್ನು ನಡೆಸುವುದು.

"ಎನ್. ಸಿ. ಸಿ. ಸಂಘಟನೆಯು ಕಳೆದ ಕೆಲವು ವರ್ಷಗಳಲ್ಲಿ ಟಿ. ಯು. ಚಳುವಳಿಯನ್ನು ಪ್ರಜಾಪ್ರಭುತ್ವ ಮುನ್ನಡೆಸುವುದರಲ್ಲಿ ದೇಶದಲ್ಲಿಚಳುವಳಿಯನ್ನು ನಡೆಸುವುದರಲ್ಲಿ ಸಹಾಯಕವಾಗಿದೆಯಾದರೂ, ಈಗ ಹಿಂದಕ್ಕಿಂತಲೂ ಹತ್ತು ಪಟ್ಟು ವಿಸ್ತೃತವಾದಇಡೀ ಕಾರ್ಮಿಕ ವರ್ಗವನ್ನು ಪ್ರತಿನಿಧಿಕರಿಸಿ ಧೋರಣೆಗಳನ್ನು ತಳೆಯುವಂತಾಗಲೂ ಹಾಗೂ ಆಳುವ ವರ್ಗಗಳ ಜನವಿರೋಧಿ ಧೋರಣೆಗಳನ್ನು ತೋರಿಸುವ ಬೃಹತ್ ಹೋರಾಟಗಳನ್ನು ನಡೆಸಲು ಸಾಧ್ಯವಾಗಬೇಕಾದರೆ ನಾವು ಬೃಹತ್ ಟ್ರೇಡ್ ಯೂನಿಯನ್ ಒಕ್ಕೂಟ ರಚಿಸಿ ಮುಂದಾಗಬೇಕು."

ಎಲ್ಲ ಪ್ರತಿನಿಧಿಗಳು ಅತ್ಯಂತ ಸ್ಫೂರ್ತಿಯಿಂದ ತಮ್ಮ ತಮ್ಮ ರಾಜ್ಯಗಳಿಗೆ ಈ 6ನೆಯ ಸಿ. ಐ. ಟಿ. ಯು. ಸಮ್ಮೇಳನದ ಸಂದೇಶವನ್ನು ದೇಶದ ಮೂಲೆ ಮೂಲೆಗೆ ಒಯ್ಯುವ ದೃಢ ಪ್ರತಿಜ್ಞೆಯೊಂದಿಗೆ ಅಗಲಿದರು.

ಪಂಜಾಬ್ ಭಯೋತ್ಪಾದಕರ ಹಲ್ಲೆಗೊಳಗಾಗಿ

ಅಗಲಿದ ಸಂಗಾತಿ ಧಾವನ್‌ಗೆ ನಮನ

— ಇ. ಕೆ. ಎನ್. ರಾಜನ್

ಬಾಂಬೆಯ ಪಿ. ಕೆ. ಕುರ್ಜೆ ನಗರ. 3,000 ಜನ ಸಿ. ಐ. ಟಿ. ಯು. ಪ್ರತಿನಿಧಿಗಳು ಗಾಢ ನಿದ್ರೆಯಲ್ಲಿದ್ದಾರೆ. ಆ ನೀರವ ರಾತ್ರಿಯ ಮೌನವನ್ನು ಭೇದಿಸಿ ಇದ್ದಕ್ಕಿದ್ದಂತೆ ಮುಗಿಲು ಮೊಳಗುವಂತಹ ಘೋಷಣೆಗಳು, ಒಮ್ಮೆಯಲ್ಲ ನಾಲ್ಕಾರು ಬಾರಿ ಇದೇನಿದು ! ಎಂದು ಅನೇಕ ಜನ ಗಡಬಡಿಸಿ ಎದ್ದರು. ಹೊರಗೆ ಇಣುಕಿ ನೋಡಿದರೆ ಪಂಜಾಬ್‌ನ ಪ್ರತಿನಿಧಿಗಳು ಮತ್ತಿತರ ಕೆಲವರಿಂದ "ಖಾಲಿಸ್ತಾನಿ ಮುರ್ದಾಬಾದ್", "ಟೆರರಿಸ್ಟ್ ಮುರ್ದಾಬಾದ್", "ದೀಪಕ್ ಧಾವನ್ ಜಿಂದಾಬಾದ್" ಎಂಬ ಘೋಷಣೆಗಳು, ಜೊತೆಗೆ ಸಿ. ಐ. ಟಿ. ಯು. ಬಾವುಟ ಅರ್ಧ ಮಟ್ಟ ಕ್ಕಿಳಿದಿದೆ. ಆತಂಕದ ಭಾವನೆಯೊಡನೆ ಸಂಗಾತಿಗಳು ಇವರ ಜೊತೆಗೂಡಿದರು. ವಿಚಾರಿಸಿದರೆ 32 ವಯಸ್ಸಿನ ತರುಣ ದೀಪಕ್‌ಧಾವನ್ ಪಕ್ಷದ ಪಂಜಾಬ್ ರಾಜ್ಯ ಸಮಿತಿ ಸದಸ್ಯ ಕೊಲೆಗೀಡಾಗಿದ್ದರು. ತನ್ನ ನಿಷ್ಠ ಕೆಲಸದಿಂದ, ವಿಚ್ಛಿದ್ರಕಾರಿಗಳ ವಿರುದ್ಧ ನಿರಂತರ ಪ್ರಚಾರದಿಂದ ಭಯೋತ್ಪಾದಕರ ಎದೆಯಲ್ಲಿ ನಡುಕ ಹುಟ್ಟಿಸಿದ ಈ ಯುವಕನನ್ನು ಭಾರತದ ಈ ವೀರ ಪುತ್ರನನ್ನು ಖಾಲಿಸ್ತಾನಿ ಭಯೋತ್ಪಾದಕರು ಕೊಂದರು. ಭಾರತದ ಸ್ವಾತಂತ್ರ್ಯಕ್ಕಾಗಿ, ಸ್ವಾತಂತ್ರ್ಯ ಪಡೆದ 40 ವರ್ಷಗಳ ನಂತರ ಮತ್ತೊಂದು ಜೀವ ಆಹುತಿಯಾಯಿತು.

ಮಧ್ಯ ರಾತ್ರಿ ಈ ವಿಷಯ ಮುಂಬಯಿಗೆ ತಿಳಿದ ತಕ್ಷಣವೆ ಘೋಷಣೆಗಳನ್ನು ಕೂಗಿ ಖಾಲಿಸ್ತಾನಿಗಳ ವಿರುದ್ಧ ತಮ್ಮ ರಕ್ತ ಅರ್ಪಿಸಲು ಪಣತೊಟ್ಟ ಪಂಜಾಬ್‌ನ ಸಂಗಾತಿಗಳು, ಅವರ ಘೋಷಣೆಗಳಿಂದ ಎಚ್ಚರಗೊಂಡ ವಿವಿಧ ರಾಜ್ಯಗಳ ಸಂಗಾತಿಗಳು ಅರ್ಧ ಮಟ್ಟಕ್ಕಿಳಿಸಿದ ಧ್ವಜದ ಮುಂದೆ ರಾಜ್ಯವಾರಾಗಿ ಘೋಷಣೆಗಳನ್ನು ಕೂಗಿ ತಮ್ಮ ವೀರ ವಂದನವನ್ನರ್ಪಿಸಿದರು. ತಾವು ಕಾಣದ ಈ ಯುವ ಸಂಗಾತಿಗಾಗಿ ಕಂಬನಿ ಮಿಡಿದರು.

ಹೀಗೆ ಒಗ್ಗೂಡಿದ ಸಂಗಾತಿಗಳ ಸಭೆ ತನ್ನಿಂದ ತಾನೆ ಸಂತಾಪಸೂಚಕ ಸಭೆಯಾಗಿ ಪರಿವರ್ತಿತವಾಯಿತು. ಪಕ್ಷದ ಕೇಂದ್ರ ಸಮಿತಿ ಸದಸ್ಯೆ ಅಹಲ್ಯಾ ರಂಗನೇಕರ್ ಅಧ್ಯಕ್ಷತೆ ವಹಿಸಿ ಮಾತನಾಡುವಾಗ ತಮ್ಮ ಕುಟುಂಬದ ಆಪ್ತರೇ ಒಬ್ಬರು ಕಳೆದುಹೋದಂತೆ ಅವರ ಕಣ್ಣುಗಳಲ್ಲಿ ನೀರುಕ್ಕಿತು. "ನಾವು ನೋಡುತ್ತಿರುವ ಈ ಬಾವುಟವೂ ಕೆಂಪು ಕಾ|| ದೀಪಕ್ ಧಾವನ್‌ರವರ ರಕ್ತವೂ ಕೆಂಪು. ಇಂತಹ ಅನೇಕ ಸಂಗಾತಿಗಳ ರಕ್ತದಿಂದ ಕೆಂಪಾದ ಬಾವುಟ ಇದು." ಎಂದ ಅವರಿಗೆ ದುಃಖ ಉಕ್ಕಿ ಮುಂದೆ ಮಾತನಾಡಲಾಗಲಿಲ್ಲ. ಈ ಸಭೆಯಲ್ಲಿ ಪ್ರತಿ ರಾಜ್ಯದ ಪರವಾಗಿಯೂ ಸಂತಾಪ ಸೂಚಿಸಲಾಯಿತು. ಕರ್ನಾಟಕದ ಪರವಾಗಿ ಕೇಂದ್ರ ಸಮಿತಿ ಸದಸ್ಯರಾದ ಕಾ|| ಪಿ. ರಾಮಚಂದ್ರರಾವ್ ಸಂತಾಪ ಸೂಚಿಸಿದರು.

ಮರುದಿನ ಕುರ್ಜೆ ನಗರದಿಂದ ಸಮ್ಮೇಳನದ ಸ್ಥಳವಾದ ವಿ. ಪಿ. ಚಿಂತನ್ ನಗರಕ್ಕೆ ಪ್ರತಿನಿಧಿಗಳೆಲ್ಲರೂ ಕಪ್ಪು, ಕೆಂಪು ಬಾವುಟ ಹಿಡಿದು ಮೌನ ಮೆರವಣಿಗೆ ಹೊರಟರು. ಆದರೆ ಅರ್ಧ ದಾರಿ ಸಾಗುವ ವೇಳೆಗೆ ತಮ್ಮ ಉದ್ವೇಗವನ್ನು ತಡೆಯಲಾರದೆ ಭಯೋತ್ಪಾದಕರ ವಿರುದ್ಧ ಭಯೋತ್ಪಾದಕರ ಹಿಂದಿನ ಸಾಮ್ರಾಜ್ಯಶಾಹಿಗಳ ವಿರುದ್ಧ ಘೋಷಣೆ ಕೂಗಿಯೇ ಕೂಗಿದರು.

ಈ ಸಂಗಾತಿಯ ನಿಧನಕ್ಕೆ ಸಂತಾಪ ಸೂಚಿಸಿದ ಪಾಲಿಟ್ ಬ್ಯೂರೋ ಅನೇಕ ಬಾರಿ ಒತ್ತಾಯಿಸಿದರೂ ಈ ಸಂಗಾತಿಗೆ ಪೋಲಿಸರ ರಕ್ಷಣೆ ನೀಡದ ಪಂಜಾಬ್‌ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿದೆ. ★

ಯುದ್ಧ ಬೇಡವೇ ಬೇಡ

ಬಿಡಿರಿ ನಮ್ಮನ್ನು ನಮ್ಮ ಪಾಡಿಗೆ
ಯುದ್ಧ ಬೇಡವೇ ಬೇಡ
ಸಮರದಾಹದ ಸಮಾಧಾನಕೆ
ಶಾಂತಿಯೊಂದಿದೆ ನೋಡ
ಹಗಲಿರುಳೆನ್ನದೆ ಹೊಗರುವ ದುರಾಸೆ
ಯುದ್ಧ ಸೈತಾನನ ಇಚ್ಛೆ
ಮನುಕುಲದಳಿವಿಕೆ ಮಾರಕದಾಸೆ
ಅಣು ಸಮರದ ಭಾಷೆ
ತಣ್ಣಗಿರುವ ಆ ಮೂರನೆ ವಿಶ್ವಕೆ
ತಾರಾ ಸಮರದ ಆಟ
ಬಂಡವಾಳಶಾಹಿ ಸಾಮ್ರಾಜ್ಯದಾಹಿಗೆ
ಬೆಕ್ಕಿನ ಚಲ್ಲಾಟ
ಬಾಂಬು ಎಸೆದವರು, ಉಳಿದೆಲ್ಲವರು
ಎಲ್ಲ ಎಲ್ಲ ಧ್ವಂಸ
ಯುದ್ಧ ಪಿಪಾಸಿ, ನೆನಪಿರಲಾ ಕಥೆ
ದೈತ್ಯ ಭಸ್ಮಾಸುರ ನಾಶ
ಶಸ್ತ್ರಮಾರಿ ಹಣ ಬಾಚುವವರೇ
ಹಗಲು ಧರೋಡೆಯು ಬೇಡ
ಮನುಕುಲ ಉಳಿಸಿ, ಶಾಂತಿಯಬಯಸಿ
ಬಯಸದೆ ವಿಶ್ವಕೆ ಕೇಡ

—ನೇಟಿ ಕೊಟ್ರಪ್ಪ

ನೀರಿಗಾಗಿ ಸಿ. ಪಿ. ಐ. (ಎಂ) ಒತ್ತಾಯ

ರಾಯಚೂರು ನಗರಕ್ಕೆಕುಡಿಯುವ ನೀರಿನ ಶಾಶ್ವತ ಪರಿಹಾರ ಮತ್ತು ಬೇಸಿಗೆಯಲ್ಲಿ ನಗರಕ್ಕೆ ಕುಡಿಯುವ ನೀರಿನ ಸಮರ್ಪಕ ನೀರಿನ ಸರಬರಾಜು ಮತ್ತು ನೀರು ಸರಬರಾಜು ಮಾಡುವ ಊರಲ್ಲಿಯ ಪೈಪ್‌ಲೈನ್‌ಗಳನ್ನು ನವೀಕರಿಸುವ ಬಗ್ಗೆ, ಮತ್ತು ಚಂದ್ರಬಂಡಾ ಲೇಔಟ್, ನೀರಬಾವಿ ಕುಂಟಾ, ಶಾಲಂಸಾದೊಡ್ಡಿ, ನವರಂಗ ದರವಾಜಾ ಕೋಟಿತಲಾರ ಮುಂತಾದ ಕೊಳಚೆ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವದ ಪರಿಸ್ಥಿತಿ ನೀಗಲು ಒತ್ತಾಯಿಸಿ ಸಿ.ಪಿ.ಐ.(ಎಂ) ನಗರ ಸಮಿತಿ ಚಳುವಳಿಗೆ ಕರೆ ನೀಡಿದ ಪ್ರಯುಕ್ತ ದಿ. 4-5-1987ರಂದು ನಗರದ ಎಲ್ಲಾ ವಿಭಾಗಗಳಿಂದ ಬಂದ ಜನರು ನವರಂಗ ದರವಾಜದಿಂದ ಬೃಹತ್ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಅರ್ಪಿಸಿ ಚರ್ಚಿಸಿದರು. ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ! ಕೆ. ಪುರುಷೋತ್ತಮ ಇವರು ಸಮಸ್ಯೆಗಳ ಗಂಭೀರತೆಯನ್ನು ಜನತೆಗೆ ವಿವರಿಸಿ, ಬೇಡಿಕೆಗಳು ಈಡೇರದಿದ್ದಲ್ಲಿ ಮುಂದೆ ಬೃಹತ್ ಹೋರಾಟಕ್ಕೆ ಜನರು ಸನ್ನದ್ದರಾಗಲು ಕರೆ ಇತ್ತರು.

ನಗರ ಸಭಾ ಅಧ್ಯಕ್ಷ ಆರ್. ಆಂಜನೇಯಲು ಮತ್ತು ನಗರ ಸಭಾಯುಕ್ತರು ಮತ್ತು ಜಿಲ್ಲಾಧಿಕಾರಿಗಳ ಜೊತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಗರ ಸಮಿತಿ ನಾಯಕರುಗಳಾದ ಕಾ! ಹರಿಣಿ ಕಕ್ಕೇರಿ ಮತ್ತು ಕಾ! ರಾಘವೇಂದ್ರ ಕುಷ್ಟಗಿ ಇವರ ನೇತೃತ್ವದಲ್ಲಿ ನಗರದ ನೀರು ಮತ್ತು ಇತರ ನಾಗರೀಕ ಸಮಸ್ಯೆಗಳ ಕುರಿತು ಮಾತುಕತೆ ನಡೆದು ಕೆಲವು ಒಪ್ಪಂದಗಳಿಗೆ ಬರಲಾಯಿತು.

ದಕ್ಷಿಣ ಆಫ್ರಿಕಾ ಹೋರಾಟ : ಕಿರ್ಲೋಸ್ಕರ್ ಕಾರ್ಮಿಕ ಸಹಾಯ

ವರ್ಣದ್ವೇಷ ವಿರೋಧಿ ಭಾರತೀಯ ಕಾರ್ಮಿಕ ಸಂಘಗಳ ಸಮಿತಿ ಕೊಟ್ಟ ಮೇರೆಗೆ ಹರಿಹರದ ಕಿರ್ಲೋಸ್ಕರ್ ಕಾರ್ಮಿಕರು ಎರಡು ಸಾವಿರದ ಮುನ್ನೂರು ರೂಪಾಯಿಗಳನ್ನು ಸಂಗ್ರಹಿಸಿ 'ಆಫ್ರಿಕಾ ನಿಧಿ'ಗೆ ಕಳುಹಿಸಿದ್ದಾರೆ. ಸಿ.ಐ.ಟಿ.ಯು. ಸಂಯೋಜಿತ ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಸಂಘದ ಹರಿಹರ ಶಾಖೆಯ ಕಾರ್ಯಕಾರಿ ಸಮಿತಿಯು 3-4-1987ರ ಸುತ್ತೋಲೆಯನ್ನು ಚರ್ಚಿಸಿ ಸಂಘದ ಸದಸ್ಯರಿಂದ ಧನ ಸಹಾಯ ಸಂಗ್ರಹಿಸಲು ತೀರ್ಮಾನಿಸಿತು. ಸೂಕ್ತ ಕರಪತ್ರವನ್ನು ಮುದ್ರಿಸಿ ಹಂಚಲಾಯಿತು. 25-4-87ರಂದು ಕಾರ್ಮಿಕರು ತಮ್ಮ ತಿಂಗಳ ಇನ್‌ಸೆಂಟಿವ್ ಪಡೆಯುವಾಗ ಆಫ್ರಿಕ ನಿಧಿಗೆ ದೇಣಿಗೆ ನೀಡಿ ರಶೀದಿ ಪಡೆದರು ಸಂಗ್ರಹವಾದ ಒಟ್ಟು ರೂ. 2300ಗಳನ್ನು ಡಿಮಾಂಡ್ ಡ್ರಾಫ್ಟ್ ಮೂಲಕ ಕಳುಹಿಸಿಕೊಡಲಾಯಿತು.

ಉದಾರವಾಗಿ ಧನಸಹಾಯ ನೀಡಿದ ಕಾರ್ಮಿಕರಿಗೆ, ಧನಸಹಾಯ ಸಂಗ್ರಹಿಸಲು ಶ್ರಮಿಸಿದ ಕಾರ್ಯಕರ್ತರಿಗೆ ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಸಂಘವು ಧನ್ಯವಾದಗಳನ್ನು ಸಲ್ಲಿಸಿದೆ.

ಡಿ. ವೈ ಎಫ್. ಐ. ಉಪವಾಸ ಸತ್ಯಾಗ್ರಹ ಮುಕ್ತಾಯ

13-5-1987 ರಿಂದ ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಬನಹಟ್ಟಿಯಲ್ಲಿ ಡಿ.ವೈ.ಎಫ್ ಐ. ನೇತೃತ್ವದಲ್ಲಿ ನಿರುದ್ಯೋಗಿ ಯುವ ಜನರು ನಿರುದ್ಯೋಗಿ ಯುವಜನರಿಗೆ ಕೆ ಎಚ್. ಡಿ.ಸಿ ವತಿಯಿಂದ ವಿಜಯಬ್ಯಾಂಕಿನಿಂದ ಸಾಲ ಕೊಡಿಸುವ ಬೇಡಿಕೆಯನ್ನು ಮುಂದಿಟ್ಟು ಆಮರಣಾಂತ ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು.

ಸತ್ಯಾಗ್ರಹ 16-5-87 ರವರೆಗೂ ಮುಂದುವರಿದು ಅದು ನಿಲ್ಲದೆ ಮುಂದುವರಿಯುವುದೆಂದು ತಿಳಿದ ಅಧಿಕಾರಿಗಳು ಸತ್ಯಾಗ್ರಹದ ಸ್ಥಳಕ್ಕೆ ಧಾವಿಸಿದರು. ಊರ ಪ್ರಮುಖರು ವಿಜಯಬ್ಯಾಂಕ್ ಮ್ಯಾನೇಜರ್, ಜನತಾ ಪಕ್ಷದ ಬನಹಟ್ಟಿ ಘಟಕದ ಅಧ್ಯಕ್ಷರೂ ಮತ್ತು ಕೆ.ಎಚ್.ಡಿ.ಸಿ. ಅಧಿಕಾರಿಗಳು ಸಾಲ ನೀಡುವ ಭರವಸೆ ನೀಡಿ ಉಪವಾಸ ಸತ್ಯಾಗ್ರಹವನ್ನು ವಾಪಸ್ ತೆಗೆದುಕೊಳ್ಳಲು ವಿನಂತಿಸಿದರು.

ಸತ್ಯಾಗ್ರಹ ನೇತೃತ್ವವಹಿಸಿದ್ದ ಡಿ. ವೈ. ಎಫ್. ಐ. ಮುಖಂಡರು ಬರಹದ ಮೂಲಕ ಭರವಸೆ ತಂದ ಹೊರತು ಸತ್ಯಾಗ್ರಹ ಹಿಂತೆಗೆಯುವುದಿಲ್ಲವೆಂದು ಪಟ್ಟು ಹಿಡಿದಾಗ ಅಧಿಕಾರಿಗಳು ಸಾಲ ನೀಡುವ ಭರವಸೆಯ ಪತ್ರ ನೀಡಿದ ನಂತರ ಉಪವಾಸ ಸತ್ಯಾಗ್ರಹ ಕೊನೆಗೊಂಡಿತು. ನಂತರ ನಡೆದ ಸಭೆಯನ್ನು ಉದ್ದೇಶಿಸಿ ಕಾ|| ಸದಾನಂದ ಮೋದಿ, ಮನ್ಸೂ ಸಾಬ. ಕಲಾದಗಿ, ಬಸಂತಕುಮಾರ್ ಬಸ್ಮೆ, ನಾಮದೇವ ಕೊಪರ್ಡೆ ಮುಂತಾದ ಮುಖಂಡರು ಮಾತನಾಡಿ, ಡಿ.ವೈ. ಎಫ್ ಐ.ಗೆ ಸಂದ ವಿಜಯಕ್ಕಾಗಿ ಇತರ ಸತ್ಯಾಗ್ರಹಿಗಳನ್ನು ಅಭಿನಂಧಿಸಿದರು.

ರಾಜ್ಯದೆಲ್ಲೆಡೆ

ಕೆ. ಜಿ. ಎಫ್.

ಕೆ.ಜಿ.ಎಫ್.ನಲ್ಲಿ 10ನೆಯ ಮೇ ದಿನಾಚರಣೆ ಅತ್ಯಂತ ಅಪೂರ್ವ ದೃಶ್ಯವಾಗಿತ್ತು. ಮೊತ್ತಮೊದಲ ಬಾರಿಗೆ ಕೆ.ಜಿ.ಎಫ್.ನ 6 ಕಾರ್ಮಿಕ ಸಂಘಗಳು ಸೇರಿ ಕೂಡಿದ ಮೇ ದಿನಾಚರಣೆ ಸಮಿತಿ ರಚನೆ ಮಾತ್ರವಲ್ಲದೆ ರಿಪಬ್ಲಿಕನ್ ಪಕ್ಷದ ಕಾರ್ಮಿಕ ಸಂಘಟನೆಯೂ ಅಲ್ಲಿ ಸೇರಿದ್ದುದು ಒಂದು ವೈಶಿಷ್ಟ್ಯ.

ಮುನ್ನೂರಕ್ಕೂ ಹೆಚ್ಚು ಕೆಂಪು ಸಮವಸ್ತ್ರಧಾರಿಗಳು ಕೆಂಬಾವುಟಗಳನ್ನು ಹೊತ್ತು ಸಾಲಾಗಿ ಮೆರವಣಿಗೆ ಹೊರಟದ್ದರೆ ಹಿಂದೆ ಲಾರಿಗಳಲ್ಲಿ ಲೆನಿನ್,ಸ್ಟಾಲಿನ್‌ರವರ ಬೃಹತ್ ಚಿತ್ರಗಳು ಹಾಗೂ ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧಕೋರತನದ ಅಣುಕು ಪ್ರದರ್ಶನ ನೀಡುತ್ತಾ ಶಾಂತಿಯ ಕರೆ ನೀಡುವ ಪ್ರದರ್ಶನಕಾರರು, ಚಿತ್ರಗಳನ್ನೊಳಗೊಂಡ ಲಾರಿಗಳು ನಿಧಾನವಾಗಿ ಸಾಗಿದ್ದವು. ಕೆ.ಜಿ.ಎಫ್.ನ ಆಂಡರ್‌ಸನ್ ಪೇಟೆಯಿಂದ ಹೊರಟ ಮೆರವಣಿಗೆಯಲ್ಲಿ ಸಿ.ಐ.ಟಿ.ಯು.ಗೆ ಸೇರಿದ ಎಲ್ಲಾ ಘಟಕಗಳ ಕಾರ್ಮಿಕರು ಬ್ಯಾಂಕ್‌ಯೂನಿಯನ್‌ಗಳು,ಪಿ ಅಂಡ್ ಟಿ ಸಂಘಗಳು ಸೇರಿ ಎರಡು ಸಾವಿರಕ್ಕೂ ಹೆಚ್ಚು ಜನರು ಘೋಷಣೆಗಳನ್ನು ಕೂಗುತ್ತಾ ಬೀದಿ ಬೀದಿಗಳಲ್ಲಿ ಅಲೆಗಳಂತೆ ಸಾಗಿದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ॥ಮುಗಿಲನ್, ಕಾ.ಸವರಿದಾಸ್ ಕಾ.ಟಿ.ಎಸ್ ಮಣಿಯವರು ಮಾತನಾಡಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಖಂಡಿಸಿದ್ದಲ್ಲದೆ.ಅಸ್ಸಾಂ ಗೂಖಾರ್ಲ್ಯಾಂಡ್ ಪಂಜಾಬ್ ಬೆಳವಣಿಗೆಗಳನ್ನು ಖಂಡಿಸಿ ಕೇರಳ ಪ.ಬಂಗಾಳದ ಚುನಾವಣೆಯಲ್ಲಿನ ವಿಜಯವನ್ನು ಸ್ವಾಗತಿಸಿ ಸ್ಥಳೀಯ ಲಂಚಕೋರ ಮುನಿಸಿಪಾಲಿಟಿ ಹಾಗೂ ಜನ ವಿರೋಧಿ ಶಕ್ತಿಗಳ ವಿರುದ್ಧ ಎಚ್ಚರಿಕೆ ನೀಡಿದರು. ಮುನಿಸಿಪಲ್ ಕಾನ್ಸಿಲನ್ನು ಕೂಡಲೇ ವಿಸರ್ಜಿಸಬೇಕೆಂದು ಕರೆ ಕೊಟ್ಟರು. ಕಾ.ಟಿ.ಎಸ್.ಅಶ್ವಥ್ ನಾರಾಯಣ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು ಕಾ.ಕುಪ್ಪುಸ್ವಾಮಿ ಸ್ವಾಗತಿಸಿದರು ಕಾ ತಾರಾನಾಥ್ ರವರು ವಂದಿಸಿದರು.

ಇದಕ್ಕೂ ಮುಂಚೆ ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್ ಹಾಗೂ ಮಿನರಲ್ ಎಕ್ಸ್‌ಪ್ಲೋರೇಷನ್ ಕಾರ್ಪೊರೇಷನ್ ಕಾರ್ಮಿಕ ಸಂಘದ ಮುಂಭಾಗದಲ್ಲಿ ಕೆಂಬಾವುಟವನ್ನು ಹಾರಿಸಿ ಸಿ.ಐ.ಟಿ.ಯು ಮ್ಯಾನಿಫೆಸ್ಟೋ ಓದಿ ಕಾರ್ಮಿಕರು ಪ್ರತಿಜ್ಞೆಗೈದರು.

ಪ್ರಪ್ರಥಮ ಬಾರಿಗೆ ಕೆ.ಜಿ.ಎಫ್‌ನಲ್ಲಿ ಆರು ಕಾರ್ಮಿಕ ಸಂಘಗಳು ಒಗ್ಗೂಡಿ ಒಕ್ಕೂಟ ರಚಿಸಿಕೊಂಡು ವಿಜೃಂಭಣೆಯಿಂದ ಮೇ ದಿನಾಚರಣೆಯನ್ನು ಆಚರಿಸಿ ಕಳೆ ತಂದಿತ್ತವು.

ಮಂಗಳೂರು

ಸಿ.ಐ.ಟಿ.ಯು ಮತ್ತು ಎ.ಐ.ಟಿ.ಯು.ಸಿ. ಸಂಯುಕ್ತ ಆಶ್ರಯದಲ್ಲಿ ತಾ 1-5-87 ರಂದು ನೆಹರು ಮೈದಾನದಲ್ಲಿ ಜರಗಿದ ಬಹಿರಂಗ ಸಭೆಯಲ್ಲಿ ಸಾಮ್ರಾಜ್ಯ ಶಾಹಿಯಿಂದ ವಿಶ್ವಶಾಂತಿತಿಗೆ ಬರುವ ಅಪಾಯವನ್ನು ರಕ್ಷಿಸುವ ಜವಾಬ್ದಾರಿಯು ಜಾಗೃತಿಕ ಕಾರ್ಮಿಕ ವರ್ಗದ ಮೇಲಿದೆ. ಕಾರ್ಮಿಕ ವರ್ಗವು ವಿಶ್ವ ಶಾಂತಿ ಯನ್ನು ರಕ್ಷಿಸಲು ಸಕಲ ತ್ಯಾಗಕ್ಕೂ ಸಿದ್ಧರಾಗಬೇಕೆಂದೂ ಕರೆ ನೀಡಿದ ಜಿಲ್ಲಾ ಸಿ.ಐ ಟಿ.ಯು ಮುಖಂಡರಾದ ಕಾ.ಪಿ. ರಾಮಚಂದ್ರರಾವ್ ಮುಂದುವರಿಯುತ್ತಾ ನಮ್ಮ ದೇಶದಲ್ಲಿ ಇಂದು ಛಿದ್ರಕಾರಿ ಶಕ್ತಿಯು ಮತ್ತು ಮತೀಯ ಶಕ್ತಿಯು ದೇಶದ ಭದ್ರತೆಗೆ ತಂದೊಡ್ಡಿದ ಅಪಾಯವನ್ನು ವಿವರಿಸುತ್ತಾ ದೇಶದ ಕಾರ್ಮಿಕ ವರ್ಗವು ಇದರ ಬಗ್ಗೆ ಎಚ್ಚರ ವಹಿಸಬೇಕು. ಛಿದ್ರಕಾರಿ ಶಕ್ತಿಯು ಮತ್ತು ಮತೀಯ ಶಕ್ತಿಗಳ ವಿರುದ್ಧ ಹೋರಾಡಲು ಸಿದ್ಧರಾಗಬೇಕೆಂದು ಕಾರ್ಮಿಕರಿಗೆ ಕರೆ ನೀಡಿದರು.

ಪ್ರಾರಂಭದಲ್ಲಿ ಎ.ಐ.ಟಿ.ಯು.ಸಿ.ಯ ಜಿಲ್ಲಾ ಕಾರ್ಯದರ್ಶಿ ಕಾ.ಬಿ. ಶ್ರೀಯಾನ್‌ರವರು ಸ್ವಾಗತಿಸಿದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಎಐಟಿಯುಸಿ ಮುಖಂಡರಾದ ಕಾ.ಉಮಾನಾಥ್ ನ್ಯಾಕರು ಇಂದಿನ ದೇಶದ ಪರಿಸ್ಥಿತಿಯನ್ನು ವಿವರಿಸಿ ಕಾರ್ಮಿಕ ವರ್ಗದ ಪಾತ್ರವನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆ ಸಿ.ಐ.ಟಿ.ಯು. ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಕಾ ಬಿ.ಮಾಧವ ವಹಿಸಿದ್ದರು ಸಭೆಗೆ ಮೊದಲು ನಗರದ ವಿವಿಧ ಕಡೆಗಳಿಂದ ಕಾರ್ಮಿಕರು ಮೆರವಣಿಗೆಯಾಗಿ ಬಂದು ಸಭೆಯಲ್ಲಿ ಭಾಗವಹಿಸಿದ್ದರು. ಕೊನೆಯಲ್ಲಿ ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ಧನ್ಯವಾದವಿತ್ತರು

ಕುಂದಾಪುರ

ಸಿ.ಐ.ಟಿ.ಯು. ಗೆ ಸೇರಿದ ಕಾರ್ಮಿಕ ಸಂಘಗಳ ಆಶ್ರಯದಲ್ಲಿ ಮೇ ದಿನದ ಅಂಗವಾಗಿ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಕುಂದಾಪುರ ತಾಲ್ಲೂಕಿನ ವಿವಿಧ ಪ್ರದೇಶಗಳಿಂದ ರೈತರು, ಕೃಷಿ ಕಾರ್ಮಿಕರು ಹಾಗೂ ಕಾರ್ಮಿಕರು ಮೆರವಣಿಗೆಗಳ ಮೂಲಕ ಬಂದಿದ್ದರು. ಕಾ.ಸಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಬೀಡಿ ಕಾರ್ಮಿಕರ-

ದಿನೋತ್ಸವ

ಮುಂದಾಳು ಕಾ.ವಿ.ಮಹಾಬಲ, ರೈತ ಸಂಘದ ಮುಖಂಡ ಕಾ.ಯು. ದಾಸ ಭಂಡಾರಿ,ವಿದ್ಯಾರ್ಥಿ ಮುಖಂಡ ಕಾ.ಕೆ ವಿಶ್ವನಾಥ, ಸಿ.ಐ.ಟಿ.ಯು. ಮುಖಂಡರಾದ ಕಾ.ಕೆ. ಶಂಕರ್ ಮತ್ತು ಕಾ. ಅಬ್ರಹಾಂ ಕರ್ಕಡ ಮಾತನಾಡಿದರು.

ವಾಮಂಜೂರು

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಸಂಘದ ಕಚೇರಿಯಿಂದ ರೈತ, ಕಾರ್ಮಿಕರು ಮೆರವಣಿಗೆ ಹೊರಟು ಬಹಿರಂಗ ಸಭೆ ನಡೆಸಿದರು. ಕಾ.ಕೆ. ಮಂಡಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಕಾ.ಗಂಗಯ್ಯ ಅಮೀನ ಮೇ ದಿನದ ಮಹತ್ವವನ್ನು ವಿವರಿಸಿದರು.

ಹರಿಹರ

ಸಿ.ಐ.ಟಿ.ಯು. ಸಮನ್ವಯ ಸಮಿತಿಯ ಆಶ್ರಯದಲ್ಲಿ ಹರಿಹರದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ಮುಖಂಡರಾದ ಕಾ. ವಿ.ಜೆ.ಕೆ. ನಾಯರ್ ಮಾತನಾಡಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮೇ ದಿನದ ಮಹತ್ವವನ್ನು ವಿವರಿಸಿದರು. ಆರಂಭದಲ್ಲಿ ಕಾ. ಅಣ್ಣಪ್ಪ ಕ್ರಾಂತಿಗೀತೆ ಹಾಡಿದರು. ಕಾ.ಸಿ.ಎಂ. ಜಯಾನಂದ ಸ್ವಾಗತಿಸಿದರು. ಕಾ. ನಿತ್ಯಾನಂದಸ್ವಾಮಿ ಮತ್ತು ಕಾ.ಕೆ.ಎಂ. ಕೊಟ್ರಯ್ಯ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾ.ಆರ್.ಬಿ. ಅಂಗಡಿ ವಂದನಾರ್ಪಣೆ ಮಾಡಿದರು.

ಬೀದರ್

ಸಿ.ಐ.ಟಿ.ಯು.ನ ನೇತೃತ್ವದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಬೀದರ್ ಬಂದ್ ಯಶಸ್ವಿಯಾಗಿ ನಡೆಯಿತು. ಮೆರವಣಿಗೆ, ಬಹಿರಂಗ ಸಭೆ ನಡೆಸಲಾಯಿತು. ಅರಣ್ಯ ಇಲಾಖೆಯ ಕಾರ್ಮಿಕರು, ನಗರ ಸಭಾ ಕಾರ್ಮಿಕರು. ಡಿಸ್ಟಿಲರಿ ವರ್ಕರ್ಸ್ ಯೂನಿಯನ್, ಸಹಕಾರ ಸಕ್ಕರೆ ಕಾರ್ಖಾನೆ, ಕಾರ್ಮಿಕ ಸಂಘಟನೆಗಳ ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು· ಮೆರವಣಿಗೆಯ ಮುಂಭಾಗದಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರಿದ್ದುದು ಗಮನಾರ್ಹ ಅಂಶವಾಗಿತ್ತು. ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗಳಿಗೆ ಮನವಿಯೊಂದನ್ನು ಸಲ್ಲಿಸಿತು. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ವಕೀಲರಾದ ಕಾ. ಸಂಗ್ರಾಮ್ ಮಾತನಾಡಿದರು. ಸಭೆಗೆ ಮುನ್ನ ಕಾ. ನಾರಾಯಣ ರಾಂಪುರೆ ಕ್ರಾಂತಿಗೀತೆಗಳನ್ನು ಹಾಡಿದರು.

ವೀರಾಜಪೇಟೆ

ಮೇ ದಿನಾಚರಣೆಯ ಅಂಗವಾಗಿ ವೀರಾಜಪೇಟೆಯ ಅರಮೇರಿಯಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.ಡಿ.ವೈ.ಎಫ್.ಐ.ನ ವೀರಾಜಪೇಟೆ ನಗರಸಮಿತಿ ಅಧ್ಯಕ್ಷರಾದ ಕಾ. ಕೆ.ವಿ. ಹ್ಯಾರೀಸ್ ಸ್ಪರ್ಧೆಯನ್ನು ಉದ್ಘಾಟಿಸಿದರು. ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷತೆಯನ್ನು ಕಾ. ಕೆ.ಎಂ. ಮುತ್ತಪ್ಪ ವಹಿಸಿದ್ದರು. ಡಿ.ವೈ.ಎಫ್ ಐನ ನಗರ ಸಮಿತಿ ಸದಸ್ಯ ಕಾ. ಹೆಚ್. ಎ. ಪಾರ್ವತಿ ಸ್ವಾಗತಿಸಿದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮಂಡಲ ಪಂಚಾಯತ್ ಸದಸ್ಯರಾದ ಶ್ರೀ ಕೆ.ಎಂ. ಪೂವಯ್ಯ ಬಹುಮಾನ ನೀಡಿದರು. ಅದೃಷ್ಟ ಚೀಟಿಗಳನ್ನು ಮಂಡಲ ಪಂಚಾಯತ್ ಸದಸ್ಯರಾದ ಶ್ರೀಮತಿ ಬಿ.ಎಂ. ಚಿಣ್ಣಮ್ಮ, ಶ್ರೀಮತಿ ಸಿ.ಜಿ. ಕಾವೇರಿ ಮತ್ತು ಶ್ರೀಮತಿ ಸಿ.ಜಿ.ಪೊನ್ನಮ್ಮ, ತೆಗೆದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐ.ನ ತಾಲ್ಲೂಕು ಸಮಿತಿ ಅಧ್ಯಕ್ಷರಾದ ಕಾ.ಐ ಆರ್. ಪ್ರಮೋದ ಭಾಗವಹಿಸಿದ್ದರು. ಕಾರ್ಯದರ್ಶಿ ಕಾ. ಸನ್ನಿ ಕುಮಾರ್ ವರದಿ ನೀಡಿದರು. ಕಾ. ಚಿಣ್ಣಮ್ಮ ವಂದನಾರ್ಪಣೆ ಮಾಡಿದರು.

ಗುಲ್ಬರ್ಗಾ

ಸಿ.ಐ.ಟಿ.ಯು. ಆಶ್ರಯದಲ್ಲಿ ಮೇ ದಿನವನ್ನು ಗುಲ್ಬರ್ಗದಲ್ಲಿ ಆಚರಿಸಲಾಯಿತು. ಸುಮಾರು 600 ಮಂದಿ ಕಾರ್ಮಿಕರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ.ಸಿ.ಎ. ಪಾಟೀಲ್, ಕಾ. ಗುಲಾಂ ಇಬ್ರಾಹಿಂ ಮಾತನಾಡಿದರು.

ಮೈಸೂರು

ಮೈಸೂರಿನ ಆರ್.ಎಂ.ಎಸ್.ಆಫೀಸ್‌ನ ಎದುರು ಮೇದಿನಾಚರಣೆಯ ಅಂಗವಾಗಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾ. ಆರ್. ಜಯಕುಮಾರ್, ಆರ್. ಎಂ. ಎಸ್. ನೌಕರರ ಸಂಘದ ಕಾರ್ಯದರ್ಶಿ ಕಾ.ಜಿ.ಕೆ. ಲಕ್ಷ್ಮಿನಾರಾಯಣ ಮಾತನಾಡಿ ಮೇದಿನದ ಮಹತ್ವವನ್ನು ವಿವರಿಸಿದರು.

(16ನೇ ಪುಟ ನೋಡಿ)

ಕಾರ್ಮಿಕ ಸಂಘಟನೆಗಳ ವ್ಯಾಪಕ ಐಕ್ಯತೆಗಾಗಿ ದುಡಿಯೋಣ

ದೇಶದಲ್ಲಿ ಕಾರ್ಮಿಕ ಸಂಘಗಳ ಐಕ್ಯತೆಯ ಬಗ್ಗೆ ಚರ್ಚಿಸಿದ ಸಿ.ಐ.ಟಿ.ಯು.ನ ಆರನೇ ಸಮ್ಮೇಳನ ಈ ಕುರಿತು ಅಂಗೀಕರಿಸಿದ ನಿರ್ಣಯದಲ್ಲಿ ಎಲ್ಲಾ ಕಾರ್ಮಿಕ ಸಂಘಗಳ ಮತ್ತು ಒಕ್ಕೂಟಗಳ ಮಹಾ ಒಕ್ಕೂಟ (ಕಾನ್ಫೆಡರೇಶನ್) ದ ರಚನೆಯ ತನ್ನ ಕರೆಯನ್ನು ಪುನರುಚ್ಚರಿಸಲಾಗಿದೆ.

ಕಾನ್ಪುರ ಸಮ್ಮೇಳನದ ನಂತರದ ಅವಧಿಯಲ್ಲಿ ಕಾರ್ಮಿಕರ ಸಂಘಗಳ ಐಕ್ಯತೆಯ ಪಯತ್ನದಲ್ಲಿ ಪ್ರಗತಿ ಸಾಧಿಸಿದುದನ್ನು ಹಾಗೂ ಎನ್.ಸಿ.ಸಿ. ಕರೆಗಳಿಗೆ ಹೆಚ್ಚೆಚ್ಚು ಬೆಂಬಲದೊರೆಯುತ್ತಿರುವುದನ್ನು ಗಮನಿಸಿದ ಸಮ್ಮೇಳನ ಈ ದಿಕ್ಕಿನಲ್ಲಿ ಹಲವಾರು ಎಡರು–ತೊಡರುಗಳನ್ನು ಎದುರಿಸಿ ದೃಢನಿರ್ಧಾರದಿಂದ ದುಡಿದು ಸಿ.ಐ.ಟಿ.ಯು.ನ ಸಂಘಗಳನ್ನು, ರಾಜ್ಯ ಸಮಿತಿಗಳನ್ನು ಹಾಗೂ ತಮ್ಮ ಕೊಡುಗೆ ನೀಡಿದ ಎನ್.ಸಿ.ಸಿ.ಯ ಇತರ ಅಂಗಸಂಘಟನೆಗಳನ್ನು ಅಭಿನಂದಿಸಿದೆ.

ಆದರೆ ಇವು ಆಂದೋಲನದ ಆಗತ್ಯಗಳಿಗೆ ಹೋಲಿಸಿದರೆ ಇನ್ನು ಬಹಳ ಕಮ್ಮಿ, ಸರಕಾರೀ ಧೋರಣೆಗಳು ಹಾಗೂ ಮಾಲಕ ವರ್ಗದ ನಿಲುವುಗಳ ಮೇಲೆ ಪ್ರಭಾವ ಬೀರುವುದರಲ್ಲಿ ಇನ್ನು ಸಫಲತೆ ದೊರೆತಿಲ್ಲ, ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮಗಳನ್ನು, ಹೊಸ ಹೊರೆಗಳನ್ನು ಕಾರ್ಮಿಕ ವರ್ಗದ ಹೆಗಲ ಮೇಲೆ ಹೇರುವುದನ್ನು ಪ್ರತಿರೋಧಿಸುವಲ್ಲಿ ಕಾರ್ಮಿಕ ವರ್ಗದ ಪೂರ್ಣಬಲವನ್ನು ಕ್ರೋಢೀಕರಿಸುವುದು ಇನ್ನೂ ಸಾಧ್ಯವಾಗಿಲ್ಲ ಎಂದು ಅಭಿಪ್ರಾಯಪಟ್ಟ ಸಮ್ಮೇಳನ ಕೈಗಾರಿಕಾ ರಂಗದಲ್ಲಿ ಕಾರ್ಮಿಕರ ಸಾಮೂಹಿಕ ಕಾರ್ಯಾಚರಣೆಗಳು ಎನ್.ಸಿ.ಸಿ. ಗಿಂತಲೂ ಹೆಚ್ಚಿನ ವಿಸ್ತಾರ ಪಡೆಯುತ್ತಿರುವುದನ್ನು, ಎನ್.ಸಿ.ಸಿ.ಯ ಕರೆಗಳಿಗೆ, ಚಟುವಟಿಕೆಗಳಿಗೆ ಸಂಬಂಧ ಪಡದ ದೊಡ್ಡ ದೊಡ್ಡ ಸಾಮೂಹಿಕ ಕಾರ್ಯಾಚರಣೆ ನಡೆಯುತ್ತಿರುವುದನ್ನು ಗಮನಿಸಿ ಇದರಿಂದಾಗಿ ಈಗ ಕೆಲವು ಕೇಂದ್ರಿಯ ಸಂಘಟನೆಗಳಿಗಷ್ಟೇ ಸೀಮಿತವಾಗಿರುವ ಎನ್.ಸಿ.ಸಿ.ಯನ್ನು ಸಮಾನತೆ ಹಾಗೂ ಪರಿಣಾಮಕಾರೀ ಭಾಗವಹಿಸುವಿಕೆಯ ಆಧಾರದ ಮೇಲೆ ಒಳಗೊಳ್ಳುವ ಅಗತ್ಯವಿದೆ ಎಂದು ನಿರ್ಣಯ ಒತ್ತಿ ಹೇಳಿದೆ.

ಈ ಹಿನ್ನೆಲೆಯಲ್ಲಿಯೇ ಮಹಾ ಒಕ್ಕೂಟದ ತನ್ನ ಸಲಹೆಯನ್ನು ಪುನರುಚ್ಚರಿಸುತ್ತಾ ಇದರಲ್ಲಿ ಕಾರ್ಮಿಕ ಹಾಗೂ ಆರ್ಥಿಕ ಧೋರಣೆಗಳನ್ನು ಮುಕ್ತವಾಗಿ ಚರ್ಚಿಸಿ ಸರ್ವಸಮ್ಮತ ನಿರ್ಣಯಗಳನ್ನು ಕೈಗೊಳ್ಳಲು ಸಾಧ್ಯವಾಗಬೇಕು, ಪ್ರತಿಯೊಂದು ಸಂಘಟನೆಯ ಸ್ವಾಯತ್ತತೆಯನ್ನು ಉಲ್ಲಂಘಿಸದೆ ದೇಶದ ಕಾರ್ಮಿಕ ಆಂದೋಲನ ಸಾಧ್ಯವಾದಷ್ಟು ಸಮಗ್ರವಾದ ಒಂದು ದೃಷ್ಟಿಕೋನ ಬೆಳಸಿಕೊಳ್ಳಲು ಇದು ನೆರವಾಗುತ್ತದೆ ಎಂದು ಹೇಳುತ್ತಾ ಸಿ.ಐ.ಟಿ.ಯು. ವಿನ ಆರನೇ ಸಮ್ಮೇಳನ ಈ ನಿರ್ಣಯದ ಮೂಲಕ ಕಾರ್ಮಿಕ ಸಂಘಟನೆಗಳಿಗೆ ಈ ಪ್ರಸ್ತಾಪವನ್ನು ಪರಿಶೀಲಿಸಿ ಕಾರ್ಮಿಕ ಸಂಘಗಳ ಐಕ್ಯತೆಯನ್ನು ಬೆಳೆಸಲು ಕರೆನೀಡಿದೆ.

(15ನೇ ಪುಟದಿಂದ)

ಬಿಜಾಪುರ

ಮೇ ದಿನಾಚರಣೆಯ ಅಂಗವಾಗಿ ಬಿಜಾಪುರದಲ್ಲಿ ಮೆರವಣಿಗೆ ಮತ್ತು ಬಹಿರಂಗ ಸಭೆಗಳು ನಡೆದವು. ಸಭೆಯ ಅಧ್ಯಕ್ಷತೆಯನ್ನು ಕಾ. ಲಾಯೆದಗುಂದಿ ವಹಿಸಿದ್ದರು. ಎ.ಐ.ಟಿ ಯು ಸಿ.ಯ ಕಾ. ಪ್ರಕಾಶ ಹಿಟ್ನಳ್ಳಿ, ಕಾ. ಎಲ್.ಕೆ. ಚಂಚಲಕರ್, ಸಿ.ಪಿ.ಐ(ಎಂ) ನ ಕಾ. ಭೀಮಸಿ ಕಲಾದಗಿ, ಕಾಂ ಮನ್ನೂಸಾಬ ಕಲಾದಗಿ ಕಾ. ಶ್ರೀಧರ್ ಕುಲಕರ್ಣಿ ಮುಂತಾದವರು ಸಭೆಯಲ್ಲಿ ಮಾತನಾಡಿದರು.

ರಾಯಚೂರು

ಮೇ ದಿನವನ್ನು ರಾಯಚೂರಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಇಡೀ ನಗರವನ್ನು ಕೆಂಪು ತೋರಣಗಳಿಂದ ಶೃಂಗರಿಸಲಾಗಿತ್ತು. ಅನೇಕ ಸಂಘಗಳ ಸರ್ವ ಸದಸ್ಯರ ಸಭೆಗಳನ್ನು ಕಾರ್ಖಾನೆಗಳ ಗೇಟ್ ಮೀಟಿಂಗ್‌ಗಳನ್ನು ನಡೆಸಿ ಮೇ ದಿನದ ಪೂರ್ವಭಾಗಿ ಸಿದ್ಧತೆ ನಡೆಸಲಾಗಿತ್ತು. ಮೇ 1 ರಂದು ಬೃಹತ್ ಮೆರವಣಿಗೆಯನ್ನು ಏರ್ಪಡಿಸಲಾಯಿತು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಎಸ್.ಪಿ. ಬಡಿಗೇರ ವಹಿಸಿದ್ದರು. ಶ್ರೀ ಸಿದ್ದಪ್ಪ ಇಲ್ಲಿ ಸ್ವಾಗತಿಸಿದರು. ಶ್ರೀಯುತರಾದ ಬಸವರಾಜು, ಪ್ರಹ್ಲಾದರಾವ್ ಸುಲೋಚನ, ವಿಜಯಕುಮಾರ್, ತಾಯಣ್ಣ, ಅಯ್ಯನಗೌಡ, ರಾಮಕೃಷ್ಣ ಪುರುಷೋತ್ತಮ ಕಲಾಲಬಂಡಿ, ಶ್ರೀಮತಿ ಶಾಮಲಾ ಪೂಜಾರ್, ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ○

ನಾಯಿಕೊಡೆಗಳಂತೆ ಇಂದು ಭಾರತದಲ್ಲಿ ಸ್ವಯಂಸೇವಾ ಸಂಘಗಳು ತಲೆಯೆತ್ತುತ್ತಿವೆ. ಬಡಜನರ ನಡುವೆ ಅವರ ಉದ್ಧಾರಕ್ಕಾಗಿ ಕೆಲಸ ಮಾಡುತ್ತಿದ್ದೇವೆನ್ನುವ, ಅವರನ್ನು ರಾಜಕೀಯ ದೂರವಾದ-ಪಕ್ಷರಹಿತ ಸಂಘಟನೆಗಳಲ್ಲಿ ತೊಡಗಿಸಬೇಕೆನ್ನುತ್ತಿದ್ದಾರೆ.

ಈ ದಲಿತೋದ್ಧಾರಕರ ಹಿಂದಿನ ಕೈ ಯಾವುದು? ಈ ಉದ್ಧಾರಕರು ಬೆಳೆದು ಬಂದ ಬಗೆ ಹೇಗೆ? ಇದು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ. ಈ ಬಗ್ಗೆ ವಿಶೇಷ ಲೇಖನಗಳನ್ನು ಪುರವಣಿಯಾಗಿ "ಐಕ್ಯರಂಗ" ನೀಡುತ್ತಿದೆ.

ಸಾಮ್ರಾಜ್ಯಶಾಹಿಗಳ

'ಸ್ವಯಂ'-ಸೇವೆಗೆ ಎಡ ಸೋಗು

'ಪಕ್ಷರಹಿತ ರಾಜಕೀಯ ಸಂಘಟನೆ'ಗಳು ಎಂಬುದು ಸ್ವಯಂ ಸೇವಾ ಸಂಸ್ಥೆಗಳಿಗೆ ಇತ್ತೀಚಿನ ಫ್ಯಾಷನಬಲ್ ಹೆಸರು.

ಇವು ಭ್ರಷ್ಟ ಅಧಿಕಾರಶಾಹಿ ರಾಜಕೀಯ ಪಕ್ಷಗಳು ಹಾಗೂ ಅವುಗಳ ಸಾಮೂಹಿಕ ಸಂಘಟನೆಗಳ ವಿರುದ್ಧ ಎದ್ದ ಬಂಡಾಯವಂತೆ; ಆಮೂಲಾಗ್ರ ಬದಲಾವಣೆಯತ್ತ ಒಲಿದ ಯುವಕ ಯುವತಿಯರು ಇದರಲ್ಲಿದ್ದಾರಂತೆ. ಇವುಗಳ ಬಗ್ಗೆ ಹಲವು ಪತ್ರಿಕೆಗಳಲ್ಲಿ ಬರುವ ಲೇಖನಗಳು, ಇವರು ಮಾಡುವ 'ಕ್ರಾಂತಿಕಾರಿ' ಗದ್ದಲ ಮತ್ತು ಸಂಘಟನಾ ಚಟುವಟಿಕೆಗಳು ರೈತ ಕಾರ್ಮಿಕ ಜನಸಾಮಾನ್ಯರಲ್ಲಿ ಮಾತ್ರವಲ್ಲ, ಎಡ ಪಕ್ಷಗಳ ಕಾರ್ಯಕರ್ತರಲ್ಲೂ ಗೊಂದಲ ಉಂಟು ಮಾಡಿದೆ.

ಇವುಗಳ ಪ್ರಚಾರವನ್ನು ನಂಬುವುದಾದರೆ ಹಲವು ಪ್ರಶ್ನೆಗಳು ಏಳುತ್ತವೆ. ಈ ಸಂಘಟನೆಗಳು ಆಮೂಲಾಗ್ರ ಸಾಮಾಜಿಕ ಬದಲಾವಣೆಗೆ ಪರವಾಗಿದ್ದರೆ ಎಡ ಚಳುವಳಿಯನ್ನು ಏಕೆ ಹೀನಾಮಾನವಾಗಿ ಬಯ್ಯುತ್ತವೆ? ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾಮ್ರಾಜ್ಯಶಾಹಿ ದೇಶಗಳ ಸಂಸ್ಥೆಗಳು ಸರ್ಕಾರಗಳು ಈ ಸಂಘಟನೆಗಳಿಗೆ ಏಕೆ ಧನ ಸಹಾಯ ನೀಡುತ್ತವೆ? ದೇಶದ ಆಳುವ ವರ್ಗದ ಸರ್ಕಾರ ಏಕೆ ಇವಕ್ಕೆ ಕುಮ್ಮಕ್ಕು ಕೊಡುತ್ತವೆ? ಇವು ನಿಜವಾಗಿಯೂ ಜನರ ಮಧ್ಯೆ ಸಂಘಟನಾತ್ಮಕ ಚಟುವಟಿಕೆಗಳಿಂದ ಹುಟ್ಟಿ ಬೆಳೆದಿದ್ದರೆ ಇಷ್ಟು ಸುವ್ಯವಸ್ಥಿತ ಜಾಲ, ವಿದೇಶಿ ಸಂಬಂಧ ಬೆಳೆಸಿಕೊಳ್ಳಲು ಹೇಗೆ ಸಾಧ್ಯವಾಗಿದೆ? ಇದರ ಅಗತ್ಯವಾದರೂ ಏನು?

ಸಾಮ್ರಾಜ್ಯಶಾಹಿ ಕಾರ್ಯತಂತ್ರದಲ್ಲಿ ಹೊಸ ದಿಕ್ಕು

ಮೂರನೇ ಜಗತ್ತಿನಲ್ಲಿ ಕ್ರಾಂತಿಕಾರಿ ಅಲೆಗಳನ್ನು ತಡೆಯಲು ಸಾಮ್ರಾಜ್ಯಶಾಹಿ ವಿಫಲವಾಗಿದ್ದರೂ, ಅದು ಸತತವಾಗಿ ಈ ದೇಶಗಳ ರಾಜಕೀಯ ಸಾಮಾಜಿಕ ಜೀವನದಲ್ಲಿ ಮಧ್ಯ ಪ್ರವೇಶಿಸಿ ತನಗೆ ಅನುಕೂಲವಾದ ಪರಿಸ್ಥಿತಿ ನಿರ್ಮಿಸಲು ಹೊಸ ವಿಧಾನಗಳನ್ನು ಅಭಿವೃದ್ಧಿ ಪಡಿಸುತ್ತಿರುತ್ತದೆ. 1979 ರಲ್ಲಿ "ಬ್ರಹ್ಮಪುತ್ರ ಪ್ರಾಜೆಕ್ಟ್" ಎಂದು ಸಂಶೋಧನೆಯ ಹೆಸರಿನಲ್ಲಿ ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳಲ್ಲಿ ಪ್ರತ್ಯೇಕತಾವಾದಿ ಚಳುವಳಿಗಳಿಗೆ ಬೆಂಬಲ ಕೊಟ್ಟಿದ್ದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿ.

60 ರ ದಶಕದಿಂದ ಸಾಮ್ರಾಜ್ಯಶಾಹಿ ದೇಶಗಳು ತನ್ನ ಕಪಿಮುಷ್ಠಿಯಲ್ಲಿಟ್ಟು

ಕೊಳ್ಳಲು ಸಾಲ, ಆರ್ಥಿಕ 'ಸಹಾಯ' ವನ್ನು ಯಾವ ರೀತಿ ಉಪಯೋಗಿಸಿ ಕೊಂಡಿದ್ದಾರೆಂಬುದು ಈಗಾಗಲೇ ಎಲ್ಲ ರಿಗೂ ತಿಳಿದಿರುವ ವಿಷಯ. ಈ 'ಸಹಾಯ' ದಿಂದ ಆಗಿರುವ ಅಭಿವೃದ್ಧಿಯ ಫಲವನ್ನು ಮೂರನೇ ಜಗತ್ತಿನ ದೇಶಗಳ ಆಳುವ ವರ್ಗಗಳು ಕಬಳಿಸಿವೆ ಎಂಬುದೂ ಸಾಮ್ರಾಜ್ಯಶಾಹಿಗಳಿಗೆ ತಿಳಿದಿರುವ ವಿಷಯ. ದಟ್ಟದರಿದ್ರರ ಸ್ಥಿತಿ ಇದರಿಂದ ಇನ್ನೂ ಕೆಟ್ಟಿದೆ. ಇದು ಸಾಮಾಜಿಕವಾಗಿ ಆಸ್ಫೋಟಕಾರಿ, ಇಂತಹ ಆಸ್ಫೋಟನೆ ಕ್ರಾಂತಿಕಾರಿ ಚಳುವಳಿಯ ನಾಯಕತ್ವದಲ್ಲಿ ಬೆಳೆಯುವುದು ಸಾಮ್ರಾಜ್ಯಶಾಹಿಗೆ ದೊಡ್ಡ ಆತಂಕ. ಈ ದೇಶಗಳಲ್ಲಿ ಬಂಡವಾಳ ಶಾಹಿ ಬೆಳವಣಿಗೆಗೆ ಅಗತ್ಯವಾದ ಸುಧಾರಣೆ ಗಳನ್ನು (ಭೂ ಸುಧಾರಣೆ ಇತ್ಯಾದಿ) ತರಲೂ ಸಹ ಆಳುವ ವರ್ಗಗಳಿಗೆ ಆಸಕ್ತಿ ಇಲ್ಲ. ಇದಲ್ಲದೆ ದುಡಿಯುವ ಜನರಲ್ಲಿ ದಟ್ಟದರಿದ್ರರಿಗೆ ಸ್ವಲ್ಪವಾದರೂ ಪರಿಹಾರ ಕೊಡುವುದು, ಉತ್ಪಾದಕತೆ ಹೆಚ್ಚಿಸುವುದು ಬಂಡವಾಳಶಾಹಿ ಪದ್ಧತಿಯ ಭದ್ರತೆಯ ದೃಷ್ಟಿಯಿಂದ ಮುಖ್ಯ. ಈ ಕಾರಣದಿಂದ ಆಗ ವಿಶ್ವಬ್ಯಾಂಕ್‌ನ ಅಧ್ಯಕ್ಷನಾಗಿದ್ದ ರಾಬರ್ಟ್ ಮ್ಯಾಕ್ನಮಾರ 1973ರಲ್ಲಿ, ಸ್ವಯಂಸೇವಾ ಸಂಸ್ಥೆಗಳ ಮೂಲಕ ಅಭಿವೃದ್ಧಿ ಕಾರ್ಯದ ಪ್ರಯೋಜನ ಬಡ ಜನರಿಗೆ ನೇರವಾಗಿ ತಲುಪಬೇಕು, ಆದ್ದರಿಂದ ಈ ಸ್ವಯಂಸೇವಾ ಸಂಸ್ಥೆಗಳಿಗೆ ನೇರ ಧನ ಸಹಾಯ ನೀಡಬೇಕು ಸರಕಾರಗಳ ಮೂಲಕ ನೀಡಿದರೇ ದುರುಪಯೋಗವಾಗುತ್ತದೆ ಎಂಬ ಹೊಸ ನೀತಿ ಮಂಡಿಸಿದ.

ಇದನ್ನು ತಕ್ಷಣ ಕಾರ್ಯಗತಗೊಳಿಸಲು ಕ್ರಮ ತೆಗೆದು ಕೊಳ್ಳಲಾಯಿತು. ಇದರೊಂದಿಗೆ ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಸಾಮ್ರಾಜ್ಯ ಶಾಹಿಗಳ. ಬೆಳವಣಿಗೆ 'ಮಾದರಿ'ಯಲ್ಲಿ ಸರ್ಕಾರಿ ಕ್ಷೇತ್ರಕ್ಕೆ ಸಹಾಯ ಒಂದು ಕಡೆ, ಇನ್ನೊಂದು ಕಡೆ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಬೆಳವಣಿಗೆಯನ್ನು ಜನರ ಹತ್ತಿರ ತೆಗೆದುಕೊಂಡು ಹೋಗಲು ಧನ ಸಹಾಯ ಎರಡೂ ಸೇರಿತ್ತು. ಈ ಅಭಿವೃದ್ಧಿ ಕಾರ್ಯಗಳೆಂದರೆ ಗ್ರಾಮ ಅಭಿವೃದ್ಧಿ, ಸಮುದಾಯ ಅಭಿವೃದ್ಧಿ, ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು, ಕೊಳಚೆ ಪ್ರದೇಶಗಳ ಸುಧಾರಣೆ ಇತ್ಯಾದಿ. ಈ 'ಮಾದರಿ' ಬೆಳವಣಿಗೆಗೆ ಧನ ಸಹಾಯ ಮಾಡುವುದು ಅಮೇರಿಕ ಮತ್ತು ಪಶ್ಚಿಮ ಯುರೋಪಿನ ಸರ್ಕಾರಗಳ ಅಧಿಕೃತ ನೀತಿಯಾಯಿತು. ಹೀಗೆ ಹಿಂದೆ ದಾನ, ಪರಿಹಾರ, ಪುನರ್ವಸತಿ ಕಾರ್ಯಕ್ರಮಗಳಲ್ಲಿ ಮಾತ್ರ ಪಾಲುಗೊಳ್ಳುತ್ತಿದ್ದ ಸ್ವಯಂ ಸೇವಾ ಸಂಸ್ಥೆಗಳಿಗೆ ಅಭಿವೃದ್ಧಿ ಕಾರ್ಯಕ್ರಮ ವಿಶಿಷ್ಟ ಪಾತ್ರ ಕೊಟ್ಟದ್ದು ಸಾಮ್ರಾಜ್ಯ ಶಾಹಿ ನೀತಿಯಲ್ಲಿ ಹೊಸ ದಿಕ್ಕೇ. ಈಗಾಗಲೇ ಇದ್ದ ಸ್ವಯಂಸೇವಾ ಸಂಸ್ಥೆಗಳಿಗೆ ಈ ಧನ ಸಹಾಯ ನೀಡಲಾಯಿತು. ಇದರ ಫಲವಾಗಿ ಮತ್ತು ಧನ ಸಹಾಯದಿಂದಾಗಿ ಹಲವು ಹೊಸ ಗುಂಪುಗಳು ಹುಟ್ಟಿಕೊಂಡವು. ಇದರಿಂದ ಈ ಗುಂಪುಗಳು ಸ್ವಯಂ ಸ್ಫೂರ್ತವಾಗಿ ಹುಟ್ಟಿಕೊಂಡದಲ್ಲ ಎಂದು ಗೊತ್ತಾಗುತ್ತದೆ.

ಈ ಹಂತದಲ್ಲಿ ಸ್ವಯಂ ಸೇವಾ ಗುಂಪುಗಳ ಅನುಭವ ಮತ್ತು ಅದರ ವರದಿ ಧನ ಸಹಾಯ ನೀಡಿದ ಸಂಸ್ಥೆಗಳಿಗೆ ಮುಟ್ಟಿ, ಇದರ ವಿಶ್ಲೇಷಣೆಯಿಂದ ಮೇಲೆ ಹೇಳಿದ 'ಮಾದರಿ'ಯ ಬೆಳವಣಿಗೆ ವಿಧಾನಕ್ಕೆ ವಿಪರೀತ ಅಡ್ಡಿ ಆತಂಕಗಳು ಇವೆ ಎಂದು ತಿಳಿದು ಬಂತು. ಇದರಿಂದಾಗಿ ಜನರ ಮಧ್ಯೆ ಕೆಲಸ ಮಾಡಲು ಅಗತ್ಯ ಬಿದ್ದರೆ ರಾಜಕೀಯಕ್ಕಿಳಿಯುವುದು ಅಗತ್ಯ ಎಂದು ಸಾಮ್ರಾಜ್ಯ ಶಾಹಿಗಳ ನೀತಿ ರೂಪಿಸುವವರು ತೀರ್ಮಾನಕ್ಕೆ ಬಂದರು. 'ಶಿಕ್ಷಣ-ಅರಿವು-ಸಂಘಟನೆ-ಹೋರಾಟ'ದ ಬೇರೆ ಬೇರೆ ರೀತಿಗಳನ್ನು ಉಪಯೋಗಿಸುವುದು ಅಗತ್ಯ ಎಂದು ಅಮೇರಿಕನ್ ರಾಜಕೀಯ ಶಾಸ್ತ್ರ ಸೈದ್ಧಾಂತಿಕ ಪ್ರಚಾರ ಆರಂಭಿಸಿತು. ಇದು ಸ್ವಯಂಸೇವಾ ಸಂಸ್ಥೆಗಳು ಬೆಳವಣಿಗೆ ಕಾರ್ಯಕ್ರಮಗಳನ್ನು ಬಿಟ್ಟು ಸಂಘಟನಾತ್ಮಕ ಪಾತ್ರವಹಿಸಲು ಕಾರಣವಾಯಿತು. 1975-76 ರಿಂದೀಚೆಗೆ ಈ ಸಕ್ರಿಯ ಪಾತ್ರದಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಅನುಭವ ದಿಂದಲೇ ಈ ದಾರಿ ಹಿಡಿದದ್ದು ಎಂಬ ಸ್ವಯಂಸೇವಾ ಸಂಸ್ಥೆಗಳ ಪರವಾದ ಪಂಡಿತರ ವಾದ ಸುಳ್ಳು ಎಂದು ತಿಳಿಯುತ್ತದೆ ಉದಾಹರಣೆಗೆ Action for World Solidarity (ಪ. ಜರ್ಮನಿ) ತನ್ನ ಉದ್ದೇಶ "ಜನಸಮೂಹದಲ್ಲಿ ಜಾಗೃತಿ ಉಂಟುಮಾಡಿ ಅವರನ್ನು ಶೋಷಿಸುವ ಶಕ್ತಿಗಳಿಂದ ಬಿಡುಗಡೆ ಪಡೆಯಲು ಬೇಕಾದ ಜ್ಞಾನ ಮತ್ತು ಶಕ್ತಿ ಪಡೆಯಲು ಬೇಕಾದ ವಯಸ್ಕ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವುದು" ಎಂದು ಸ್ಪಷ್ಟವಾಗಿ ಹೇಳಿದೆ.

ಎಡ ಸೋಗು

ಈ ಎರಡನೆಯ ಹಂತದಲ್ಲಿ (1975-76 ರಿಂದೀಚೆಗೆ) ಸಕ್ರಿಯವಾಗಿರುವ ಗುಂಪುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಚರ್ಚುಗಳ ಒಳಗಿರುವ ತೀವ್ರವಾದಿ ಕ್ರಿಶ್ಚಿಯನ್ ಗುಂಪುಗಳೂ ಸೇರಿವೆ. ಈ ಗುಂಪುಗಳೂ ದೊಡ್ಡ ಪ್ರಮಾಣದಲ್ಲಿ ವಿದೇಶಿ ಕ್ರಿಶ್ಚಿಯನ್ ಸಂಘಟನೆಗಳ ಮೂಲಕ ಅಪಾರ ಹಣ ಪಡೆಯುತ್ತಿವೆ. ಇದಲ್ಲದೆ ಧರ್ಮ ನಿರಪೇಕ್ಷ ಗುಂಪುಗಳೂ ಇವೆ. ಈ ಹಂತದಲ್ಲಿ ಈ ಎರಡೂ ರೀತಿಯ ಗುಂಪುಗಳಿಗೆ ಸಾಮಾನ್ಯವಾದ ಅಂಶವೆಂದರೆ ತೀವ್ರವಾದಿ ಅಥವಾ ಎಡ ಸೋಗು.

ಈ ಎಡ ಸೋಗಿನ ಹಿಂದಿನ ನಿಜವಾದ ಉದ್ದೇಶ ಎಡ ಪಕ್ಷಗಳಿಗೆ ಪ್ರತಿಸ್ಪರ್ಧಿಯಾಗಿ ಜನ ವಿಭಾಗಗಳ ಸಂಘಟನೆ ಮಾಡಿ ಅವುಗಳ ದಾರಿ ತಪ್ಪಿಸುವುದು, ಕ್ರಾಂತಿಕಾರಿ ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಅಡ್ಡಿ ಒಡ್ಡುವುದು, ಬೂರ್ಜ್ವಾ ಸುಧಾರಣಾ ವಾದವನ್ನು ಪ್ರಸಾರ ಮಾಡುವುದು.

"ಈ ಗುಂಪುಗಳಿಗೆ ದೇಶದ ಅಧಿಕಾರ ಹಿಡಿಯುವ ಉದ್ದೇಶವಿರಬಾರದು. ಈ ಗುಂಪುಗಳ ಇರುವಿಕೆಯೇ ಬೊಲ್ಶೆವಿಕ್ ಪಕ್ಷವೊಂದೇ ಸಾಮಾಜಿಕ ಬದಲಾವಣೆಯನ್ನು ತರುವ ಹರಿಕಾರ ಎಂಬ ಭಾವನೆಗೆ ಸವಾಲೊಡ್ಡುತ್ತದೆ"

(ಹರ್ಷ ಸೇಠಿ ಒಂದು ಲೇಖನದಲ್ಲಿ)

ಈ ಎಡ ಸೋಗಿನ ಹಿಂದಿನ ನಿಜವಾದ ಉದ್ದೇಶ ಎಡ ಪಕ್ಷಗಳಿಗೆ ಪ್ರತಿ ಸ್ಪರ್ಧಿಯಾಗಿ ಜನ ವಿಭಾಗಗಳ ಸಂಘಟನೆ ಮಾಡಿ ಅವುಗಳ ದಾರ್ಿ ತಪ್ಪಿಸುವುದು, ಕ್ರಾಂತಿಕಾರಿ ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಅಡಿ ಒಡ್ಡುವುದು, ಬೂರ್ಜ್ವಾ ಸುಧಾರಣಾ ವಾದವನ್ನು ಪ್ರಸಾರ ಮಾಡುವುದು.

"ಶೋಷಿತ ಗುಂಪುಗಳು ಎಡ ಪಕ್ಷಗಳ ಪ್ರಭಾವದಿಂದ ಮುಕ್ತವಾಗಿ ಯೋಜಿಸಲು ಕಲಿಸಬೇಕು. ಶೋಷಿತರ ಕ್ರಾಂತಿಕಾರಿ ಚಳುವಳಿ ಎಡ ಪಕ್ಷಗಳು ಮತ್ತು ಅವರ ಸಂಘಟನಾತ್ಮಕ ಕೆಲಸಗಳಿಂದ ಸಾಧ್ಯವಿಲ್ಲ."

ಸ್ವಯಂಸೇವಾ ಗುಂಪುಗಳ ಸೈದ್ಧಾಂತಿಕ ಸಮರ್ಥಕರ ಈ ಮೇಲಿನ ಕೆಲವು ಹೇಳಿಕೆಗಳಿಂದ ಈ ಗುಂಪುಗಳ ಎಡ ಸೋಗಿನ ಉಪ್ಪೇಶ ಗೊತ್ತಾಗುತ್ತದೆ. ಕಮ್ಯೂನಿಸ್ಟ ಪಕ್ಷಗಳ 'ಕೇಂದ್ರೀಕೃತ' 'ಶ್ರೇಣಿಬದ್ಧ' 'ಶೋಷಕ' ಸಂಘಟನಾ ವಿಧಾನಕ್ಕೆ ಬದಲಾಗಿ Action group ಹೆಚ್ಚು ಕ್ರಾಂತಿಕಾರಿಯಾದುದು !

ಈ 'ಕ್ರಾಂತಿಕಾರಿಗಳು' ರಾಜಕೀಯ ಶಾಸ್ತ್ರದಲ್ಲಿ ಅಮೆರಿಕನ್ ಪಂಥದ ಸಿದ್ಧಾಂತ ಮತ್ತು ಮಾರ್ಕ್ಸ್‌ವಾದದ ಕಸಿ ಮಾಡಿಸಿ, ಕಾರ್ಮಿಕ ವರ್ಗದ ಸಿದ್ಧಾಂತ ಮತ್ತು ಸಂಘಟನೆ ಇಲ್ಲದೆ ಸಾಮ್ರಾಜ್ಯಶಾಹಿ ಹಣದ ಇಂಜೆಕ್ಷನ್‌ನಿಂದ ಸಾಮಾಜಿಕ ಬದಲಾವಣೆಯ ಫಲ ಸಾಧ್ಯ ಎನ್ನುತ್ತಿದ್ದಾರೆ. ನಮ್ಮ ದೇಶದ ಕೇಂದ್ರೀಕೃತ ಆಳುವ ವರ್ಗಗಳಿಗೂ ಅವರ ಬೆಂಬಲಿಗ ಸಾಮ್ರಾಜ್ಯಶಾಹಿಗಳಿಗೂ ಈ ವಿಕೇಂದ್ರಿಕೃತ ಎಡ ಸೋಗಿನ, ಅಧಿಕಾರ ಸನ್ಯಾಸ ಮಾಡಿರುವ ಗುಂಪುಗಳು ಅಪಾಯಕರವಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಎಡ ಚಳುವಳಿಗಳಿಗೆ ಗುರಿಮುಟ್ಟಲು ಅಡ್ಡಿ ಮಾಡುವುದಾದರೆ ಸಹಾಯಕರವೇ. ವಿವಿಧ ಜನ ವಿಭಾಗಗಳನ್ನು ಸಂಘಟಿಸಿ, ಇವುಗಳನ್ನು ವಿಚ್ಛಿದ್ರಕಾರಿ ಚಳುವಳಿಗಳಿಗೆ ಇಳಿಯುವಂತೆ ಮಾಡಿ ದುಡಿಯುವ ವರ್ಗ ದಐಕ್ಯ ಹೋರಾಟ ನಡೆಯದಂತೆ ತಡೆಯುವುದು ಈ ಗುಂಪುಗಳ ನಿಜವಾದ ಉದ್ದೇಶ.

ಎಡ ಕ್ರಿಶ್ಚಿಯನ್ ಪಾತ್ರ

ದ. ಅಮೆರಿಕಾದ ಕ್ಯಾಥೋಲಿಕ್ ಚರ್ಚ್‌ಗಳಲ್ಲಿದ್ದಂತೆ, ಭಾರತದಲ್ಲೂ ಆಳುವ ವರ್ಗಗಳೊಡನೆ ಚರ್ಚಿನ ಶಾಮೀಲು, ಪಟ್ಟಭದ್ರ ಹಿತಾಸಕ್ತಿ ವಿರುದ್ಧ ಕೆಲವರು ಬಂಡಾಯವೆದ್ದಿದ್ದಾರೆ. ಚರ್ಚು ಸಾಮಾಜಿಕ ಅಗತ್ಯ ಮತ್ತು ದುಡಿಯುವ ಜನರ ಆಕಾಂಕ್ಷೆಗಳಿಗೆ ಸ್ಪಂದಿಸಬೇಕು ಎಂಬ ಬೇಡಿಕೆ ಬಲವಾಗಿ ಮೂಡಿಬಂದಿದೆ. ಈ ಬೇಡಿಕೆಯನ್ನು ಮಂಡಿಸುತ್ತಿರುವ 'ಎಡ' ಕ್ರಿಶ್ಚಿಯನ್ ಗುಂಪುಗಳು 'ವಯಸ್ಕ ಶಿಕ್ಷಣ' ಕಾರ್ಯದಲ್ಲಿ ಕೆಲಸ ಮಾಡುತ್ತಿವೆ. ಆದರೆ ಇವರ ಗುರು ಪಾಲೋ ಫ್ರೈಯರೆ 'ದಮನಕಾರಿ ಸಂಸ್ಕೃತಿ'ಯ ಸಿದ್ಧಾಂತವನ್ನು ರಾಜಕೀಯ ಕ್ಷೇತ್ರಕ್ಕೆ ವಿಸ್ತರಿಸಿ ಎಡ ಪಕ್ಷಗಳು ಜನ ವಿಭಾಗಗಳನ್ನು ಸಂಘಟಿಸಿ ತಮ್ಮ 'ನಿಯಂತ್ರಣ'ದಲ್ಲಿ ಇಟ್ಟುಕೊಳ್ಳುವುದು, ಇದೇ ದಮನ ಸಂಸ್ಕೃತಿ'ಯ ಒಂದು ವಿಧಾನ ಎಂಬ ನಿಲುವು ತೆಗೆದುಕೊಳ್ಳುತ್ತಿದ್ದಾರೆ. ಈ ಚಳುವಳಿಯಲ್ಲಿರುವ ಹಸಿ ಪುಟ್ಟ ಬೂರ್ಜ್ವಾ ಬುದ್ಧಿಜೀವಿಗಳ ಜೀವನಾನುಭವದ ಕೊರತೆಯಿಂದ ಇದು ಸಾಧ್ಯವಾಗಿದೆ. ಇದಲ್ಲದೆ ಚರ್ಚುಗಳ ವಿರುದ್ಧ ಜನರನ್ನು ಸಂಘಟಿಸುವ ಬದಲು ವಿದೇಶಿ ಹಣದಿಂದ ಎಡ ಚಳುವಳಿಯ ಮೇಲೆ ಎರಗಲು ಸಿದ್ಧರಾಗಿದ್ದಾರೆ. ಇದರ ಅರ್ಥ ಈಗಾಗಲೇ ಪು ಟ ದೆ ದ್ದಿ ರು ವ ಸಾಮ್ರಾಜ್ಯಶಾಹಿ ಚರ್ಚ್‌ನ ವಿರುದ್ಧದ ಹೋರಾಟವನ್ನು ಪ್ರಜಾಸತ್ತಾತ್ಮಕ ದಾರಿಯಿಂದ ವಿಚ್ಛಿದ್ರಕಾರಿ ದಾರಿಗೆ ಇಳಿಸುವಲ್ಲಿ ಸಫಲವಾಗಿದೆ ಎಂದಾಗುತ್ತದೆ. ಚರ್ಚನ್ನು ಪ್ರಜಾಸತ್ತೀಕರಿಸುವ ಕೆಲಸಕ್ಕೆ ತೊಡಗದಿರುವವರೆಗೆ 'ತೀವ್ರವಾದಿ' ಕ್ರಿಶ್ಚಿಯನ್ನರದೂ ಕೇವಲ ಎಡ ಸೋಗು ಆಗಿಯೇ ಉಳಿಯುತ್ತದೆ.

ಪಕ್ಷದ ಕರ್ತವ್ಯ

ವಿದೇಶಿ ಹಣ ಪಡೆಯುವ ಎಲ್ಲ ಗುಂಪುಗಳ ಕಾರ್ಯಾಚರಣೆಯನ್ನು ಪಕ್ಷ ಎಚ್ಚರಿಕೆಯಿಂದ ಗಮನಿಸಬೇಕು. ಈ ಗುಂಪುಗಳ ಸಕ್ರಿಯ ಕಾರ್ಯಕರ್ತರು ಪಕ್ಷದ ಸಂಘಟನೆಗಳಿಗೆ ನುಸುಳದಂತೆ ಎಚ್ಚರಿಕೆ ವಹಿಸಬೇಕು. ಇಂತಹ ಗುಂಪುಗಳ ಬಗ್ಗೆ ಅಧ್ಯಯನ ನಡೆಸಿ. ಅದರ ಸ್ವರೂಪದ ಬಗ್ಗೆ ನಿರ್ಧರಿಸಿ ಪಕ್ಷದ ಸದಸ್ಯರಿಗೆ ತಿಳಿಸಬೇಕು. ಮುಖ್ಯವಾಗಿ ಈ ಗುಂಪುಗಳ ಎಡ ಸೋಗು ಬಯಲಿಗೆಳೆಯುವ ಸೈದ್ಧಾಂತಿಕ ಪ್ರಚಾರ ಕೈಗೊಳ್ಳುವುದು ಅತ್ಯಂತ ಜರೂರಿನ ಕೆಲಸ.

ಕರ್ನಾಟಕದಲ್ಲಿ
ಸ್ವಯಂಸೇವ ಸಂಸ್ಥೆಗಳ ಸೂಕ್ಷ್ಮ ದ್ರೋಹ

ತಳುಕು ತಳುಕಿನ ವೆಂಕಣ್ಣಯ್ಯನವರಿಗೆ ಜನ್ಮಕೊಟ್ಟ ಚಿತ್ರದುರ್ಗ ಜಿಲ್ಲೆಯ ಒಂದು ಕುಗ್ರಾಮ ರಾಷ್ಟ್ರೀಯ ಹೆದ್ದಾರಿಯ ಬಳಿಯಲ್ಲೇ ಇದ್ದರೂ ಪ್ರಗತಿಯನ್ನು ಕಾಣದೆ ಹಿಂದುಳಿದಿರುವ ಒಂದು ಹಳ್ಳಿ. ನೆರೆಯ ಜಿಲ್ಲೆಯಾದ ಬಳ್ಳಾರಿಯ ತೆಲುಗು ರೆಡ್ಡಿಗಳ ಪ್ರಭಾವ ಈ ಜಿಲ್ಲೆಯ ಮೇಲಿದೆ. ಕೆಲವು ವರ್ಷಗಳ ಹಿಂದೆಯಷ್ಟೆ ಈ ಗ್ರಾಮಕ್ಕೆ ಪಾಪಾನಾಯಕ್ ಎಂಬ ಯುವಕನ ಪ್ರವೇಶ. ಹಳ್ಳಿಯ ಕಡುಬಡತನವನ್ನ, ಅನಕ್ಷರತೆಯನ್ನ ನಿರುದ್ಯೋಗವನ್ನ ರೋಗರುಜಿನಗಳನ್ನು ತೊಡೆದು ಹಾಕಲು ತನ್ನನ್ನು ತಾನು ನಿಷ್ಠೆಯಿಂದ ತೊಡಗಿಸಿಕೊಂಡು ಇಂದಿಗೂ ದುಡಿಯುತ್ತಾ ಬಂದಿರುವ ವ್ಯಕ್ತಿ ಆದರ್ಶದ ಹುಚ್ಚಿಗೆ ಬಲಿಯಾದ ಯುವಕನೊಬ್ಬ ಕೆಲವು ಕಾಲ ಈ ಹುಚ್ಚಿನಲ್ಲಿದ್ದು ನಂತರ ತೆಪ್ಪಗಾಗುತ್ತಾನೆ ಎಂದು ನಿರೀಕ್ಷಿಸಿದ್ದ ಆ ಹಳ್ಳಿಯ ನಿರಾಶಾವಾದಿಗಳಿಗೆ ಈ ಯುವಕನೊಬ್ಬ ಸವಾಲಾಗಿ ಇಂದಿಗೂ ಚುರುಕಿನಿಂದ ತನ್ನ ಗ್ರಾಮೀಣ ಜನಸೇವೆಯ ಕೆಲಸವನ್ನು ಮುಂದುವರಿಸಿದ್ದಾನೆ. ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಸರ್ಕಾರಿ ನೌಕರಿಗೆ ಪ್ರಯತ್ನಿಸುವ ಹಂತದಲ್ಲಿ ಸ್ವಯಂ ಸೇವಾ ಸಂಸ್ಥೆಗಳೆಡೆ ಆಕರ್ಷಿತನಾದ ಈ ಯುವಕ ಬಹಳ ನಿಷ್ಠೆಯಿಂದ ಇಂದಿಗೂ ತನ್ನ ಕೆಲಸವನ್ನು ಮುಂದುವರಿಸುತ್ತಿರುವುದೇ ಅಲ್ಲದೆ ಅದರ ವ್ಯಾಪ್ತಿಯನ್ನು ವಿಸ್ತರಿಸುತ್ತಿದ್ದಾನೆ. ಪ್ರಾರಂಭದಲ್ಲಿ ಶಾಲಾ ಮಕ್ಕಳಿಗೆ ಸಂಜೆಯ ವೇಳೆಯಲ್ಲಿ ಆಟವಾಡಿಸುವುದು, ನಾಟಕ, ಹಾಡು ಮುಂತಾದುವನ್ನು ಕಲಿಸುತ್ತಾ ಆ ಹಳ್ಳಿಯ ಜೀವನದಲ್ಲಿ ಬೆರೆಯುತ್ತಾ ಹೋದ ಯುವಕ ಕ್ರಮೇಣ ಶಾಲೆಗೆ ಹೋಗಲಾಗದ ಅನೇಕ ಮಕ್ಕಳನ್ನು ಶಾಲೆಗೆ ಹೋಗುವಂತೆ ಪುಸಲಾಯಿಸಿದ, ಅವರ ವಿದ್ಯಾಭ್ಯಾಸಕ್ಕಾಗಿ ಸ್ವಲ್ಪ ಧನ ಸಹಾಯವನ್ನು "Group for Urban and Rural Development Society" (G.U.R.D.S.) ಎಂಬ ಸಂಸ್ಥೆಯ ಮೂಲಕ ನೀಡಲಾರಂಭಿಸಿದ. ಆ ಹಳ್ಳಿಯಲ್ಲಿ S.S.L.C, P.U.C., T.C.H. ಪಾಸುಮಾಡಿ ನೌಕರಿಗಾಗಿ ಪರದಾಡುತ್ತಿದ್ದ ಯುವಕ ಯುವತಿಯರನ್ನು G.U.R.D.S. ಸಂಸ್ಥೆಯ ಅಲ್ಪಾವಧಿ ಕಾರ್ಯಕರ್ತರನ್ನಾಗಿ ಮಾಡಿಕೊಂಡು ತಿಂಗಳಿಗೆ 200 – 300 ರೂ. ವೇತನ ನೀಡಲಾರಂಭಿಸಿದ. ಅವರ ಸಹಾಯದಿಂದ ಆ ಹಳ್ಳಿಯ ಮತ್ತು ಸುತ್ತ ಮುತ್ತಲ ಮತ್ತೆ ಕೆಲವು ಹಳ್ಳಿಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮೀಕ್ಷೆಯನ್ನು ನಡೆಸಿದ. ಅದರ ಆಧಾರದ ಮೇಲೆ ಆ ಹಿಂದುಳಿದ ಪ್ರದೇಶದ ಅಭಿವೃದ್ಧಿಗಾಗಿ ಯೋಜನೆಯೊಂದನ್ನು ಸಿದ್ಧಪಡಿಸಿ ವಿದೇಶಿ ಸಂಸ್ಥೆಯೊಂದಕ್ಕೆ ಕಳುಹಿಸಿ ಅದನ್ನು ಕಾರ್ಯರೂಪಕ್ಕಿಳಿಸಲು ಆರ್ಥಿಕ ನೆರವನ್ನು ಬೇಡಿದ. ವಿದೇಶಿ ಸಂಸ್ಥೆಯಿಂದ ಆ ಯೋಜನೆಗೆ ನೆರವು ಬಿಡುಗಡೆಯಾದ ನಂತರ G.U.R.D.S ಸಂಸ್ಥೆ ವಿದ್ಯಾಕ್ಷೇತ್ರಕಷ್ಟೆ ತನ್ನ ಸೇವೆಯನ್ನು ಮಿತಗೊಳಿಸಿಕೊಳ್ಳದೆ ಅದನ್ನು ಹಲವಾರು ಕ್ಷೇತ್ರಗಳಲ್ಲಿ ವಿಸ್ತರಿಸಿಕೊಳ್ಳುತ್ತಿದೆ. ಅಗರಬತ್ತಿ ತಯಾರಿಕೆ, ಕತ್ತಾಳೆ ನಾರಿನ ಕೈಗಾರಿಕೆ, ಕಮ್ಮಾರಿಕೆ, ಬಡಿಗಿ ಕೆಲಸ, ಕುಂಬಾರಿಕೆ ಮುಂತಾದ ಉದ್ಯೋಗ ಮಾಡುವ ಗ್ರಾಮೀಣ ಕಸುಬುದಾರರಿಗೆ ಸರ್ಕಾರದಿಂದ ಸಹಾಯ ಧನ ದೊರಕುವಂತೆಮಾಡಿ ಅವರು ತಮ್ಮ ಕಸುಬನ್ನು ಹೆಚ್ಚು ಹುಮ್ಮಸ್ಸಿನಿಂದ ನಡೆಸುವಂತೆ ಮಾಡಿದೆ. ಅವರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಸಹ ಈ ಸಂಸ್ಥೆ ಸಹಾಯ ಮಾಡುತ್ತಿದೆ. ಇದಲ್ಲದೆ ಸರ್ಕಾರದ ಸಾಲ, ಸಹಾಯ ಧನ, ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ಸಹಾಯ ಧನ ಇನ್ನೂ ಮುಂತಾದ ಸೌಲಭ್ಯ ಹಳ್ಳಿಯ ಜನ ಪಡೆದುಕೊಳ್ಳಲು G. U. R. D. S. ಸಂಸ್ಥೆಯ ಕಾರ್ಯಕರ್ತರು ನೆರವು ನೀಡುತ್ತಾರೆ. ಅವರೆಲ್ಲರಿಗೂ G.U.R.D.S. ಈಗ ಒಂದು ಭರವಸೆಯ ಕೇಂದ್ರವಾಗಿದೆ.

G.U.R.D.S. ನಂತೆಯೇ ವಿದೇಶಿ ಸಂಸ್ಥೆಗಳಿಂದ ಹಣ ಪಡೆದು ಕರ್ನಾಟಕದ ವಿವಿಧ ಭಾಗಗಳಲ್ಲಿ ಕಾರ್ಯ ಪ್ರವೃತ್ತವಾಗಿರುವ ನೂರಕ್ಕೂ ಹೆಚ್ಚು ಸಂಸ್ಥೆಗಳು ಗ್ರಾಮೀಣಾಭಿವೃದ್ಧಿ, ಪರಿಸರ ಸಂರಕ್ಷಣೆ, ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಚಾರದಂತಹ ಸೀಮಿತ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿವೆ. ಈ ಸಂಸ್ಥೆಗಳು ದಕ್ಷಿಣ ಕನ್ನಡ, ಬೆಂಗಳೂರು, ಕೋಲಾರ, ಮೈಸೂರು, ತುಮಕೂರು, ರಾಯಚೂರು ಧಾರವಾಡ ಮುಂತಾದ ಜಿಲ್ಲೆಗಳಲ್ಲಿ

ವಿದೇಶೀ ಸಂಸ್ಥೆಗಳಿಂದ ಹಣ ಪಡೆದು ಕಾರ್ಯ ಪ್ರವೃತ್ತವಾಗಿರುವ ನೂರಕ್ಕೂ ಹೆಚ್ಚು ಸಂಸ್ಥೆಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿವೆ ಮೇಲ್ನೋಟಕ್ಕೆ ಸ್ವತಂತ್ರ, ಸ್ವಾಯತ್ತ ಸಂಸ್ಥೆಗಳಂತೆ ಕಂಡುಬರುವ ಈ ಎಲ್ಲಾ ಸಂಸ್ಥೆಗಳ ಚಟುವಟಿಕೆಗಳನ್ನು ಸಂಯೋಜಿಸಲು ರಾಜ್ಯಮಟ್ಟದಲ್ಲಿ ಒಂದು ಸಂಯೋಜಕ ಸಂಘಟನೆಯಿದೆ.

ಪ್ರಮುಖವಾಗಿ ಕೆಲಸ ಮಾಡುತ್ತಿವೆ. ಇವುಗಳಲ್ಲಿ ಬಹುಪಾಲು ಸಂಸ್ಥೆಗಳು ಅತ್ಯಂತ ಹಿಂದುಳಿದಿರುವ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಆ ಪ್ರದೇಶದ ಜನಗಳ ಸಮಸ್ಯೆಗಳಿಗೆ ತಮ್ಮದೇ ಆದ ಪರಿಹಾರ ಸೂಚಿಸುವ ನೆಪದಲ್ಲಿ ಜನಗಳ ನಡುವೆ ಬೇರು ಬಿಟ್ಟಿವೆ. ಬಹುಪಾಲು ಸಂಸ್ಥೆಗಳು ದ್ವಿಸಾಂಸ್ಕೃತಿಕ ಮತ್ತು ಬಹು ಸಾಂಸ್ಕೃತಿಕ ಪ್ರದೇಶಗಳಲ್ಲಿ ಕೆಲಸಮಾಡುತ್ತಿವೆ. ಉದಾಹರಣೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರ ನಡುವೆ ಕೆಲಸಮಾಡುತ್ತಿರುವ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಹುಣಸೂರು ತಾಲ್ಲೋಕಿನ ಕಾಡುಕುರುಬರ ನಡುವೆ ಕೆಲಸಮಾಡುತ್ತಿರುವ DEEDS, ಪಾವಗಡದಲ್ಲಿ ಸಕ್ರಿಯವಾಗಿರುವ VEDS, ದಾಂಡೇಲಿಯಲ್ಲಿ ಸಿದ್ಧಿಗಳ ನಡುವೆ ಕೆಲಸಮಾಡುತ್ತಿರುವ R.W.T. ಇತ್ಯಾದಿ. ಇಂತಹ ಪ್ರದೇಶಗಳ ಜನರ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಪ್ರೋತ್ಸಾಹಿಸಿ, ಅವರು ಅಲ್ಲಿಯ ಬಹುಸಂಖ್ಯಾತರ ಜೊತೆ ದ್ವೇಷವನ್ನು ಹುಟ್ಟುಹಾಕುವ ಪ್ರಯತ್ನವನ್ನು ಈ ಸಂಸ್ಥೆಗಳು ಅತ್ಯಂತ ಸೂಕ್ಷ್ಮವಾಗಿ ಮಾಡುತ್ತವೆ. ಜನರ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ರೂಪಿಸುವ ನೆಪದಲ್ಲಿ ಎಲ್ಲ ರಾಜಕೀಯ ಪಕ್ಷಗಳನ್ನು ಅಲ್ಲಗಳೆದು ಯಾವುದೇ ಪಕ್ಷದಿಂದ ಜನತೆಯ ಉದ್ಧಾರ ಸಾಧ್ಯವಿಲ್ಲ. ಎಲ್ಲಾ ಪಕ್ಷಗಳೂ ಜನತೆಯ ವಿರೋಧಿಗಳು ಹಾಗೂ ಲಂಚಕೋರರು ಎಂಬ ಭಾವನೆಯನ್ನು ಮೂಡಿಸುತ್ತಿವೆ. ಕೆಲವು ಸಂಸ್ಥೆಗಳು, ವ್ಯಾಪಕವಾಗಿ ಗ್ರಾಮೀಣ ನಿರುದ್ಯೋಗಿಗಳ, ಕೃಷಿ ಕೂಲಿಕಾರರ, ಸಣ್ಣ ಹಿಡುವಳಿದಾರರ ಸಂಘಟನೆಮಾಡಿ, ಆ ವರ್ಗಗಳ ರಾಜಕೀಯ ಧೃವೀಕರಣವನ್ನು ತುಂಬಾ ಯಶಸ್ವಿಯಾಗಿ ತಡೆಗಟ್ಟಲು ಕೆಲಸ ಮಾಡುತ್ತಿವೆ.

ಈ ಸಂಸ್ಥೆಗಳ ತಾತ್ವಿಕ ಮೂಲಗಳಲ್ಲಿ ಬಹಳ ವೈವಿಧ್ಯತೆ ಇದೆ. ಗಾಂಧಿವಾದದಿಂದ ಹಿಡಿದು, ಜೆ. ಪಿ., ವಿನೋಬಾ ಭಾವೆ, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್, ಏಂಗೆಲ್ಸ್, ಟ್ರಾಟ್‌ಸ್ಕಿ ಮಾವೋ, ಸಿದ್ಧಾಂತದವರೆಗೂ ಇದು ವ್ಯಾಪಿಸಿದೆ. ಮೇಲ್ನೋಟಕ್ಕೆ ಅತ್ಯಂತ ಸ್ವತಂತ್ರ ಮತ್ತು ಸ್ವಾಯತ್ತ ಸಂಸ್ಥೆಗಳಂತೆ ಕಂಡುಬರುವ ಈ ಎಲ್ಲಾ ಸಂಸ್ಥೆಗಳು ಅತ್ಯಂತ ಸುವ್ಯವಸ್ಥಿತವಾದ ಆಂತರಿಕ ಸಂಬಂಧವನ್ನು ಹೊಂದಿವೆ ಈ ಎಲ್ಲಾ ಸಂಸ್ಥೆಗಳ ಚಟುವಟಿಕೆಗಳನ್ನು ಸಂಯೋಜಿಸಲು ಕರ್ನಾಟಕದ ಮಟ್ಟದಲ್ಲಿ Federation of Voluntary Organisations for Rural Development ಎಂಬ ಸಂಯೋಜಕ ಸಂಘಟನೆಯನ್ನು ಹೊಂದಿವೆ. ಇದು ಅತ್ಯಂತ ವ್ಯವಸ್ಥಿತವಾಗಿ ಕೆಲಸ ಮಾಡುತ್ತದೆ. ನಿಯತ ಕಾಲಕ್ಕೆ ಸರಿಯಾಗಿ ಸಭೆ ಸೇರಿ ವಿವಿಧ ಸಂಸ್ಥೆಗಳು ನಡೆಸುತ್ತಿರುವ ಚಟುವಟಿಕೆಗಳನ್ನು ವಿಮರ್ಶಿಸಿ ಅವುಗಳ ವಿಸ್ತರಣೆಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಈ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡಲು ಬರುವ ಹೊಸಬರಿಗೆ ಕೇಂದ್ರ ಮಟ್ಟದಲ್ಲಿ ತರಬೇತಿ ಶಿಬಿರಗಳನ್ನು ಯೋಜಿಸುತ್ತದೆ. ಅತ್ಯಂತ ಹಿರಿಯರಿಂದ ಈ ಕ್ಷೇತ್ರದಲ್ಲಿ ಯಾವ ರೀತಿ ಕೆಲಸ ಮಾಡಬೇಕೆಂಬ ಬಗ್ಗೆ ವ್ಯವಸ್ಥಿತವಾದ ತರಬೇತಿ ನೀಡಲಾಗುತ್ತದೆ. ಈ ವಿವಿಧ ಸಂಘಟನೆಗಳು ನಡೆಸುವ ಕೆಲಸಗಳ ಪರಿಚಯ ಮಾಡಿಕೊಡುವ ವಾರ್ತಾ ಪತ್ರಗಳನ್ನು ಖಾಸಗಿಯಾಗಿ ತಮ್ಮಲ್ಲಿಯೇ ಪ್ರಚಾರ ಮಾಡಿಕೊಳ್ಳುತ್ತವೆ. ಇದೇ ರೀತಿ ಅಖಿಲ ಭಾರತ ಮಟ್ಟದಲ್ಲಿ All India Federation of Voluntary Organisation for Rural Development ಎಂಬ ಸಂಸ್ಥೆ ಇಂತಹುದೇ ಕೆಲಸವನ್ನು ಮಾಡುತ್ತದೆ.

ಈ ಸಂಸ್ಥೆಗಳ ತಾತ್ವಿಕತೆಯಲ್ಲಿ ಭಿನ್ನತೆ ಇರುವಂತೆ ಅವುಗಳು ಹಣ ಪಡೆಯುವ ದೇಶಗಳು ಹಾಗೂ ಸಂಸ್ಥೆಗಳಲ್ಲಿಯೂ ವೈವಿಧ್ಯತೆ ಇದೆ. ಒಂದೊಂದು ಸಂಸ್ಥೆಯೂ ಬೇರೆ ಬೇರೆ ದೇಶಗಳ ಜೊತೆ ವ್ಯವಹರಿಸಿ ತಮ್ಮ ಯೋಜನೆಗಳಿಗೆ ಹಣ ಪಡೆಯುತ್ತವೆ. ಪ್ರಮುಖವಾಗಿ ಕರ್ನಾಟಕದಲ್ಲಿ ಹಣ ಹಂಚುವ ದೇಶಗಳು ಮತ್ತು ಸಂಸ್ಥೆಗಳು ಈ ಕೆಳಗಿನಂತಿವೆ.

1) ಇಂಗ್ಲೆಂಡ್ — Oxfam, Hope.

2) ಫ್ರಾನ್ಸ್ — C. F. C. F. French Confederation of Producers Cooperatives.

3) ಕೆನಡಾ–Canadian Commission, CIDA, Cooperative Union of Canada.

4) ಪಶ್ಚಿಮ ಜರ್ಮನಿ – I.G.S.S. Carithas India, MISEROR CIEDS, Begeca.

5) ನೆದರ್‌ಲ್ಯಾಂಡ್ — Habitat Commission, HEVOS.

6) ಅಮೇರಿಕಾ — South Asia Partnership Committee USAU Christian childrens Fund, Institute for Humanistic Cooperation with developing Countries Praramba, Catnolic Relief Services.

7) ಹಾಲೆಂಡ್ : Cebemo.

8) ಸ್ವಿಟ್ಜರ್‌ಲ್ಯಾಂಡ್ : HEKS.

ಈ ವಿದೇಶೀ ಸಂಸ್ಥೆಗಳು ಸ್ವಯಂಸೇವಾ ಸಂಸ್ಥೆಗಳ ಯೋಜನೆಗಳಿಗೆ ವರ್ಷವೊಂದಕ್ಕೆ ಒಂದು ಲಕ್ಷದಿಂದ ಹಿಡಿದು 8-10 ಲಕ್ಷಗಳ ವರೆಗೆ ಹಣ ಮಂಜೂರು ಮಾಡುತ್ತವೆ. ಪ್ರತಿ ಯೋಜನೆಗೆ ಹಣ ನೀಡುವ ಮುನ್ನ ಆ ಪ್ರದೇಶದ ಸಾಮಾಜಿಕ ಆರ್ಥಿಕ ಧಾರ್ಮಿಕ ಸಾಂಸ್ಕೃತಿಕ ರಾಜಕೀಯ ಸಮೀಕ್ಷೆ ನಡೆಸುವುದನ್ನು ಅಗತ್ಯವಾಗಿ ಮಾಡಲಾಗುತ್ತದೆ. ಈ ವರದಿ ದಾನಿ ಸಂಸ್ಥೆಯನ್ನು ತಲುಪಿದ ನಂತರವೇ ಹಣ ಮಂಜೂರಾಗುತ್ತದೆ. ಇದಾದ ನಂತರ ಯೋಜನೆಯ ಪ್ರಗತಿಯನ್ನು ವಿಮರ್ಶಿಸಲು ಒಬ್ಬ ವಿದೇಶಿ ಪ್ರತಿನಿಧಿ ಮಧ್ಯಾವಧಿಯಲ್ಲಿ ಬಂದು ಹೋದ ನಂತರವೆ ಉಳಿದ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಹಣವೆ ಅಲ್ಲದೆ ಕೆಲವು ಸಂಸ್ಥೆಗಳಿಗೆ ವಾಹನಗಳು, ಔಷಧಿಗಳು, ಸಾಹಿತ್ಯ, ಶ್ರವ್ಯದೃಶ್ಯ ವೀಕ್ಷಣೋಪಕರಣಗಳು ಮುಂತಾದ ವಸ್ತುಗಳನ್ನು ಒದಗಿಸಲಾಗುತ್ತದೆ. ಈ ರೀತಿ ನಮ್ಮ ದೇಶದಲ್ಲಿ ಬೇರಿನ ಹಂತದ ಮಾಹಿತಿಯನ್ನು ಯಾವ ನಿಯಂತ್ರಣವೂ ಇಲ್ಲದೆ ಸಲೀಸಾಗಿ ಹೊರಗೆ ಸಾಗಿಸಲಾಗುತ್ತದೆ. ಹಾಡು ಹಗಲಿನಲ್ಲೆ ನಡೆಯುವ ಈ ಸ್ವಯಂ ಸೇವಾ ಕಿಂಕರರ ಬೇಹುಗಾರಿಕೆಗೆ ಯಾವ ನಿಯಂತ್ರಣವೂ ಇಲ್ಲ.

ಗ್ರಾಮೀಣಾಭಿವೃದ್ಧಿಯ ಬಹುಪಾಲು ಕೆಲಸಗಳನ್ನು ಈ ಸಂಸ್ಥೆಗಳು ತಮ್ಮ ಪ್ರಭಾವದ ಮೂಲಕ ಜಾರಿಗೆ ತಂದು ಗ್ರಾಮೀಣ ಜನರ ನಡುವೆ ಅಪಾರ ವಿಶ್ವಾಸ ಪಡೆದುಕೊಂಡಿವೆ. ಈ ಸ್ವಯಂ

ಈ ಸ್ವಯಂಸೇವಾ ಸಂಸ್ಥೆಗಳ ಚಟುವಟಿಕೆಗಳು ಕರ್ನಾಟಕದಲ್ಲಿ ಮತ್ತಷ್ಟು ವ್ಯಾಪಕವಾಗಿ ವಿಸ್ತರಣೆಯಾಗಲು ಯೋಜನೆಗಳು ಸಿದ್ಧವಾಗುತ್ತಿವೆ. ಮುಂದಿನ ಐದು ವರ್ಷಗಳಲ್ಲಿ ಪ್ರತಿ ತಾಲ್ಲೋಕಿಗೆ ಕನಿಷ್ಠ ಒಂದಾದರೂ ಸ್ವಯಂ ಸೇವಾ ಸಂಸ್ಥೆಯನ್ನು ರೂಪಿಸುವ ಯೋಜನೆ ಇದೆ.

ಸೇವಾ ಸಂಸ್ಥೆಗಳ ಮುಖ್ಯಸ್ಥರು ಸ್ಥಳೀಯ ಅಧಿಕಾರಿ ವರ್ಗದೊಂದಿಗೆ ಅತ್ಯಂತ ಸ್ನೇಹಪೂರ್ಣ ಸಂಬಂಧವನ್ನಿರಿಸಿಕೊಂಡಿರುತ್ತಾರೆ. ಸರ್ಕಾರದ ಬಹುಪಾಲು ಆದೇಶಗಳು ಮತ್ತು ಆಜ್ಞೆಗಳು ಈ ಸಂಸ್ಥೆಗಳಿಗೆ ನೇರವಾಗಿ ಸರ್ಕಾರದಿಂದಲೇ ಲಭ್ಯವಾಗುತ್ತವೆ. ಅಧಿಕಾರಿ ವರ್ಗದ ಜೊತೆಗಿನ ಸ್ನೇಹ ಗ್ರಾಮೀಣ ಪ್ರದೇಶದಲ್ಲಿ ಇವರ ಪ್ರಭಾವಕ್ಕೆ ಮತ್ತಷ್ಟು ಇಂಬು ಕೊಡುತ್ತದೆ. ಸಾಮಾನ್ಯವಾಗಿ ನಿರುದ್ಯೋಗಿ ಯುವಕರನ್ನೇ ತನ್ನೆಡೆಗೆ ಆಕರ್ಷಿಸಿ ಅವರನ್ನು ಗ್ರಾಮೀಣಾಭಿವೃದ್ಧಿಯಂತಹ ಕೆಲಸಗಳಲ್ಲಿ ಮಿತವೇತನಕ್ಕೆ ದುಡಿಸಿಕೊಂಡು ಅವರನ್ನು ಕ್ರಮೇಣ ತಮ್ಮ ಸೈದ್ಧಾಂತಿಕ ನಿಲುವಿನ ಕಡೆಗೆ ತರಬೇತಿಗೊಳಿಸಿಕೊಳ್ಳುವ ಕೆಲಸವನ್ನು ಅವು ಮಾಡುತ್ತವೆ. ಕೆಲವು ಯುವಕರು ಜಾಗೃತರಾಗಿ ಅಂತಹ ಸೈದ್ಧಾಂತಿಕ ಬದ್ಧತೆಯನ್ನು ಬೆಳೆಸಿಕೊಳ್ಳದಿದ್ದರೆ ಅವರನ್ನು ಕ್ರಮೇಣ ಹೊರದೂಡಲಾಗುತ್ತದೆ. ಯಾವುದೇ ರಾಜಕೀಯ ಪಕ್ಷದ ಕಾರ್ಯಕರ್ತನನ್ನೂ ತಮ್ಮ ಸಂಘಟನೆಯ ಪರಿಧಿಯಿಂದ ತುಂಬ ದೂರವಿಡುತ್ತಾರೆ. ನೇರವಾದ ರಾಜಕೀಯ ಹೋರಾಟದಲ್ಲಿ ಮತ್ತು ಚಟುವಟಿಕೆಗಳಲ್ಲಿ ಜನ ಭಾಗವಹಿಸದಂತೆ ಮಾಡುತ್ತವೆ.

ಪರಿಸರದ ಚಳುವಳಿಯಲ್ಲಿ ಪ್ರಮುಖವಾಗಿ ಕೆಲಸ ಮಾಡುತ್ತಿರುವ ಧಾರವಾಡದ TNC, Society for Environmental Awareness, Compaign against nuclear energy, ಪರಿಸರ ಸಂರಕ್ಷಣಾ ವೇದಿಕೆ. Sutra ಮುಂತಾದ ಸಂಸ್ಥೆಗಳು ನಗರ ಗ್ರಾಮಗಳ ಬೆಳವಣಿಗೆಯಲ್ಲಿನ ವ್ಯತ್ಯಾಸಗಳನ್ನು ದೊಡ್ಡದು ಮಾಡಿ ನಗರಗಳು ಹಳ್ಳಿಗಳನ್ನು ಶೋಷಿಸುತ್ತವೆ ಎಂಬ ಸಿದ್ಧಾಂತವನ್ನು ಹರಡುತ್ತಿವೆ. ಅಭಿವೃದಿ ಮತ್ತು ಪರಿಸರ ಸಂರಕ್ಷಣೆ ಎರಡೂ ಪರಸ್ಪರ ವಿರುದ್ಧವಾದವು. ಒಂದನ್ನು ಸಾಧಿಸಲು ಮತ್ತೊಂದನ್ನು ಬಲಿ ಕೊಡಲೇಬೇಕು ಎಂಬ ಸಿದ್ಧಾಂತವನ್ನು ಹರಡುತ್ತಾ ಪ್ರಗತಿ ವಿರೋಧಿಗಳಾಗಿ ಕೆಲಸ ಮಾಡುತ್ತಿವೆ. ಯಾವುದೇ ಅಭಿವೃದ್ಧಿ ಯೋಜನೆಯನ್ನು ಒಂದಲ್ಲ ಒಂದು ನೆಪವೊಡ್ಡಿ ವಿರೋಧಿಸುವ ಕೆಲಸವನ್ನು ಮಾಡುತ್ತವೆ. ಮಾಡುತ್ತವೆ. ಇತ್ತೀಚೆಗೆ ಪರಮಾಣು

(8ನೇ ಪುಟ ನೋಡಿ)

ಕರ್ನಾಟಕದ ಕೆಲವು ಸ್ವಯಂ ಸೇವಾ ಸಂಸ್ಥೆಗಳು

ಗ್ರಾಮೀಣಾಭಿವೃದ್ಧಿ, ವಿಜ್ಞಾನ, ಮತ್ತು ತಂತ್ರಜ್ಞಾನದ ಪ್ರಚಾರ, ಪರಿಸರ ಪ್ರಜ್ಞೆ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಕೆಲವು ಸ್ವಯಂಸೇವಾ ಸಂಸ್ಥೆಗಳ ಹೆಸರುಗಳು :

ಧಾರವಾಡ ಜಿಲ್ಲೆ

1. ಟ್ರಾನ್ಸ್ ನ್ಯಾಷನಲ್ ಸೆಂಟರ್, (ಬಹು ರಾಷ್ಟ್ರೀಯ ಕೇಂದ್ರ) ಧಾರವಾಡ.
2. ಇಂಡಿಯಾ ಡೆವಲಪ್‌ಮೆಂಟ್ ಸರ್ವಿಸ್, (ಭಾರತ ಅಭಿವೃದ್ಧಿ ಸೇವೆ) ಮಡ್ಲೇರಿ.
3. ಸರ್ವೋದಯ ಮಿತ್ರ ಮಂಡಳಿ, ಹುಬ್ಬಳ್ಳಿ.
4. ಕೃಷಿ ಸೇವಾ ಸಂಘ, ಹುಬ್ಬಳ್ಳಿ.
5. ಕಮಿಟ್‌ಮೆಂಟ್ಸ್, ತುಮರಿ ಕೊಪ್, ಧಾರವಾಡ ಜಿಲ್ಲೆ.
6. ಬೇಸಲ್ ಮಿಷನ್ ಅಗ್ರಿಕಲ್ಚರ್ ಟ್ರೈನಿಂಗ್ ಸೆಂಟರ್, (ಕೃಷಿ ತರಬೇತಿ ಕೇಂದ್ರ) ಕಲ್‌ಘಟಗಿ.

ಬೆಳಗಾಂ ಜಿಲ್ಲೆ

7. ಬೆಳಗಾಂ ಇಟೆಂಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ) ನಾಗನೂರ್.
8. ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಮುರಗೋಡ್.
9. ಬರ್ಡ್ಸ್, ಬೆಳಗಾಂ.

ಮೈಸೂರು ಜಿಲ್ಲೆ

10. ವಿಶ್ವಶಾಂತಿ ಸಂಸ್ಥೆ, ರತ್ನಪುರಿ, ಹುಣಸೂರು ತಾಲ್ಲೂಕು.
11. ಡೆವಲಪ್‌ಮೆಂಟ್ ಥ್ರೂ ಎಜುಕೇಷನ್ ಎಚ್. ಡಿ. ಕೋಟೆ ರಸ್ತೆ, ಹುಣಸೂರು.
12. ಎನೆಡ್ಸ (ಇ. ಎನ್. ಇ. ಡಿ. ಎಸ್. ಎ.) ವಿದ್ಯಾರಣ್ಯಪುರಂ, ಮೈಸೂರು.
13. ಎನ್‌ವೈರ್‌ನಮೆಂಟಲ್ ಪ್ರೊಟೆಕ್ಷನ್ ಗ್ರೂಪ್(ಪರಿಸರ ಸಂರಕ್ಷಣಾ ಗುಂಪು) ಕುವೆಂಪುನಗರ, ಮೈಸೂರು.
14. ಸೇವಾಸಾಗರ್ ಟ್ರಸ್ಟ್, ಶಿವಮೊಗ್ಗ.
15. ಪರಿಸರ ಸಂರಕ್ಷಣ ವೇದಿಕೆ, ದುರ್ಗಿಗುಡಿ.
16. ಮಣ್ಣು ರಕ್ಷಣಾ ಕೂಟ
17. ಶುಭದ ಸುರಾಲ್‌ಪುಡಿ, ಸ್ಕೂಲ್ ಫಾರ್ ಸೋಷಿಯಲ್ ವರ್ಕ್, ರೋಷಿನಿ ನಿಲಯ.
18. ಫಾ. ಮುಲ್ಲರ್ಸ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್, ಕಂಕನಾಡಿ.
19. ನಾಗರೀಕ ಸೇವಾ ಸಮಿತಿ, ಗುರುವಾಯನ ಕೆರೆ.
20. ಬೆಳ್ತಂಗಡಿ ಪ್ಯಾಕೇಜ್ ಪ್ರೋಗ್ರಾಮ್, ಬೆಳ್ತಂಗಡಿ.
21. ಕೆನರಾ ಆರ್ಗನೈಸೇಷನ್ ಫಾರ್ ರೂರಲ್ ಡೆವಲಪ್‌ಮೆಂಟ್, ಬೆಳ್ತಂಗಡಿ.
22. ಪಿ. ಆರ್. ಕಾಮತ್ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಬೆಂಗ್ರ.
23. ಪ್ರಭೂತಿ ಗ್ರಾಮ ಅಭಿವೃದ್ಧಿ ಮಂಡಳಿ, ಮಂಡಳಿ.
24. ರೂರಲ್ ವೆಲ್‌ಫೇರ್ ಟ್ರಸ್ಟ್, ದಾಂಡೇಲಿ.
25. ಸ್ನೇಹಕುಂಜ, ಕಾಸರಗೋಡು
26. ಕೂರ್ಗ್ ಆರ್ಗನೈಸೇಷನ್ ಫಾರ್ ರೂರಲ್ ಡೆವಲಪ್‌ಮೆಂಟ್, ಕುಶಾಲನಗರ.
27. ಪರಿಸರ ಜಾಗೃತಿ ಸಂಘ, ಕುಮಟಾ.
28. ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ವಿಜಯಪುರ ಬಡಾವಣೆ
29. ಕ್ರಿಶ್ಚಿಯನ್ ಶರಣ್ ಸೋಷಿಯಲ್ ವೆಲ್‌ಫೇರ್ ಸೊಸೈಟಿ, ಬೀರೂರು.
30. ಲೀಡಿಂಗ್ ಆರ್ಗನೈಸೇಷನ್ ಫಾರ್ ರೂರಲ್ ಡೆವಲಪ್‌ಮೆಂಟ್, ಬಳ್ಳಾರಿ.
31. ಇಂಗ್ರಿಡ್ (INGRID), ರಾಯಚೂರು ಜಿಲ್ಲೆ.
32. ಜನೋದಯ, ಮಾನ್ವಿ, ರಾಯಚೂರು ಜಿಲ್ಲೆ.
33. ಕರ್ನಾಟಕ ಗ್ರಾಮ ಸೇವಾ ಸಂಘ, ತಿಮ್ಮಾಪುರಪೇಟೆ.
34. ಗ್ರಾಮಾಭಿವೃದ್ಧಿ ಸಂಘ, ಸೀಗನಹಳ್ಳಿ.
35. ಜಿ. ಆರ್. ಡಿ. ಇ. ಎಸ್, ಗುಡಿಬಂಡೆ.
36. ಮುಳಬಾಗಲು ಇಂಟೆಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಮುಳಬಾಗಲು.
37. ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಅಂಡ್ ಟ್ರೇನಿಂಗ್ ಸೊಸೈಟಿ, ಬಾಗೇಪಲ್ಲಿ.

38. ಸುನಂದಾ ಪ್ರಾಜೆಕ್ಟ್,
ಕೆ. ಜಿ. ಎಫ್.
39. ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿಯೂ ಇಂತಹ ಒಂದು ಸಂಸ್ಥೆ ಇದ್ದೇ ಇದೆ.
40. ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಷನ್, ಚಿತ್ರದುರ್ಗ.
41. ಸರ್ವೋದಯ ಸೇವಾ ಮಂಡಳಿ, ಬೀದರ್.
42. ಗ್ರೂಪ್‌ಫಾರ್ ಅರ್ಬನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಕೆರೆಗಾಗಲಹಳ್ಳಿ.

ಮಂಡ್ಯ ಜಿಲ್ಲೆ

43. ವನ್‌ಸನ್ ಇನ್‌ಸ್ಟಿಟ್ಯೂಟ್ ಫಾರ್ ರೂರಲ್ ಡೆವಲಪ್‌ಮೆಂಟ್, ಮಂಡ್ಯ.
44. ಜನಪದ ಸೇವಾ ಟ್ರಸ್ಟ್, ಮಂಡ್ಯ.
45. A.C.R E. SAT, ಮಳವಳ್ಳಿ.

ಬಿಜಾಪುರ ಜಿಲ್ಲೆ

46. ಯುವಕ ವಿಕಾಸ ಕೇಂದ್ರ, ಬಿಜಾಪುರ.
47. ಜಮಖಂಡಿ ತಾಲ್ಲೂಕು ಸಮಗ್ರ ಗ್ರಾಮ ಸೇವಾ ಸಮಿತಿ, ಜಮಖಂಡಿ

ತುಮಕೂರು ಜಿಲ್ಲೆ

48. ವಿಲೇಜ್ ಎಜುಕೇಷನ್ ಅಂಡ್ ಡೆವಲಪ್‌ಮೆಂಟ್ ಸೊಸೈಟಿ, ತುಮಕೂರು.
49. ಅಮರಾಲಯ, ಸಿರಾ ತಾಲ್ಲೂಕು.
50. ವಿಮೆನ್ಸ್ ಲಿಬರೇಷನ್ ಅಂಡ್ ಹ್ಯಾಬಿಲಿಟೇಷನ್ ಸೊಸೈಟಿ, ಕೊಡಿಗೇನಹಳ್ಳಿ, ತುಮಕೂರು ಜಿಲ್ಲೆ.
51. ಗ್ರಾಮ ಕಲ್ಯಾಣ ರೂರಲ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಸಿರಾ.
52. ರೂರಲ್ ಸರ್ವಿಸ್ ಟ್ರೈನಿಂಗ್ ಸೆಂಟರ್, ಸಿರಾ ಗೇಟ್.
53. ಮಿಲಿಯನ್ಸ್ ಆಫ್ ಟ್ರೀಸ್ ಕ್ಲಬ್, ಸಿರಾ ಗೇಟ್.

ಬೆಂಗಳೂರು

1. ಆಕ್ಷನ್ ಫಾರ್ ವಾಟರ್ ಡೆವಲಪ್‌ಮೆಂಟ್.
2 ಏಷಿಯನ್ ಇನ್‌ಸ್ಟಿಟ್ಯೂಟ್ ಫಾರ್ ರೂರಲ್ ಡೆವಲಪ್‌ಮೆಂಟ್.
3. ಬೆಂಗಳೂರು ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, (ಬರ್ಡ್ಸ್).
4. ಸೆಂಟರ್ ಫಾರ್ ಹ್ಯೂಮನ್ ಕನ್‌ಸರ್ನ್.
5. ಸೆಂಟರ್ ಫಾರ್ ರಿಸರ್ಚ್ ಎಜುಕೇಷನ್ ಸರ್ವಿಸ್ ಅಂಡ್ ಟ್ರೈನಿಂಗ್.
6. ಡೇಟ್ ಸೆಂಟರ್ ಫಾರ್ ನ್ಯಾಚುರಲ್ ರಿಸೋರ್ಸಸ್.
7. ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ.
8. ಫ್ರೆಂಡ್ಸ್ ಆಫ್ ದಿ ಟ್ರೀಸ್
9. ಇಂಟೆಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ.
10. ಇಂಟರ್ ನ್ಯಾಷನಲ್ ಸರ್ವೋದಯ ಸೆಂಟರ್.
11. ವಾಲಂಟರಿ ಹೆಲ್ತ್ ಅಸೋಸಿಯೇಷನ್ ಆಫ್ ಇಂಡಿಯ.
12. ಮೆಡಿಕೋ ಫ್ರೆಂಡ್ಸ್ ಸರ್ಕಲ್
13, ಮೈರಾಡ
14. ನ್ಯಾಷನಲ್ ಸೊಸೈಟಿ ಫಾರ್ ಅರ್ಬನ್ ಡೆವಲಪ್‌ಮೆಂಟ್.
15. ಆಕ್ಸ್‌ಫ್ಯಾಮ್
16. ರೂರಲ್ ಎಜುಕೇಷನ್ ಸೊಸೈಟಿ
17. ಸ್ಕಿಲ್ಸ್ ಫಾರ್ ಪ್ರೊಗ್ರೆಸ್
20. ವಿಜಿಲ್ ಇಂಡಿಯಾ ಮೂವ್‌ಮೆಂಟ್.
21. ವಿಮೋಚನಾ
22. ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಅಂಡ್ ಆಕ್ಷನ್.

ಸೂಚನೆ : ಇದರಲ್ಲಿ ಅನೇಕ ಹೆಸರುಗಳು ಬಿಟ್ಟು ಹೋಗಿರಬಹುದು. ತಮಗೆ ಗೊತ್ತಿರುವ ಹೆಸರುಗಳನ್ನು ಓದುಗರು ತಿಳಿಸಿದರೆ 'ಐಕ್ಯರಂಗ'ದ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

(6ನೇ ಪುಟದಿಂದ ಮುಂದುವರಿದುದು)

ಶಕ್ತಿಯಿಂದುಂಟಾಗುವ ಪರಿಸರ ಮಾಲಿನ್ಯವನ್ನು ಅತಿ ವಿಜೃಂಭಿಸಿ ಭಯಾನಕವಾಗವಂತೆ ಚಿತ್ರಿಸಿ ಜನರ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡುವಂತಹ ಭಾರಿ ಪ್ರಚಾರವನ್ನು ವ್ಯವಸ್ಥಿತವಾಗಿ ನಡೆಸುತ್ತಿವೆ.

ಈ ಸ್ವಯಂ ಸೇವಾ ಸಂಸ್ಥೆಗಳ ಚಟುವಟಿಕೆಗಳು ಕರ್ನಾಟಕದಲ್ಲಿ ಮತ್ತಷ್ಟು ವ್ಯಾಪಕವಾಗಿ ವಿಸ್ತರಣೆಯಾಗಲು ಯೋಜನೆಗಳು ಸಿದ್ಧವಾಗುತ್ತಿವೆ. ಮುಂದಿನ ಐದು ವರ್ಷಗಳಲ್ಲಿ ಪ್ರತಿ ತಾಲ್ಲೋಕಿಗೆ ಕನಿಷ್ಠ ಒಂದಾದರೂ ಸ್ವಯಂ ಸೇವಾ ಸಂಸ್ಥೆಯನ್ನು ರೂಪಿಸುವ ಯೋಜನೆ ಇದೆ. ಸರ್ಕಾರ ಇಂತಹ ಸಂಸ್ಥೆಗಳ ಕಾರ್ಯವಿಧಾನಗಳ ನಿಯಂತ್ರಣಕ್ಕೆ ತರಲು ಯೋಜಿಸುತ್ತಿರುವ Council of Rural Voluntary Agencies Act of 1986 ಎಂಬ ಕರಡು ವಿಧೇಯಕವನ್ನು ತುಂಬಾ ತೀವ್ರವಾಗಿ ವಿರೋಧಿಸಲು ಸಜ್ಜಾಗುತ್ತಿವೆ. ಅವರ ಚಟುವಟಿಕೆಗಳನ್ನು ಸ್ವಲ್ಪಮಟ್ಟಿಗಾದರೂ ಸರ್ಕಾರ ತನ್ನ ಗಮನಕ್ಕೆ ತೆಗೆದುಕೊಳ್ಳುವುದನ್ನೂ ಇವು ಸಹಿಸುವುದಿಲ್ಲ ಎಂಬುದಕ್ಕೆ ಇದೊಂದು ನಿದರ್ಶನ.

— ಕಾಂ॥ಸಿರಾಜ್

ವಿದೇಶಿ ಹಣದಿಂದ ಕೊಬ್ಬಿರುವ

ಸ್ವಯಂ ಸೇವೆಯ ಹದ್ದುಗಳು

["ಯಾರಿಂದ ಅಪಾಯವಿದೆ ಎಂಬುದರ ಬಗ್ಗೆ ಅವರದು ಬಹಳ ವಿಶಿಷ್ಟವಾದ ಆಯ್ಕೆ. ಒಬ್ಬ ಬಿಳಿಯ ಮನುಷ್ಯ ದಯಾಳು ಮಾನವೀಯ ಮುಖದೊಂದಿಗೆ ಡಾಲರುಗಳನ್ನು ಹಿಡಿದು ಕೊಂಡಿದ್ದರೆ ಅವರು ಬಗ್ಗಿ ಡೊಗ್ಗು ಸಲಾಮು ಹೊಡೆದು ಅಂಗಲಾಚಿ ಅವನ ಏಜಂಟ ನಾಗಲು ತಯಾರು, ಆದರೆ ಸರ್ಕಾರ ಅದೇ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಸ್ವಯಂಸೇವಾ ಸಂಸ್ಥೆಗಳಿಗೆ, ಧನ ಸಹಾಯ ಕೊಡಲು ತಯಾರಾದರೆ, ಅವರಿಗೆ ಅದು ಈ ಸಂಸ್ಥೆಗಳನ್ನು ಸರ್ಕಾರ ಕಬಳಿಸಲು ಹೂಡಿರುವ ತಂತ್ರ...ಸ್ವಯಂಸೇವಾ ಸಂಸ್ಥೆಗಳ ಪ್ರಜಾಸತ್ತಾತ್ಮಕ ಮತ್ತು ಸ್ವತಂತ್ರ ಪಾತ್ರಕ್ಕೆ ಧಕ್ಕೆ ಕೊಡುವ ಕ್ರಮ ಇತ್ಯಾದಿ ಇತ್ಯಾದಿ ಇಂತಹ ಅಪಾಯದ (ಸರ್ಕಾರ ದಿಂದ) ಬಗ್ಗೆ ಮಾತನಾಡುವ ಈ ಸ್ವಯಂಸೇವಾ ಸಂಸ್ಥೆಗಳು ತಮ್ಮ ಸ್ವಾತಂತ್ರ್ಯವನ್ನು ವಿದೇಶಿ ನಿಧಿಯ ಮೇಲೆ ಅವಲಂಬಿಸಿದಾಗಿನಿಂದ ಕಳೆದುಕೊಂಡು ಬಹಳ ಕಾಲ ಆಗಿಹೋಯ್ತು ಎಂದು ಮರೆತು ಬಿಡುತ್ತನೆ—..."]

(ಬಂಕರ್ ರಾಯ್–'ಮೇನ್ ಸ್ಟ್ರೀಂ' ಪತ್ರಿಕೆಯಲ್ಲಿ 'ಸ್ವಯಂಸೇವಾ ಕ್ಷೇತ್ರ ದಲ್ಲಿ ದಲ್ಲಾಳಿಗಳು'ಎಂಬ ಲೇಖನದಲ್ಲಿ.)

ಸ್ವಯಂಸೇವಾ ಸಂಸ್ಥೆಗಳಲ್ಲೊಂದರಲ್ಲಿ ಕೆಲಸ ಮಾಡುತ್ತಿರುವ ಪ್ರಮುಖನೊಬ್ಬನ ಈ ರೀತಿಯ ಹೇಳಿಕೆ ಸ್ವಯಂಸೇವಾ ಸಂಸ್ಥೆಗಳ ಕಾರ್ಯಾಚರಣೆಯ ಬಗ್ಗೆ ಸಿ. ಪಿ. ಐ. (ಎಂ) 5-6 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಪ್ರಚಾರದ ಪ್ರಭಾವ ತೋರಿಸುತ್ತದೆ.

ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಜೂನ್ 81ರಲ್ಲಿ ಅಂಗೀಕರಿಸಿದ ಗೊತ್ತುವಳಿಯಲ್ಲಿ ಮೊದಲ ಬಾರಿಗೆ, ವಿದೇಶಿ ನಿಧಿ ಪಡೆದು ವಿಚ್ಛಿದ್ರಕಾರಿ ಕೆಲಸಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಎಡ ಕ್ರಿಶ್ಚಿಯನ್ ಗುಂಪುಗಳ ಬಗ್ಗೆ ದೇಶದ ಜನತೆಯನ್ನು ಎಚ್ಚರಿಸಿತು. ಅಂದಿನಿಂದ ಪಕ್ಷ ಈ ಬಗ್ಗೆ ಸತತವಾಗಿ ಪ್ರಚಾರ ನಡೆ ಸುತ್ತಾ ಬಂದಿದೆ. ಇವುಗಳ ಮೇಲೆ ಕ್ರಮ ಕೈಗೊಳ್ಳಲು ಸರಕಾರವನ್ನು ಒತ್ತಾಯಿಸಿದೆ

ಇದರ ಫಲವಾಗಿ ಸರಕಾರ ವಿದೇಶಿ ಚಂದಾ (ನಿರ್ಬಂಧಕ) ಕಾಯಿದೆ (1976)ಗೆ 1985ರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿತು. ಕೆಲವು ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಂಡಿತು. ಇದರ ವಿರುದ್ಧ ಕೆಲವು ಸ್ವಯಂ ಸೇವಾ ಸಂಸ್ಥೆಗಳು, ಬೂರ್ಜ್ವಾ ಪತ್ರಿಕೆಗಳು ಭಾರಿ ಬೊಬ್ಬೆ ಎಬ್ಬಿಸಿದವು. ಸರಕಾರದ ಅರೆಮನಸ್ಸಿನ ಕ್ರಮ ಅದಕ್ಕಿಂತಲೂ ಹೆಚ್ಚಾಗಿ, ವಿದೇಶಿ ನಿಧಿ ಸ್ವೀಕರಿಸುವ ಸಂಸ್ಥೆಗಳ ವಿರುದ್ಧ ಪಕ್ಷದ ಪ್ರಚಾರದಿಂದ ಮೂಡಿರುವ ಜನಾಭಿಪ್ರಾಯದಿಂದಾಗಿ ಇಂದು ಈ ಸಂಸ್ಥೆ ಗಳು ಮತ್ತು ಇದರಲ್ಲಿ ಕೆಲಸ ಮಾಡುತ್ತಿ ರುವ ಜನ ಎರಡು ಗುಂಪುಗಳಾಗಿ ಒಡೆ ದಿದ್ದಾರೆ. ಇದರಲ್ಲಿ ಬಂಕರ್ ರಾಯ್ ರಂತಹವರ ಗುಂಪು ವಿದೇಶಿ ನಿಧಿ ಸ್ವೀಕರಿ ಸುವುದನ್ನು ವಿರೋಧಿಸಿ, ಇದರ ಬದಲು ಸರಕಾರದ ಧನಸಹಾಯ ತೆಗೆದುಕೊಳ್ಳ ಬೇಕೆಂದು ವಾದಿಸುತ್ತಿದೆ. ಇನ್ನೊಂದು ಗುಂಪು ವಿದೇಶಿ ನಿಧಿಯ ಮೇಲೆ ಯಾವುದೇ ರೀತಿಯ ನಿರ್ಬಂಧ, ಸಾರ್ವಜನಿಕ ನಿಯಂತ್ರಣವನ್ನು ಬಲವಾಗಿ ವಿರೋಧಿ ಸುವ ಪಟ್ಟಭದ್ರ ಹಿತಾಸಕ್ತಿಗಳೆಂದು ನಿಚ್ಚಳವಾಗಿ ತೋರಿದೆ.

ಇಷ್ಟೆಲ್ಲಾ ಬಿಸಿ ಎಬ್ಬಿಸಿರುವ ವಿವಿಧ ರೀತಿಯ ಸ್ವಯಂಸೇವಾ ಸಂಸ್ಥೆಗಳು ಹೇಗೆ ಹುಟ್ಟಿಕೊಂಡವು? ಇವುಗಳ ಉದ್ದೇಶ ವೇನು? ಸಂಘಟನಾ ಸ್ವರೂಪವೇನು? ಇವು ದೊಡ್ಡ ಪ್ರಮಾಣದ ವಿದೇಶಿ ಅಥವಾ ಸರ್ಕಾರದ ಧನ ಸಹಾಯಕ್ಕೆ ಏತಕ್ಕೆ ಚಡಪಡಿಸುತ್ತವೆ? ಇಷ್ಟು ಪ್ರಮಾಣದ ಧನ ಸಹಾಯ ನೀಡುವ ವಿದೇಶೀ ಸಂಘಟನೆಗಳ ಉದ್ದೇಶವಾದರೂ ಏನು?

1976-77ರಲ್ಲಿ ಸುಮಾರು 5000 ದಷ್ಟಿದ್ದ ಈ ಗುಂಪುಗಳ ಸಂಖ್ಯೆ 1984ರ ಹೊತ್ತಿಗೆ ಸರ್ಕಾರಿ ಅಂಕಿ-ಅಂಶಗಳ ಪ್ರಕಾರ 10,458 ಆಗಿವೆ. ಅದೇ ರೀತಿ ಈ ಗುಂಪುಗಳಿಗೆ, ಹರಿದು ಬರುತ್ತಿದ್ದ ವಿದೇಶೀ ನಿಧಿ 170 ಕೋಟಿ ರೂ. ಗಳಿಂದ 254 ಕೋಟಿ ರೂ. ಗಳಿಗೇರಿದೆ. ಇದರಲ್ಲಿ ಸಿಂಹಪಾಲು ಪಶ್ಚಿಮ ಜರ್ಮನಿಯಿಂದ ಬಂದರೆ, ಎರಡನೇ ಸ್ಥಾನ ಅಮೆರಿಕದ್ದು. ಹೆಚ್ಚು ಕಡಿಮೆ ಎಲ್ಲಾ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ದೇಶಗಳಿಂದ ಹಣ ಈ ಸ್ವಯಂಸೇವಾ ಸಂಸ್ಥೆಗಳಿಗೆ ಬರುತ್ತಿದೆ. ಇದು ಸಾಲದಕ್ಕೆ 7ನೇ ಯೋಜನೆಯಲ್ಲಿ ಹಳ್ಳಿಗಳಲ್ಲಿ ಯೋಜನೆಯ ಕೆಲಸವನ್ನು ಜಾರಿಗೆ ತರಲು ಸ್ವಯಂಸೇವಾ ಸಂಸ್ಥೆಗಳಿಗೆ

ಕಾರ್ಯಕ್ರಮಗಳ ಆಧಾರದ ಮೇಲೆ, ಸಹಾಯ ಮಾಡಿ ತೊಡಗಿಸಿಕೊಳ್ಳಬೇಕೆಂದು ನಿರ್ಧರಿಸಲಾಗಿದೆ. ಸುಮಾರು 250 ಕೋಟಿ ರೂ. ಗಳಷ್ಟು ಯೋಜನಾ ನಿಧಿಯನ್ನು ಇಂತಹ ಕೆಲಸಗಳಿಗೆ ಮೀಸಲಾಗಿಡಲಾಗಿದೆ. ಇದಲ್ಲದೆ PADI (People's Action for Development India) ದಂತಹ ಸರ್ಕಾರಿ ಸಂಸ್ಥೆಗಳು ವಿದೇಶಿ ಧನ ಸಹಾಯವನ್ನು ಸ್ವಯಂಸೇವಾ ಸಂಸ್ಥೆಗಳಿಗೆ ಹಂಚುವ ಕೆಲಸ ಮಾಡುತ್ತಿವೆ. ಹೀಗೆ ಸರ್ಕಾರ ಸಹ ಯೋಜನೆಗೆ ಮೀಸಲಾದ ಸಾರ್ವಜನಿಕ ಹಣವನ್ನು ಖಾಸಗಿ ಸಂಸ್ಥೆಗಳಿಗೆ ಕೊಡುವ ಕೆಲಸದಲ್ಲಿ ಶಾಮೀಲಾಗಿದೆ. ಇದು ಈ ಸ್ವಯಂಸೇವಾ ಸಂಸ್ಥೆಗಳ ಪ್ರಶ್ನಾರ್ಹ ಚಟುವಟಿಕೆಗಳಿಗೆ ಕುಮ್ಮಕ್ಕು ಕೊಟ್ಟಂತೆ.

ಸಂಘಟನೆಗಳ ವಿಧಗಳು ಮತ್ತು ಸ್ವರೂಪ

ಈ ಸ್ವಯಂಸೇವಾ ಸಂಸ್ಥೆಗಳಲ್ಲಿ ಹಲವು ವಿಧ. ಮೊದಲನೆಯದು 'ಸಮಾಜ ಸೇವಾ' ನಿರತ ಸಂಘಟನೆಗಳು ಇವುಗಳಲ್ಲಿ ಕೆಲವು ಧಾರ್ಮಿಕ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿವೆ. ಕೆಲವು ಹೊಂದಿಲ್ಲ.

ಎರಡನೆಯ ವಿಧ 60-70 ರ ದಶಕದಲ್ಲಿ ಹುಟ್ಟಿಕೊಂಡು ಅತ್ಯಂತ ಕೆಳ ಹಂತಗಳಲ್ಲಿ ಅಂದರೆ ಹಳ್ಳಿ, ಬ್ಲಾಕ್ ಇತ್ಯಾದಿಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿಚ್ಛಿಸುವ ಸಂಘಟನೆಗಳದ್ದು.

ಮೂರನೆಯ ವಿಧ 1975 ರಿಂದೀಚೆಗೆ ಹುಟ್ಟಿಕೊಂಡ ಸಂಘಟನೆಗಳು ಇವುಗಳನ್ನೇ Action groups ಅಥವಾ ಸ್ವಯಂಸೇವಾ ಸಂಸ್ಥೆಗಳು ಎಂದು ಕರೆಯಲಾಗುತ್ತದೆ. ಇವುಗಳು ಶಿಕ್ಷಣ, ಬೆಳವಣಿಗೆ, ತರಬೇತಿ ಮುಂತಾದವು ಮಾತ್ರವಲ್ಲದೆ, ಜನರ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನೆತ್ತಿ ಸಂಘಟಿಸುವ ಕೆಲಸ ಮಾಡುತ್ತಿವೆ. ಇಂತಹ ಹಲವು ಸಂಘಟನೆಗಳು ಸಂಶೋಧನೆ ಮತ್ತು ದಾಖಲೆಗಳನ್ನು ಸಂಗ್ರಹಿಸುವ ಕೆಲಸದಲ್ಲಿ ಸಹ ತೊಡಗಿವೆ. ಈ ಮೂರನೆಯ ವಿಧದ ಸಂಘಟನೆಗಳಲ್ಲಿ ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಚರ್ಚ್ ಆಧಾರಿತ ಗುಂಪುಗಳು ದೊಡ್ಡ ಸಂಖ್ಯೆಯಲ್ಲಿ ಇವೆ.

ಈ ಗುಂಪುಗಳಿಗೆ ಹರಿದು ಬರುತ್ತಿದ್ದ ವಿದೇಶೀ ನಿಧಿ 170 ಕೋಟಿ ರೂ. ಗಳಿಂದ 254 ಕೋಟಿ ರೂ. ಗಳಿಗೇರಿದೆ.

ಈ ಗುಂಪುಗಳು ಹಳ್ಳಿಯ ಬಡವರು, ಆದಿವಾಸಿಗಳು, ಮಹಿಳೆಯರು ಮತ್ತು ಪಟ್ಟಣದ ಅಸಂಘಟಿತ ಕಾರ್ಮಿಕರನ್ನು ಸಂಪರ್ಕಿಸಿ ಅವರ ಜತೆ ಕೆಲಸ ಮಾಡಲು ಪ್ರಯತ್ನಿಸುತ್ತವೆ.

ಹೆಚ್ಚಿನ ಗುಂಪುಗಳು ಹೆಚ್ಚಾಗಿ ಅಭಿವೃದ್ಧಿ ಕಾರ್ಯಕ್ರಮದೊಂದಿಗೆ ತಮ್ಮ ಚಟುವಟಿಕೆ ಆರಂಭಿಸುತ್ತವೆ. ಕ್ರಮೇಣ ಜನರ ವಿಶ್ವಾಸ ಗಳಿಸಿದಂತೆ ವಿವಿಧ ಜನ ವಿಭಾಗಗಳ ಸಂಘಟನೆ ರಚಿಸುತ್ತವೆ. ರೈತ ಕೂಲಿಕಾರರ ಸಂಘಗಳು, 'ಕಷ್ಟಕಾರಿ' ಸಂಘಟನೆಗಳು, ಮೀನುಗಾರರ ಸಂಘಗಳ ಇತ್ಯಾದಿಗಳನ್ನು ಸಂಘಟಿಸಿ ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಕೆಲವು ಹೋರಾಟ ಸಂಘಟಿಸಲಾಗುತ್ತದೆ. ಇಂತಹ ಸ್ಥಳೀಯ ಹೋರಾಟದ ವರದಿಗಳು ಬೂರ್ಜ್ವಾ ಪತ್ರಿಕೆಗಳಲ್ಲಿ, ದೊಡ್ಡ ದೊಡ್ಡ ಅಕ್ಷರಗಳಲ್ಲಿ ಕಾಣಿಸುತ್ತವೆ. ಜೊತೆಗೆ ತಾವು ಸಂಬಂಧವಿಟ್ಟುಕೊಂಡಿರುವ ಭಾರತದ ಹಾಗೂ ಧನ ನೀಡುವ ವಿದೇಶಿ ಸಂಘಟನೆಗಳಿಗೆ ತಲುಪುವಂತೆ ವಿಶೇಷ ಎಚ್ಚರಿಕೆ ವಹಿಸಲಾಗುತ್ತದೆ.

ಕಾರ್ಯಕರ್ತರ ಮೂಲಗಳು

ಈ ಗುಂಪುಗಳು ತಮ್ಮ ಕಾರ್ಯಕರ್ತರನ್ನು ಎಚ್ಚರಿಕೆಯಿಂದ ಆರಿಸಿಕೊಳ್ಳುತ್ತವೆ. ಕಾರ್ಯಕರ್ತರನ್ನು ಮುಖ್ಯವಾಗಿ ಕೆಳಗೆ ವಿವರಿಸಿರುವ ಮೂರು ಮುಖ್ಯ 'ರಾಜಕೀಯ ಮೂಲ'ಗಳಿಂದ ಆರಿಸಿಕೊಳ್ಳುವುದು ಕಂಡು ಬಂದಿದೆ.

ಮೊದಲನೆಯದಾಗಿ ಮೊದಲಿನಿಂದಲೂ ಇಂತಹ ಸಮಾಜ ಸೇವೆ, ಕಾರ್ಯಗಳನ್ನು ಮಾಡಿಕೊಂಡಿದ್ದು, ಇಂತಹ ಚಟುವಟಿಕೆಗಳಲ್ಲಿ ನಂಬಿಕೆ ಇರುವ ಗಾಂಧಿವಾದಿ ಸರ್ವೋದಯ ಕಾರ್ಯಕರ್ತರು ಮತ್ತು ಸೋಶಲಿಸ್ಟರು 1975 ರಿಂದೀಚೆಗಿನ ಸ್ವಯಂಸೇವಾ 'ಚಳುವಳಿ'ಯಿಂದ ಸೊರಗಿ ಹೋಗುತ್ತಿದ್ದ ಕಂಠಿತವಾಗುತ್ತಿದ್ದ ಗಾಂಧಿವಾದಿ ಸರ್ವೋದಯ ಸೋಶಲಿಸ್ಟ್ ಸಂಘಟನೆಗಳಿಗೆ ಹೊಸ ಜೀವ ಬಂದಿದೆ. ಜನತಾ ಸರ್ಕಾರ ಹಾಗೂ ಪಕ್ಷದ ಧೋರಣೆ, ದುರವಸ್ಥೆಯಿಂದ ಬೇಸತ್ತಿರುವ ಬಿಹಾರ ಗುಜರಾತ್‌ಗಳಲ್ಲಿ ಹೋರಾಟ ಮಾಡಿದ ಛಾತ್ರ ಯುವ ಸಂಘರ್ಷ ವಾಹಿನಿಯ ಯುವ ಕಾರ್ಯಕರ್ತರಿಂದಾಗಿ ಈ ಸಂಘಟನೆಗಳು ಬಲಗೊಂಡಿವೆ.

ಎರಡನೆಯದಾಗಿ ನಕ್ಸಲೀಯರು ಮತ್ತು ಮಾಜಿ ನಕ್ಸಲೀಯರು ಇಂತಹ ಗುಂಪುಗಳಿಗೆ ದೊಡ್ಡ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ. 70ರ ದಶಕದ ಆರಂಭದಲ್ಲಿ ನಕ್ಸಲೀಯ ಚಳುವಳಿ ಬಲಹೀನವಾದದ್ದರಿಂದ ಆದ ಸೈದ್ಧಾಂತಿಕ ಗೊಂದಲದಲ್ಲಿದ್ದ ಈ ಪುಟ್ಟ ಬಂಡವಾಶಾಹಿ ನಕ್ಸಲೀಯ ಯುವಕರಿಗೆ ಈ ಗುಂಪುಗಳು, ತಮ್ಮ ಹಳೆಯ ಸಾಮೂಹಿಕ ಚಳುವಳಿ ಮುನ್ನಡೆ

ಸುತ್ತಿದ್ದೇವೆಂಬ ಭ್ರಮೆ ನೀಡುವಲ್ಲಿ ಸಹಾಯವಾಗಿವೆ. ಅಲ್ಲದೆ ತಮ್ಮ ಎಡ-ವಿರೋಧಿ, ಅರಾಜಕತಾವಾದಿ ಪುಟ್ಟ ಬೂರ್ಜ್ವಾ ಜೀವನ ಕ್ರಮ ಮುಂದುವರಿಸಲು ಅವಕಾಶ ನೀಡಿವೆ.

ಮೂರನೇಯದಾಗಿ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳಲ್ಲಿ ಪ್ರಚಲಿತವಿರುವ ಹಲವು ರಾಜಕೀಯ ದಿಕ್ಕುಗಳಿಂದ ಪ್ರಭಾವಿತರಾಗಿರುವ 'ಹೊಸ ಎಡಪಂಥ' ಮತ್ತು 'ಉಗ್ರವಾದಿ ಎಡಪಂಥ'ಕ್ಕೆ ಸೇರಿದ ಯುವಕರು. ಈ ಇಂತಹ ಕಾರ್ಯಕರ್ತರು ಮುಖ್ಯವಾಗಿ ಬುದ್ಧಿಜೀವಿಗಳಾಗಿದ್ದರಿಂದ ಇವರನ್ನು ಸಂಶೋಧನೆ ಮತ್ತು ದಾಖಲೆ ಸಂಗ್ರಹಣೆಗಳ ಕೆಲಸದಲ್ಲಿ ತೊಡಗಿಸಲಾಗುತ್ತದೆ.

ಸ್ವಯಂಸೇವಾ ಗುಂಪುಗಳ ಜಾಲ

ಈ ಗುಂಪುಗಳು ಜನರ ಮಧ್ಯೆ ಕೆಲಸ ಮಾಡುವ ಕಾರ್ಯಕರ್ತರೇ ಕಟ್ಟಿ ಬೆಳೆಸಿದ ಗುಂಪುಗಳಲ್ಲ, ಎಂಬುದು ಈ ಗುಂಪುಗಳು ಕಟ್ಟಿಕೊಂಡಿರುವ ಜಾಲ ಮತ್ತು ಹಲವು ಗುಂಪುಗಳ ಕೆಲಸದ ಸಮನ್ವಯದ ಅಧ್ಯಯನ ಮಾಡಿದರೆ ತಿಳಿಯುತ್ತದೆ. ಈ ಗುಂಪುಗಳ ಮೇಲೆ ಅವುಗಳ ಕೆಲಸದ ಮೇಲ್ವಿಚಾರಣೆ, ಸಮನ್ವಯ ಮಾಡುವ ಸಂಸ್ಥೆಗಳೂ ಇವೆ. ಇವು ಆಗಾಗ ಎಲ್ಲಾ ಗುಂಪುಗಳ ಸಭೆ ಕರೆದು ಅವುಗಳ ಅನುಭವ ಮಾಹಿತಿಗಳ ವಿನಿಮಯ ಮತ್ತು ಸಂಪನ್ಮೂಲಗಳ ಹಂಚಿಕೆ ಮಾಡಿಕೊಳ್ಳುತ್ತವೆ. ಈ ಸಂಸ್ಥೆಗಳ ಮುಖ್ಯ ಕೆಲಸ ವಿದೇಶಿ ನಿಧಿಯನ್ನು 'ಸೂಕ್ತ'ವಾಗಿ ಹಂಚುವುದು.

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು AVARD (Association of Voluntary Agencies for Rural Development) ಈ ರೀತಿಯ ಸಂಸ್ಥೆಗಳು. 60ರ ದಶಕದಿಂದ ಸಕ್ರಿಯವಾಗಿರುವ ಈ ಸಂಸ್ಥೆಗಳು ಬೇರೆ ಬೇರೆ ಕಡೆಗಳಿಂದ ವಿದೇಶಿ ನಿಧಿ ಸ್ವೀಕರಿಸಿ ಗುಂಪುಗಳಿಗೆ ಹಂಚುತ್ತಿದ್ದು ಇಂತಹ ಸಂಸ್ಥೆಗಳಿಗೆ 'ಮಾರ್ಗದರ್ಶಕ' ಮತ್ತು 'ಮಾದರಿ' ಎನ್ನಿಸಿವೆ. 1978 ರಲ್ಲಿ AVARD 35 ಲಕ್ಷ ರೂ. ಗಳಷ್ಟು ವಿದೇಶಿ ನಿಧಿ ಪಡೆದಿದೆ. ಇದನ್ನು ಯಾವ ರೀತಿ ವಿನಿಯೋಗಿಸಲಾಯಿತು ಎಂಬುದರ ಬಗ್ಗೆ ಯಾವುದೇ ಸಾರ್ವಜನಿಕ ಮೇಲುಸ್ತುವಾರಿ ಇಲ್ಲ ಎಂಬುದನ್ನು ಗಮನಿಸಬೇಕು.

ಇದೇ ರೀತಿ ಕ್ಯಾಥೊಲಿಕ್ ಗುಂಪುಗಳ ಮೇಲುಸ್ತುವಾರಿ ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್ (ಬೆಂಗಳೂರು), ಪ್ರಾಟೆಸ್ಟಂಟ್ ಗುಂಪುಗಳಿಗೆ CCPD (Commission on Churches Participation in Development) ಸಂಸ್ಥೆ ನೋಡಿಕೊಳ್ಳುತ್ತಿವೆ.

ಮೇಲುಸ್ತುವಾರಿ ನೋಡುವ ಸಂಸ್ಥೆಗಳು ಸಂಶೋಧನೆ ಮತ್ತು ಮಾಹಿತಿ ಸಂಗ್ರಹಣ ಕೇಂದ್ರಗಳನ್ನು ನಡೆಸುತ್ತಿವೆ. ಈ ಕೇಂದ್ರಗಳು ದೇಶದ ರಾಜಕೀಯ ಸಾಮಾಜಿಕ ಘಟನೆಗಳ ವಿಶ್ಲೇಷಣೆ, ಅಧ್ಯಯನ, ಮುಖ್ಯ ಹೋರಾಟಗಳು ಮತ್ತು ಚಳುವಳಿಗಳ ವಿವರಗಳು (ಅದರಲ್ಲಿರುವ ಕಾರ್ಯಕರ್ತರ ವಿವರ ಸೇರಿದಂತೆ), ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು (ಮುಖ್ಯವಾಗಿ ಎಡ ಪಕ್ಷಗಳಿಗೆ ಸೇರಿದ್ದು) ಬಲಾಬಲಗಳ ವಿಮರ್ಶೆ ಬಗ್ಗೆ ವರದಿಗಳನ್ನು ಧನ ಸಹಾಯ ನೀಡುವ ಸಂಸ್ಥೆಗಳಿಗೆ ಕಳಿಸುತ್ತಿವೆ. ದೇಶದ ರಾಜಕೀಯ ಆರ್ಥಿಕ ವಿಚಾರಗಳಲ್ಲಿ ಮಧ್ಯಪ್ರವೇಶ ಮಾಡಲು ಸಾಮ್ರಾಜ್ಯಶಾಹಿಗಳಿಗೆ ಇದು ಸಿದ್ಧ ಸರಕು ಒದಗಿಸಿ ಕೊಡುತ್ತದೆ. ಇದು ಅತ್ಯಂತ ಅಪಾಯಕಾರಿ ಅಂಶ. ○

ಅಸಂಘಟಿತ ಕಾರ್ಮಿಕರ ಬದುಕಿಗೆ ಆಸರೆ ನೀಡುವ

ಆಶಾಕಿರಣ

ರಾಜ್ಯದ ಅಸಂಘಟಿತ ಕಾರ್ಮಿಕರು ಅಪಘಾತಕ್ಕೊಳಗಾಗಿ ತೊಂದರೆಗೀಡಾದಾಗ, ಅವರಿಗೆ ಅಥವಾ ಅವರನ್ನು ಅವಲಂಬಿಸಿದ ಕುಟುಂಬದವರಿಗೆ ತಕ್ಷಣ ಆರ್ಥಿಕ ನೆರವು ಒದಗಿಸುವ ಆಶಾಕಿರಣ ಯೋಜನೆಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ.

ಅಪಘಾತಗಳು ಹೇಳಿ ಕೇಳಿ ಸಂಭವಿಸುವುದಿಲ್ಲ; ಅತೀವ ಕಷ್ಟನಷ್ಟಗಳನ್ನು, ಅನಿರೀಕ್ಷಿತ ಆರ್ಥಿಕ ಮುಗ್ಗಟ್ಟನ್ನು ತರುತ್ತದೆ. ಕೃಷಿ ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳಲ್ಲಿರದ ಕ್ಷೇತ್ರದ ಕೆಲಸಗಾರರಿಗೆ ಈ ಮಾತು ಅನ್ವಯಿಸುತ್ತದೆ. ಬಹು ಕಾಲ ಪರಿಹಾರ ಯೋಜನೆಗಳ ವ್ಯಾಪ್ತಿಯಿಂದ ಹೊರಗುಳಿದಿರುವ ಅಂತಹ ಜನರ ಸಂಕಷ್ಟ ನಿವಾರಿಸಲು ಕರ್ನಾಟಕ ಸರ್ಕಾರ ವಿಶಿಷ್ಟ ಯೋಜನೆಯೊಂದನ್ನು ರೂಪಿಸಿದೆ. ಈ ಯೋಜನೆಯನ್ವಯ ಅಪಘಾತದ ಬಗೆಯನ್ನು ಪರಿಗಣಿಸಿ ನೊಂದವರಿಗೆ ಆರ್ಥಿಕ ಪರಿಹಾರಕ್ಕೆ ಅವಕಾಶವಿದೆ.

ಅರ್ಹತೆ

16 ರಿಂದ 65 ವರ್ಷಗಳ ಒಳಗಿನ, ವಾರ್ಷಿಕ ಆದಾಯ 6,000 ರೂ. ಗಳಿಗೆ ಮೀರದ ಈ ಮುಂದೆ ತಿಳಿಸಿದ ಕಸುಬುಗಳ ಶ್ರಮಜೀವಿಗಳು ಮತ್ತು ಅವರ ಅವಲಂಬಿಗಳು ಈ ಯೋಜನೆಯನ್ವಯ ಆರ್ಥಿಕ ನೆರವು ಪಡೆಯುತ್ತಾರೆ. ಕಾರ್ಮಿಕರ ಪರಿಹಾರ ನಿಧಿ ಕಾಯಿದೆಯನ್ವಯ ಆರ್ಥಿಕ ಪರಿಹಾರ ಪಡೆದಿರುವವರು ಆಶಾಕಿರಣ ಯೋಜನೆಗೆ ಅರ್ಹರಾಗುವುದಿಲ್ಲ.

ಕೃಷಿ ಕಾರ್ಮಿಕರು, ಬೆಸ್ತರು, ಬೀಡಿ ಕಾರ್ಮಿಕರು, ಹೆಂಡ ಇಳಿಸುವವರು, ಧೋಬಿಗಳು, ಮೋಚಿಗಳು, ಬಡಗಿಗಳು, ಗಾಡಿ ತಯಾರಿಸುವವರು, ಗ್ರಾಮಾಂತರ ಕಮ್ಮಾರರು, ಅಕ್ಕಸಾಲಿಗರು, ಲೋಹ ಕೆತ್ತನೆಗಾರರು, ಪ್ರಾಣಿಗಳು ಎಳೆಯುವ ವಾಹನಗಳ ಚಾಲಕರು, ಸೈಕಲ್ ರಿಕ್ಷಾ ಎಳೆಯುವವರು, ಬುಟ್ಟಿ ಹೆಣೆಯುವವರು, ಜಲ್ಲಿ ಒಡೆಯುವವರು, ಮಾಂಸ ಸಿದ್ಧಪಡಿಸುವವರು, ಗಾರೆ ಕೆಲಸಗಾರರು, ಹೆಂಚು ಕೆಲಸಗಾರರು, ಗುಡಿಸಲು ಕಟ್ಟುವವರು, ಛಾವಣಿ ಹೊದಿಸುವವರು, ಬಾವಿ ತೋಡುವವರು, ಕೈ ಮಗ್ಗ ನೇಕಾರರು, ಲೋಕೋಪಯೋಗಿ ಮತ್ತು ನೀರಾವರಿ ಯೋಜನೆಗಳ ಎನ್. ಎಂ. ಆರ್. ಕೆಲಸಗಾರರು ಹಾಗೂ ಗುಡ್ಡಗಾಡಿನ ಕಾರ್ಮಿಕರು.

ವ್ಯಾಪ್ತಿ

ಮೇಲೆ ಕಾಣಿಸಿರುವ ಶ್ರಮಜೀವಿಗಳು ದುಡಿಯುವಾಗ ಅಪಘಾತಕ್ಕೀಡಾಗಿ ಶಾರೀರಿಕ ಹಾನಿಗೊಳಗಾದಲ್ಲಿ ಅಂತಹವರಿಗೆ ಆಶಾಕಿರಣ ಯೋಜನೆಯಿಂದ ಆರ್ಥಿಕ ನೆರವು ಸಿಗುತ್ತದೆ.

ರೈಲು ಮತ್ತು ರಸ್ತೆ ಅಪಘಾತಗಳು, ವಿದ್ಯುಚ್ಛಕ್ತಿ ತಗಲಿ ಹಾನಿ, ಹಾವು ಕಚ್ಚುವಿಕೆ, ನೀರಿನಲ್ಲಿ ಮುಳುಗಿ ಸಾಯುವುದು, ಬೆಂಕಿ ಆಕಸ್ಮಿಕ, ಮರದ ಮೇಲಿಂದ ಬೀಳುವುದು. ಕ್ರೂರ ಮೃಗಗಳಿಂದಾಗುವ ಅಪಘಾತ ಮುಂತಾದ ಆಕಸ್ಮಿಕ ಅನಾಹುತದಲ್ಲಿ ನೊಂದವರಿಗೆ ಈ ಪರಿಹಾರ ಲಭ್ಯ.

ಪರಿಹಾರ

ಈ ಯೋಜನೆಯಂತೆ ಅಪಘಾತದಲ್ಲಿ ಕಾರ್ಮಿಕರ ಒಂದು ಅಂಗಹೀನವಾದರೆ, 2,500 ರೂಪಾಯಿ ಎರಡು ಅಂಗಗಳ ಶಾಶ್ವತ ನಷ್ಟ ಉಂಟಾದರೆ 4,000 ರೂಪಾಯಿ ಹಾಗೂ ಅಪಘಾತದಲ್ಲಿ ಕಾರ್ಮಿಕನ ಮರಣ ಸಂಭವಿಸಿದರೆ ವಾರಸುದಾರರಿಗೆ 5,000 ರೂಪಾಯಿಗಳ ಪರಿಹಾರ ನೀಡಲಾಗುತ್ತದೆ.

ಪಡೆಯುವ ಬಗೆ

ಅಪಘಾತಕ್ಕೀಡಾದ ಕಾರ್ಮಿಕರು ಇಲ್ಲವೆ ಅವರು ಮೃತಿ ಹೊಂದಿದರೆ ಅವರ ವಾರಸುದಾರರು ಅಂದರೆ ತಂದೆ, ತಾಯಿ, ಗಂಡ, ಹೆಂಡತಿ, ಆಶ್ರಿತ ಹಿರಿಯ ಮಗ, ಮಗಳು, ಹಿರಿಯ ಸಹೋದರ ಸಹೋದರಿ ಅಪಘಾತ ಸಂಭವಿಸಿದ 30 ದಿನಗಳ ಒಳಗಾಗಿ ನಮೂನೆ ನಂ. 1ರಲ್ಲಿ ಸೂಚನೆಯನ್ನು ಕೊಡಬೇಕು ಮತ್ತು 3 ತಿಂಗಳೊಳಗಾಗಿ ಅರ್ಜಿಯನ್ನು ನಮೂನೆ 2ರಲ್ಲಿ ಗ್ರಾಮಾಂತರ ಪ್ರದೇಶವಾದಲ್ಲಿ ಆಯಾ ತಾಲ್ಲೂಕಿನ ತಹಸೀಲ್ದಾರ್‌ರವರಿಗೆ, ನಗರ ಪ್ರದೇಶವಾದರೆ ಪುರಸಭೆಯ ಮುಖ್ಯಾಧಿಕಾರಿ ನಗರ ಸಭೆಯ ಕಂದಾಯ ಅಧಿಕಾರಿಗಳಿಂದ ಅರ್ಜಿಯನ್ನು ಸಲ್ಲಿಸಬೇಕು. ವೈದ್ಯಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರವನ್ನೂ ಈ ಅರ್ಜಿಯೊಂದಿಗೆ ಲಗತ್ತಿಸಿರಬೇಕು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳಿಗಾಗಿ ನಿಮ್ಮ ತಾಲ್ಲೂಕು ತಹಸೀಲ್ದಾರರು, ಪುರಸಭೆಯ ಮುಖ್ಯಾಧಿಕಾರಿಗಳು ಇಲ್ಲವೇ ಮಹಾನಗರ ಪಾಲಿಕೆಯ ಕಂದಾಯ ಅಧಿಕಾರಿಗಳನ್ನು ಅಥವಾ ಹತ್ತಿರದ ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ.

ಕರ್ನಾಟಕ ವಾರ್ತೆ

ಹೆಚ್ಚಿನ ವಿವರಗಳಿಗೆ ಬರೆಯಿರಿ :— ಆಯುಕ್ತರು ಕಾರ್ಮಿಕ ಇಲಾಖೆ. ವಿ ಐ ಎಸ್ ಎಲ್ ಕಟ್ಟಡ, ಜೆ.ಸಿ. ರಸ್ತೆ, ಬೆಂಗಳೂರು-2

ದುಡಿಯುವ ಜನರಿಗೆ ಬದ್ಧವಾದ ಒಂದು ದಶಕ


ಮೇ ದಿನದಲ್ಲಿ ಪ್ರತಿಜ್ಞಾ ನವೀಕರಣ

ಎಡರಂಗದ ಸರಕಾರವು 1977ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ದುಡಿಯುವ ಜನರ ಹಕ್ಕುಗಳನ್ನು ದೃಢವಾಗಿ ಸಂರಕ್ಷಿಸುತ್ತ ಬಂದಿದೆ. ಪಶ್ಚಿಮ ಬಂಗಾಳದ ಶ್ರಮಜೀವಿ ಜನ ಸಮುದಾಯಗಳು ಹೊಸ ಆಶಾಭಾವನೆ ಮತ್ತು ಆತ್ಮವಿಶ್ವಾಸಗಳ ರುಚಿಯನ್ನು ಅನುಭವಿಸಲು ಸಾಧ್ಯವಾಗಿದೆ ಇದು ಕೆಲಸಗಾರ ಜನವಿಭಾಗಗಳೊಳಗಿನ ಐಕ್ಯವನ್ನೂ ಸೌಹಾರ್ದತೆಯನ್ನೂ ಸ್ಥಾಪಿಸುವತ್ತ ಐತಿಹಾಸಿಕ ಮೇ ದಿನದ ಸ್ಫೂರ್ತಿದಾಯಕ ಕರೆಯನ್ನು ಕಾರ್ಯಗತಗೊಳಿಸುವತ್ತ ಮುನ್ನಡೆಸಿದೆ.

ಟ್ರೇಡ್ ಯೂನಿಯನ್ ಹಕ್ಕುಗಳ ಮತ್ತು ಗೌರವದ ರಕ್ಷಣೆ, ಅನೇಕ ಮುಖ್ಯ ಕೈಗಾರಿಕೆಗಳಲ್ಲಿ ದ್ವಿಪಕ್ಷೀಯ ಮತ್ತು ತ್ರಿಪಕ್ಷೀಯ ಒಪ್ಪಂದಗಳು, ಕೆಲಸಗಾರರ ಹಿತದೃಷ್ಟಿಯಿಂದ ಕನಿಷ್ಠ ವೇತನ ಕಾಯಿದೆಯ ಅನುಷ್ಠಾನ, ಕೃಷಿ ಕೆಲಸಗಳ ವೇತನ ಮತ್ತು ಸಾಮಾಜಿಕ ಭದ್ರತೆಗಳ ಗಣನೀಯ ಹೆಚ್ಚಳ, ಇವು ಕಾರ್ಮಿಕ ರಂಗದಲ್ಲಿ ಒಂದು ದಶಕದ ಕೆಲವು ಮುಖ್ಯ ಸಾಧನೆಗಳಾಗಿವೆ. ಭವಿಷ್ಯತ್ತಿನಲ್ಲಿ ಪಶ್ಚಿಮ ಬಂಗಾಳದ ಉತ್ತಮ ಆರ್ಥಿಕತೆಗೆ ದಾರಿ ಸುಗಮಗೊಳಿಸುವ ದಿಶೆಯಲ್ಲಿ ಒಂದು ಔದ್ಯಮಿಕ ಪರಿಸರವನ್ನು ನಿರ್ಮಿಸಲಾಗಿದೆ.

ಪಶ್ಚಿಮ ಬಂಗಾಳದ ಎಡ ರಂಗದ ಸರಕಾರವು ಜನ ಪರವಾದ ಸೃಜನಾತ್ಮಕತೆಯಿಂದ ಶ್ರಮಜೀವಿ ವರ್ಗಕ್ಕೊಂದು ಉತ್ತಮ ಭವಿಷ್ಯತ್ತನ್ನು ನಿರೀಕ್ಷಿಸುತ್ತದೆ

—ಪಶ್ಚಿಮ ಬಂಗಾಳ ಸರಕಾರ


A decade of commitment to the working people
Renewal of pledge on May Day
GOVERNMENT OF WEST BENGAL
ADMAN

REG. No. BGW-148 MAG [2] PRB DECR 319/78-79

Printed and Published by P Ramachandra Rao on behalf of the Communist Party of India (Marxist) Karnataka Saate Committee, Editiorial and Manageriel Office L 56, K. V. Temple St.eet, Sultanpet, Bangalore-560 054
EDITOR : P. RAMACHANDRA RAO, MANAGING EDITOR : N. K. UPADHYAYA Phone : 75331